TIGHT BINDING BOOK

TEXT PROBLEM
WITHIN THE
BOOK ONLY
TEXT FLY WITHIN
THE BOOK ONLY

UNIVERSAL LIBRARY
OU_200084
UNIVERSAL LIBRARY

OSMANIA UNIVERSITY LIBRARY

Call No. K. 1/K4/N. Accession No. K 2658

Author

Title

This book should be returned on or before the date last marked below

ತಂದವರು: ಜೋಶಿ ಶಂಕರರಾಯರು

ಮಕ್ಕಳ ಹಿಗ್ಗು

೨

# ನಗೆಯ ಬುಗ್ಗೆ

ಅಥವಾ

## ನಾಗಣ್ಣನ ಕತೆಗಳು

ಬರೆದವರು:

ಪ್ರಾ. ಎನ್. ಎಂ. ಕುಲಕರ್ಣಿ M. A.

ಕನ್ನಡ ಸರಸ್ವತಿ ಭಾಂಡಾಗಾರ
— ಧಾರವಾಡ

ಬೆಲೆ ೦-೮-೦

# ನಮ್ಮ ಪ್ರಕಟನೆಗಳು.

## ಮನೆ ಬೆಳಕು:

### ೧. ಬಾಳಿನ ಗುಟ್ಟು ೧-೧೨-೦

ಜಗತ್ತಿನಲ್ಲಿಯೇ ಅಪೂರ್ವವೆನಿಸಿ ವಿಚಾರ ಕ್ರಾಂತಿಯನ್ನು ಮಾಡಿದ ಎಡ್ಲರನ ಈ ಗ್ರಂಥವು ಕನ್ನಡದಲ್ಲಿ ಪ್ರಕಟವಾದುದು ಒಂದು ನಮ್ಮ ಭಾಗ್ಯ. ಓದಿ ಬಾಳಿನಲ್ಲಿ ಬೆಳಕು ಪಡೆಯದವರು ದುರ್ದೈವಿಗಳೇ ಸರಿ.

## ಹಾದಿಯ ಹೊತ್ತಿಗೆ:

### ೧. ದಾರಿಯ ಬುತ್ತಿ ೦-೪-೦

—ಇದೊಂದು ಅಮೂಲ್ಯ ರತ್ನ—ಕರ್ಮವೀರ.

—ಇದರಲ್ಲಿ ಮಾತುಗಳು ಮುತ್ತು ಮಾಣಿಕ್ಯಗಳಂತಹವು.

hecked 1969

—ಶ್ರೀ ಪರ್ಡೆಕರ ಮಂಜಣ್ಣನವರು.

—ಇದು ವ್ಯವಹಾರ ಜ್ಞಾನದ ಭಾಂಡಾರ...ಜ್ಞಾನದ ಬುತ್ತಿ

—ಹುಬ್ಬಳ್ಳಿ ಗಾಝೆಟ್

### ೨. ಶರ-ಪಂಜರ ೦-೩-೦

—ಒಂದು ಸುಂದರ ರೂಪಕ...ಹೃದಯಂಗಮವಾದ ದೃಶ್ಯವಾಗಿದೆ. ಮೆಚ್ಚುಗೆಗೆ ಪಾತ್ರವಾಗಿದೆ. —ಪ್ರಭಾತ, ಮಂಗಳೂರ

—a novel idea in Kannada play-writing. We look forward to the coming publications of the Bhandagar. P. E. N.

## ಮಕ್ಕಳ ಹಿಗ್ಗು:

### ತಂತ್ರಗಾರ ಕರಟಕರಾಯ ೦-೧೨-೦

—ಭಾಷಾ ಪ್ರೇಮಿಗಳೆಲ್ಲರೂ ಈ ಗ್ರಂಥಮಾಲೆಗೆ ಬೆಂಬಲಕೊಡುವುದು ಅವಶ್ಯ. ವಿದ್ಯಾ ಇಲಾಖೆಯವರೂ ಈ ಪುಸ್ತಕಗಳನ್ನು ಉಪಪಠ್ಯಪುಸ್ತಕಗಳಾಗಿ ಶಾಲೆಗಳಲ್ಲಿ ಉಪಯೋಗಿಸಲು ಅನುವು ಮಾಡಿಕೊಡಬೇಕು. —ರಾಷ್ಟ್ರಬಂಧು, ಮಂಗಳೂರ

—ಇಂಥ ಪುಸ್ತಕಗಳು ಕನ್ನಡದಲ್ಲಿ ತೀರ ವಿರಳ. ಭಾಷೆ, ವಿಚಾರ, ಅರ್ಥ ಈ ಯಾವತ್ತೂ ದೃಷ್ಟಿಯಿಂದಲೂ ಪುಸ್ತಕವು ಅಭ್ಯಸನೀಯವಾಗಿದ್ದು ಹೈಸ್ಕೂಲಿನ ೩-೪-೫ ಇಯತ್ತೆಗಳಿಗೆ ಯೋಗ್ಯವಾಗಿದೆ. —ಕರ್ಮವೀರ.

—ಪ್ರತಿಯೊಬ್ಬ ಕನ್ನಡಿಗನೂ ತನ್ನ ಮಕ್ಕಳ ಕೈಗೆ ಈ ಸತ್ವಯುಕ್ತ ಮಿಠಾಯಿ (ಪುಸ್ತಕ) ಕೊಡಲೇಬೇಕು. —ಶಿಕ್ಷಕ ಮಿತ್ರ

# ಮುನ್ನುಡಿ

❋

ಮಕ್ಕಳ ಹಿಗ್ಗಿನ ೨ನೆಯ ಹೊತ್ತಿಗೆಯಿದು. ಮಕ್ಕಳಲ್ಲಿ ಸುಪ್ತವಾಗಿ ಇರುವ ಅಂದ ಅಂದದ ಭಾವನೆ, ವಿಚಾರಗಳನ್ನು ಎಚ್ಚರಿಸಿ ಹಿಗ್ಗಿಸುವುದೆ ಈ ಮಾಲೆಯ ಗುರಿಯಾಗಿದೆ.

ಮೊದಲನೆಯ ಹೊತ್ತಿಗೆಯಾದ ಕರಟಕನ ಕತೆಯು ಚದರು ನುಡಿ ಮತ್ತು ಮಾತಿನ ಮೋಡಿ ಮಕ್ಕಳ ಒಂದು ಬಗೆಯ ಹಿಗ್ಗಿಗೆ ಕಾರಣ ವಾದರೆ ಇವು ಈ ನಾಗಣ್ಣನ ಕತೆಗಳು ಇನ್ನೊಂದು ಬಗೆಯಾಗಿ ಅವರ ಹೃದಯವನ್ನು ಹದಗೊಳಿಸುವುವು. ಸೂಕ್ಷ್ಮ ನಗೆಯು ಈ ಕತೆಗಳ ವೈಶಿಷ್ಟ್ಯ. ಇದು ಸುಮ್ಮನೆ ಕಂಡುದಕ್ಕೆ ಮೂಗುಮುರಿವ ನಿಂದಕರ ನಗೆಯಲ್ಲ. ಈ ನಗೆಯಲ್ಲಿ ಒಂದು ವಿಚಾರ ಪ್ರಚೋದಕ ಗುಣವಿದೆ. ಔಚಿತ್ಯ, ರಸಿಕತೆಯನ್ನು ಕಲಿಸುವ ಬಗೆಯಿದೆ. ಇದಕ್ಕೆ ೧ನೆಯ ಮತ್ತು ೨ನೆಯ ಕತೆಗಳೆ ಸಾಕ್ಷಿ. ತುಂಟರಿಗೆ ತುಂಟರು ಗಂಟು ಬಿದ್ದರೆ ಉಂಟಾಗುವ ವಿನೋದಕ್ಕೆ ಮೂರನೆಯ ಕತೆಯು ನಿದರ್ಶಕ ವಾಗಿದೆ. ನಾಗಣ್ಣನ ಕತೆಗಳನ್ನು ಬರೆದು, ಪ್ರಾಚಾರ್ಯ ಶ್ರೀ. ಕುಲಕರ್ಣಿ ಯವರು ಕನ್ನಡದಲ್ಲಿ ಒಂದು ಹೊಸ ಬಗೆಯ ಕತೆಗಳನ್ನು ತಂದ ಶ್ರೇಯಸ್ಸಿಗೆ ಪಾತ್ರರಾಗಿದ್ದಾರೆ. ಕರ್ಣಾಟಕದ ಹೊರಗೆ ಹೋದ ಮೇಲೂ, ಕನ್ನಡದಲ್ಲಿ ಆಸ್ಥೆಯನ್ನಿಟ್ಟು, ಅದರ ಏಳ್ಗೆಗಾಗಿ ತಮ್ಮಿಂದಾದ ನೆರವನ್ನು ಕೊಡುತ್ತಿರುವುದು ತಮ್ಮ ಕರ್ತವ್ಯವೆಂದು ನೆರೆನಂಬಿರುವ ಅಲ್ಪ ಸ್ವಲ್ಪ ಉಚ್ಚ ವಿಚಾರಿಗಳಾದ ಸದ್ಗೃಹಸ್ಥರಲ್ಲಿ ಪ್ರಾ. ಕುಲಕರ್ಣಿ ಯವರು ಒಬ್ಬರಾಗಿದ್ದಾರೆ. ಕಾಶಿಯ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಇಂಗ್ರೇಜಿ ಸಾಹಿತ್ಯದ ಪ್ರಾಚಾರ್ಯರಾಗಿದ್ದು ಕನ್ನಡಕ್ಕಾಗಿ ತುಂಬ ಕೆಲಸಮಾಡುತ್ತಿದ್ದುದು ಅಭಿನಂದನೀಯವಾಗಿದೆ. ಇವರು ನಮ್ಮ

ಮಾಲಿಗೆ ತಮ್ಮ ಕತೆಗಳನ್ನು ಒದಗಿಸಿ ಕೊಟ್ಟುದಕ್ಕಾಗಿ ನಾವು ಅವರಿಗೆ ಹಂಗಿಗರಾಗಿದ್ದೇವೆ. ಜಯಂತಿಯ ಸಂಪಾದಕರು ಪಡಿಯಚ್ಚುಗಳನ್ನು ಕೊಟ್ಟುದಕ್ಕಾಗಿ ಅವರಿಗೆ ನಮ್ಮ ವಂದನೆಗಳು.

ಹಲವು ಮಾನ್ಯ ಪತ್ರಿಕಾಕರ್ತರೂ, ತಜ್ಞ ಶಿಕ್ಷಕರೂ ನಮ್ಮ ಮಕ್ಕಳ ಹಿಗ್ಗಿನ ಮಾಲೆಯ ಮೊದಲನೆಯ ಪುಸ್ತಕಕ್ಕೆ ಸಂತೋಷದಿಂದ 'ಮಕ್ಕಳಿಗೆ, ಅದರಂತೆ ತರುಣರಿಗೂ ವಿಶೇಷ ಉಪಯುಕ್ತವಾಗಿದೆ,' ಯೆಂದು ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಪ್ರೋತ್ಸಾಹಿಸಿದ್ದಕ್ಕಾಗಿ ಅವರಿಗೆ ನಾವು ಕೃತಜ್ಞರಾಗಿದ್ದೇವೆ. ಇದೇ ಮೇರೆಗೆ ಈ 'ನಾಗಣ್ಣನ ಕತೆಗಳೂ' ತಮ್ಮ ಸುಪರಿಣಾಮಿಯಾದ ವಿನೋದನ ಶಕ್ತಿಯಿಂದ ಎಲ್ಲರಿಗೂ ಬೇಕಾಗದೆ ಇರಲಾರವೆಂದು ಹಾರೈಸುತ್ತೇವೆ.

'ಮಕ್ಕಳ ಹಿಗ್ಗಿ'ನಂತೆ 'ಮಗುವಿನ ನಲಿವು' ಎಂಬ ಹೊತ್ತಿಗೆಗಳೂ ಬೇಗನೆ ಬರಲಿವೆ. ಮೊದಲನೆಯವು ಕನ್ನಡ ನಾಲ್ಕನೆಯ ಇಯತ್ತೆಯಿಂದ ಮುಂದಿನವರಿಗೂ, ಎರಡನೆಯವು ಬಾಲಕರ ವರ್ಗದಿಂದ ೪ನೆಯ ಇಯತ್ತೆಯ ವರೆಗಿನವರಿಗೂ ಉಪಯುಕ್ತವಾಗುವ ದೃಷ್ಟಿಯಿಂದ ಬರೆಯಲಾಗುವುವು.

ಕನ್ನಡದ ತಿರುಳನ್ನು ತಿಳಿಸುವ, ಸದ್ ವಿಚಾರ, ಭಾವನೆಗಳನ್ನು ಅರಳಿಸುವ ಟಿಪ್ಪಣಿಗಳ ನೆರವನ್ನೀವ ಮಕ್ಕಳ ಪುಸ್ತಕಗಳು ಇವೇ ಮೊದಲು ಎಂದರೂ ಸಲ್ಲುವುದು. ಇಂತಹ ಪುಸ್ತಕಗಳನ್ನು ಜನರ ಪ್ರೋತ್ಸಾಹನವು ದೊರೆತಂತೆ ಹೆಚ್ಚು ಹೆಚ್ಚಾಗಿ, ಅಂದಚೆಂದವಾಗಿ ಪ್ರಕಟಿಸಬೇಕೆಂದಿದ್ದೇವೆ.

ಕೆ. ಗೋವಿಂದರಾಯರು.

# ಮೊದಲ್ ನುಡಿ

ನಾಗಣ್ಣನನ್ನು ಕಂಡದ್ದು ಎಂದೋ ನನಗೆ ನೆನಪಿಲ್ಲ; ಅವನಿಂದ ಮೊದಲು ಕೇಳಿದ್ದು ಮಾತ್ರ ಸುಮಾರು ನಾಲ್ಕು ವರ್ಷಗಳ ಪೂರ್ವದಲ್ಲಿ. ಅವನದೊಂದು ದೈವಿಕ ವಿಶಿಷ್ಟತೆ; ನೆನಸಿದಾಗ ಬಂದು ಬಿಡುತ್ತಾನೆ. ಅಲ್ಲದೆ ಅವನು ಅಲ್ಪಸಂತುಷ್ಟ; ಒಂದು ಕಪ್ಪು ಚಹವನ್ನು ಕೊಟ್ಟರೆ ಸಾಕು, ಕತೆಯನ್ನೆ ಪ್ರಾರಂಭಿಸಿ ಬಿಡುತ್ತಾನೆ. ನನ್ನದು ಶಿಕ್ಷಕವೃತ್ತಿ; ಕಲಿಸುವ ಸಂಭ್ರಮದಲ್ಲಿ ಕಲಿಯುವುದನ್ನೇ ಮರೆಸಿ ಬಿಡುವ ಮಹಾವೃತ್ತಿಯದು. ನಾಗಣ್ಣನಿಂದ ಕೇಳಿದ ಕತೆಗಳು ಈ ಸತ್ಯವನ್ನು ನನ್ನ ಮನಕ್ಕೆ ತಂದು ಕೊಟ್ಟುವು. ಅವುಗಳನ್ನು ಕೇಳುತ್ತ ಹೋದಹಾಗೆ ನನಗೆ ಒಂದು ಬಗೆಯ ಸೊಗಸೆನಿಸಿತು; ರಂಜನೆಯಾಯಿತು. ಹತ್ತು ಮಂದಿಯಲ್ಲಿ ಹಂಚಿಹೋದರೂ ಹೆಚ್ಚಾಗುತ್ತ ಹೋಗುವ ನಿಧಿಯು ರಂಜನೆಯದೇ. ಆದುದರಿಂದ ನಾಗಣ್ಣನು ಹೇಳಿದ ಕತೆಗಳನ್ನು ನಾನು ಕೇಳಿಕೊಂಡು ಬರೆದು 'ಜಯಂತಿ' ಯವರಿಗೆ ಕಳುಹಿದೆ. ಅವರೇ ಈ ಹಂಚುವ ಕಾರ್ಯದ ಹೊಣೆಗಾರರು. ವಾಚಕರು ವ್ಯಕ್ತಪಡಿಸಬಹುದಾದ ಧನ್ಯವಾದವು ಅವರಿಗೆ ಸಲ್ಲತಕ್ಕುದು.

ನಾಗಣ್ಣನಿಂದ ನಾನು ಕೇಳಿದ ಕತೆಗಳು ಅನೇಕವಾಗಿವೆ. ಸದ್ಯ ಗ್ರಂಥರೂಪದಲ್ಲಿ ಬಂದಿರುವ ಈ ಮೂರು ಕತೆಗಳಲ್ಲಿ ಮೊದಲಿನ ಎರಡು 'ಜಯಂತಿ' ಯಲ್ಲಿ ಬಂದಿವೆ. ಮೂರನೆಯದು ನಾಗಣ್ಣನಿಂದ ಹೊಸದಾಗಿ ಕೇಳಿದುದು. ಇದು ಪ್ರಕಟವಾದುದು ಇದೇ ಮೊದಲು.

ಮಕ್ಕಳ ಹಿಗ್ಗಿನ ಸಾಹಿತ್ಯ ಮಾಲೆಯಲ್ಲಿ ನಾಗಣ್ಣನ ಕತೆಗಳನ್ನು ಪೋಣಿಸುವ ಕೆಲಸವನ್ನು ಶ್ರೀ. ಶಂ. ಬಾ. ಜೋಶಿ ಮತ್ತು ಶ್ರೀ. ಕೆ. ಗೋವಿಂದರಾಯರು ಮಾಡಿದರು. ಈ ಸಾಹಿತ್ಯಮಾಲೆಯ ಯತ್ನವು ಸ್ತುತ್ಯಾರ್ಥವಾದುದು. ಏಕೆಂದರೆ ಮಕ್ಕಳಲ್ಲಿ ಓದುವ ರುಚಿಯನ್ನು ಹೆಚ್ಚಿಸಬೇಕೆಂಬುದೇ ಈ ಸಾಹಿತ್ಯ ಪ್ರಕಟನೆಯ ಆದ್ಯ ಧ್ಯೇಯ ವಾಗಿದೆ. ಲೋಕವು ಭಿನ್ನರುಚಿಯುಳ್ಳದಾಗಿದ್ದರೂ ಸರ್ವರಿಗೂ ರುಚಿಸುವುದು ಕಥಾಸಾಹಿತ್ಯ. ಪತ್ರ್ಯ ಪುಸ್ತಕಗಳ ಅಗತ್ಯವಾಚನವು ಮಕ್ಕಳಿಗೆ ರುಚಿಸಿ, ಅವರು ಅದನ್ನು ಸ್ವಾಗತಿಸುವುದು ಅತಿ ವಿರಳ. ಸ್ವಾಗತವಿಲ್ಲದ ವಾಚನವು, ಅನಾಹುತ ಅತಿಥಿಗೆ ಸತ್ಕಾರವಿತ್ತಂತೆ. The best way to proscribe a book is to prescribe it. ಎಂದು ನನ್ನ ಸಹ ಶಿಕ್ಷಕರೊರ್ವರ ಅಭಿಪ್ರಾಯ! ವಾಚನಾಭಿರುಚಿಯು ಬೆಳೆಯಬೇಕಾದರೆ ಮಕ್ಕಳಿಗೆ ರುಚಿಸುವ ಸಾಹಿತ್ಯವನ್ನು ದೊರಕಿಸಿ ಕೊಡುವುದು ಹಿರಿಯರ ಹೊಣೆ. ಅಂಥ ಹೊಣೆಯನ್ನು ಕಿಂಚಿತ್ತಾದರೂ ಹಗುರು ಮಾಡಿದರೆ 'ಮಕ್ಕಳ ಹಿಗ್ಗು' ತನ್ನ ಧ್ಯೇಯವನ್ನು ಸಫಲ ಮಾಡಿಕೊಂಡಂತಾಗುವುದು.

ವಾಚಕರಿಗೆ ನಾಗಣ್ಣನ ಪರಿಚಯಮಾಡಿ ಕೊಟ್ಟುದಕ್ಕೆ 'ಮಕ್ಕಳ ಹಿಗ್ಗು' ಮತ್ತು 'ಜಯಂತಿ'ಯ ಸಂಪಾದಕರಿಗೆ ಅವನ ಪರವಾಗಿ ನಾನು ಧನ್ಯವಾದಗಳನ್ನು ಸಲ್ಲಿಸುವೆನು,

ಹಿಂದೂ ವಿಶ್ವವಿದ್ಯಾಲಯ ಕಾಶೀ } ಎನ್. ಎ ಕರ್ಣಿ
೧-೬-೧೯೪೩

# ನಮ್ಮೂರ ನಾಗಣ್ಣ

—:ooo:—

## ೧. ದೇವಲೋಕದ ದಂಪತಿಗಳು

ನಮ್ಮೂರ ನಾಗಪ್ಪ ಉದ್ಯೋಗ ನಿವೃತ್ತನಾದ ಅಂಚೆಯ ಸಿಪಾಯಿ. ಹನ್ನೆರಡು ರೂಪಾಯಿಗಳ ವರ್ಷಾಶನದಿಂದ ತನ್ನ ಜೀವಮಾನವನ್ನು ಸಾಗಿಸುತ್ತಿದ್ದ. ತಾರುಣ್ಯದಲ್ಲಿಯೇ ಹೆಂಡತಿಯು ತೀರಿಕೊಂಡುದ್ದರಿಂದಲೂ, ಪುನಃ ಮದುವೆಮಾಡಿಕೊಳ್ಳದ್ದರಿಂದಲೂ, ಮನೆಯಲ್ಲಿ ತಾನೇ ತಾನು, ಮತ್ತು ಪ್ರೀತಿಯಿಂದ ಸಾಕಿದ ಡಿಕ್ಕಿ. ನಾಗಪ್ಪನು ಪ್ರಾಣಿಪ್ರಿಯ. ಡಿಕ್ಕಿ ಸಣ್ಣ ಕುನ್ನಿಯಿದ್ದಾಗ ಅನೇಕ ಓಣಿಯ ನಾಯಿಗಳು ಅದರ ಬೆನ್ನುಹತ್ತಿ ಹಿಂಸಿಸುತ್ತಿದ್ದವು. ಒಂದು ದಿನ ನಾಗಪ್ಪ ಪತ್ರ ಹಂಚುವ ಕೆಲಸ ಮುಗಿಸಿ ಮನೆಗೆ ಬರುತ್ತಿರುವಾಗ ಡಿಕ್ಕಿ ತೇಕುತ್ತ ಓಡುತ್ತಿತ್ತು. ಅದರ ಹಿಂದಿನಿಂದ ನಾಲ್ಕಾರು ನಾಯಿಗಳು ಬೊಗಳುತ್ತ ಬೆನ್ನುಹತ್ತಿದ್ದವು. ನಾಗಪ್ಪನಿಗೆ ಇದನ್ನು ಕಂಡು ಕನಿಕರಹುಟ್ಟಿ ಡಿಕ್ಕಿಯನ್ನು ತನ್ನ ಮನೆಗೆ ಕರೆದುಕೊಂಡು ಹೋದ. ಅಂದಿನಿಂದ ಇಂದಿನ ವರೆಗೆ ಡಿಕ್ಕಿ ಅವನಲ್ಲಿಯೇ ಇದ್ದಿತು. ಮಗನಿಗಿಂತಲೂ ಹೆಚ್ಚು ಪ್ರೀತಿ ಡಿಕ್ಕಿಯ ಮೇಲೆ ನಾಗಪ್ಪನದು. ಅವನು ಎಲ್ಲಿ ಹೋದರೂ ಡಿಕ್ಕಿ ಬೆನ್ನ ಹಿಂದೇ ಇರುತ್ತಿದ್ದಿತು.

ನೌಕರಿಯಿಂದ ನಿವೃತ್ತನಾದಂದಿನಿಂದ ನಾಗಪ್ಪನು ನಮ್ಮೂರಿನಲ್ಲಿ ಬಂದು ವಾಸಮಾಡುತ್ತಿದ್ದ. ಬೇರೆ ಯಾವ ಉದ್ಯೋಗವನ್ನು ಮಾಡ

ಬೇಕೆಂಬುದು ತಿಳಿಯದೇ ತನ್ನ ಬೇಜಾರು ಕಳೆದುಕೊಳ್ಳಲಿಕ್ಕೆ ನಾಗಪ್ಪ ತನ್ನದೇ ಆದ ಒಂದು ದೈನಿಕ ಪರಿಪಾಟಿಯನ್ನು ಅನುಸರಿಸುತ್ತಿದ್ದ. ಅದೇನೆಂದರೆ, ದಿನಾಲು ಬೆಳಗಿನಲ್ಲಿ ಎದ್ದವನೆ ಡಿಕ್ಕಿಯನ್ನು ಕಟ್ಟಿಕೊಂಡು ನಮ್ಮೂರಿನಲ್ಲಿ ಹೆಸರುಗೊಂಡಿರುವ ಒಂದು "ವಿಶ್ರಾಂತಿ ಗೃಹ" ಕ್ಕೆ



ಹೋಗುತ್ತಿದ್ದ. ಅಲ್ಲಿ ತನ್ನ ಮತ್ತು ಡಿಕ್ಕಿಯ ಚಹಾಪಾನ ಮುಗಿದ ಕೂಡಲೆ ಎಲೆಯ ಚಂಚಿಯನ್ನು ಬಿಚ್ಚಿ, ಒಂದು ಮೂಲೆಯಲ್ಲಿಟ್ಟು ಮುಕ್ಕಾಲು ಮಣೆಯ ಮೇಲೆ ಕುಳಿತುಕೊಂಡು ಸಾವಧಾನವಾಗಿ

ತಾಂಬೂಲ ಸೇವನೆ ಮಾಡುತ್ತಿದ್ದ. ನಾಗಪ್ಪನಿಗೆ ನಮ್ಮೂರಿನಲ್ಲಿ ಪರಿಚಯವಿಲ್ಲದ ಜನರೇ ಇಲ್ಲ. ಚಹ ಕುಡಿಯಲಿಕ್ಕೆ ಬರುವ ಎಲ್ಲರ ಜೊತೆಯಲ್ಲೂ ಆ ಮಾತು ಈ ಮಾತು ಆಡುತ್ತ, ಊಟದ ವೇಳೆಗೆ ಮಾತ್ರ ಅವನು ಅಂಗಡಿಯನ್ನು ಬಿಟ್ಟು ಏಳುತ್ತಿದ್ದ. ಮನೆಗೆ ಬಂದನಂತರ ಸ್ವಯಂಪಾಕ ಮಾಡಿಕೊಂಡು ಉಂಡ ಬಳಿಕ ವಾಮಕುಕ್ಷಿಯಾಗುತ್ತಿದ್ದ. ಇಳಿ ಹೊತ್ತಿನಲ್ಲಿ ಪುನಃ "ವಿಶ್ರಾಂತಿ ಗೃಹ" ಕ್ಕೆ ಹೋಗುತ್ತಿದ್ದ. ಅಲ್ಲಿ ರಾತ್ರಿ ಎಂಟು-ಒಂಬತ್ತು ಗಂಟೆಯ ವರೆಗೆ ಹರಟೆ ಆಗಬೇಕು. "ವಿಶ್ರಾಂತಿ ಗೃಹ" ದವರಾದರೂ ನಾಗಪ್ಪನ ಮೇಲೆ ತುಂಬಾ ವಿಶ್ವಾಸ-ಆದರಗಳುಳ್ಳವರಾಗಿದ್ದರು. ಅವನ ಸ್ವಭಾವವೇ ಅಷ್ಟು ಜನಪ್ರಿಯವಾದದ್ದು. ಹರಟೆ ಹೊಡೆಯಹತ್ತಿದನೆಂದರೆ ತೀರಿತು ನಾಗಪ್ಪ; ಎಲ್ಲರಿಗೂ ತಮ್ಮ ಕೆಲಸ ಬಿಟ್ಟು ಅವನಾಡುತ್ತಿರುವ ಮಾತನ್ನೇ ಕೇಳುತ್ತ ಕುಳಿತಿರಬೇಕೆಂದೆನಿಸುತ್ತಿತ್ತು. ಅವನು ಹೇಳುವ ಕತೆಗಳಿಗೆ ಸಮಾಪ್ತಿಯೇ ಇರುತ್ತಿರಲಿಲ್ಲ. ಕತೆ ವಿಸ್ತರಿಸುವ ನಾಗಪ್ಪನ ಶೈಲಿಯೂ ಬಲು ಮಾರ್ಮಿಕವಾದದ್ದು; ಚಿತ್ತಾಕರ್ಷಕವಾದದ್ದು. ಇಷ್ಟೇ ಅಲ್ಲದೆ ಡಿಕ್ಕಿಗೂ ಅಲ್ಲಿ ಚನ್ನಾಗಿ ಆಹಾರ ಸಿಕ್ಕುತ್ತಿತ್ತು. ಬಂದವರೆಲ್ಲರೂ ತಮ್ಮ ಪಕ್ಕೋಡಾ-ಬಿಸ್ಕೀಟಿನಲ್ಲಿ ಡಿಕ್ಕಿಯ ಪಾಲನ್ನು ಕೊಡಲು ಮರೆಯುತ್ತಿರಲಿಲ್ಲ. ಅಂತೂ ನಾಗಪ್ಪನೂ ಡಿಕ್ಕಿಯೂ ಚಹದ ಅಂಗಡಿಯಾಯಿತು, ತಮ್ಮ ಮನೆಯಾಯಿತು, ಇವುಗಳನ್ನು ಬಿಟ್ಟು ಬೇರೆ ಕಡೆಗೆ ಹೋಗುತ್ತಿರಲಿಲ್ಲ.

ನಾಗಪ್ಪನ ಅನುಭವ ವಿಶಾಲವಾದದ್ದು; ಆಳವಾದದ್ದು. ಅಂಚೆಯಲ್ಲಿ ಕೆಲಸ ಮಾಡುತ್ತಿರುವಾಗ ಅನೇಕ ಊರುಗಳನ್ನು ಕಂಡಿದ್ದ. ಪ್ರಾರಂಭದಲ್ಲಿ ಹಳ್ಳಿಯ ಅಂಚೆಯವನಾಗಿದ್ದು ಅನಂತರ ನಮ್ಮೂರಿಗೆ ಬಂದಿದ್ದ. ಆದ್ದರಿಂದಲೇ ಅವನಿಗೆ ಜನರ ಮತ್ತು ಜಗತ್ತಿನ ಅನುಭವವು ತುಂಬಾ ಬಂದುಕೊಂಡಿತ್ತು. ಅವನು ಅನೇಕ ಚಮತ್ಕಾರಿಕ ಸನ್ನಿವೇಶಗಳಲ್ಲಿ ಭಾಗವಹಿಸಿದ್ದ; ಅನೇಕ ಗಂಡಾಂತರಗಳನ್ನು ಎದುರಿಸಿದ್ದ! ಅನೇಕ ಸ್ಥಳಗಳ ಪರಿಚಯವೂ ಇತ್ತು ನಾಗಪ್ಪನಿಗೆ.

ನಮ್ಮ ಪ್ರಾಂತದ "ವಿಶ್ರಾಂತಿ ಗೃಹ" ಗಳಲ್ಲಿ ಮಾತನಾಡ [illegible] ? ಅಲ್ಲಿ ರಾಜಕಾರಣ ಪಟುಗಳು, ಪ್ರಣಯಿ

ಗಳು, ಸಮಾಜೋದ್ಧಾರಕರು, ಚಂಡಾಳ ಚೌಕಳಿಯ ಜನರು, ಪಂಡಿತರು, ಪಾಮರರು, ಮುದುಕರು, ಹುಡುಗರು, ಎಲ್ಲರೂ ಈ ಅಂಗಡಿಗಳ ಗಿರಾಕಿಗಳು. ಸ್ತ್ರೀಯರನ್ನಷ್ಟು ಬಿಟ್ಟು ಜನಸಮಾಜದ ಚಿಕ್ಕ ಚಿತ್ರಗಳೇ ಇವು ಎಂದು ಹೇಳಬಹುದು. ಈಚೆಗೆ ಸ್ತ್ರೀ ಸಮಾಜದ ಪ್ರತಿನಿಧಿಗಳೂ ನಮ್ಮ ಸುಧಾರಕ "ವಿಶ್ರಾಂತಿ ಗೃಹ" ಗಳಲ್ಲಿ ಕಂಡುಬರುತ್ತಿರುವುದರಿಂದ ನಮ್ಮ ಚಹದ ಅಂಗಡಿಗಳು ಮಾನವ ಗುಣ-ಸ್ವಭಾವಗಳನ್ನು ಪ್ರತಿಬಿಂಬಿಸುವ ಕನ್ನಡಿಗಳೇ ಆಗಹತ್ತಿವೆ ಎಂದೂ ಹೇಳಬಹುದು. ಕೂಡಿದ ಎಲ್ಲ ಗಿರಾಕಿಗಳೂ ಏನಾದರೂ ವಿಷಯವನ್ನೆತ್ತಿ ಮಾತನಾಡುವರು. ಅದರಲ್ಲಿಯೂ ಚಹಾಪಾನ-ಧೂಮ್ರಪಾನ ಮುಗಿದ ಮೇಲಂತೂ ಇವರಿಗೆ ಮಾತನಾಡಲಿಕ್ಕೆ ಇಲ್ಲದ ಹುರುಪು ಬಂದುಬಿಡುವುದು. ನಾಗಪ್ಪ ಬಲು ಧೂರ್ತ. ಎಲ್ಲರಾಡುವ ಮಾತಿಗೂ "ಹೂಂ" ಅನ್ನುತ್ತಿದ್ದ. ಅವನು ವ್ಯಕ್ತಿಸ್ವಭಾವ ನಿರೀಕ್ಷಣೆಯಲ್ಲಿ ಚಾಣಾಕ್ಷನಾಗಿದ್ದ; ಚತುರನಾಗಿದ್ದ. ಯಾರ ಮಾತಿನಲ್ಲಿ ಸತ್ಯವಿದೆ, ಇನ್ನಾರ ಮಾತಿನಲ್ಲಿ ಅತಿಶಯೋಕ್ತಿಯಿದೆ, ಮತ್ತಾರ ಮಾತಿನಲ್ಲಿ ಸ್ವಾದಿಷ್ಟ ವಿಚಾರ-ಭಾವನೆಗಳಿವೆ ಎಂಬುದನ್ನೆಲ್ಲ ಮೂಲೆಯಲ್ಲಿಟ್ಟ ಮುಕ್ಕಾಲು ಮಣೆಯ ಮೇಲೆ ಕುಳಿತುಕೊಂಡೇ ಆಲಿಸುತ್ತಿದ್ದ. ಸಮಯೋಚಿತವಾಗಿ ತಾನೂ ಕೆಲವೊಂದು ಅಭಿಪ್ರಾಯಗಳನ್ನು ವ್ಯಕ್ತಮಾಡುತ್ತಿದ್ದ. ಡಿಕ್ಕಿಯಾದರೋ "ಹಿಜ ಮಾಸ್ಟರ್ಸ ವ್ಹಾಯಿಸ್" ಕೇಳುತ್ತ, ಬಾಲ ಅಲ್ಲಾಡಿಸುತ್ತ, ಬರಹೋಗುವವರ ಕೈ ಬಾಯಿಗಳನ್ನು ನಿರೀಕ್ಷಿಸುತ್ತ ಕುಳಿತಿರುತ್ತಿದ್ದಿತು. ಬಲು ಚಾಣಾಕ್ಷ ಡಿಕ್ಕಿ!

ಒಂದು ದಿನ ನಿತ್ಯದಂತೆ ನಮ್ಮೂರ ನಾಗಪ್ಪ ಬೆಳಗಿನಲ್ಲೆದ್ದು "ವಿಶ್ರಾಂತಿ ಗೃಹದಲ್ಲಿ" ಆಗ ತಾನೆ ತನ್ನ ಚಹಾಪಾನ ಮುಗಿಸಿ, ಮೂಲೆಯಲ್ಲಿದ್ದ ಮುಕ್ಕಾಲು ಮಣೆಯ ಮೇಲೆ ಸಂಚಿಯನ್ನು ಬಿಚ್ಚಿ ತಾಂಬೂಲ ಹಾಕುತ್ತ ಕುಳಿತಿದ್ದ. ಡಿಕ್ಕಿಯು ತನ್ನ ಬಿಸ್ಕಿಟ್ ಚೂರಿನ ಕೂಡ ವಾದಮಾಡುತ್ತ ಮಗ್ಗುಲಲ್ಲಿಟ್ಟ ಮೇಜಿನ ಬುಡದಲ್ಲಿ ಕುಳಿತಿತ್ತು. ಇನ್ನೊಂದು ತುಣುಕು ಬೀಳುತ್ತದೇನೋ ಎಂದು ಆಗಾಗ ಮೋರೆ ಮೇಲೆ ಮಾಡಿ ನೋಡುತ್ತಿತ್ತು. ಅಷ್ಟರಲ್ಲಿ ಯಾವುದೋ ಒಂದು ಗಿರಾಕಿ

ದೋಸೆಯ ಒಂದು ದೊಡ್ಡ ತುಣುಕನ್ನೇ ಡಿಕ್ಕಿಯ ಕಡೆಗೆ ಒಗೆದನು. ಕೂಡಲೇ ಡಿಕ್ಕಿಯು ದೋಸೆಯ ತುಣುಕನ್ನು ಕಚ್ಚಿಕೊಂಡು ಪುನಃ ಮೇಜಿನ ಬುಡದಲ್ಲಿ ಸಾವಧಾನದಿಂದ ತಿನ್ನುತ್ತ ಕುಳಿತುಕೊಂಡಿತು.

"ನಾಯಿಗೆ ಹಾಕು ಆ ದೊಸೆಯನ್ನು, ನಾಯಿಗೆ!" ಎಂದು ಗದ್ದರಿಸುತ್ತ ಆ ಗಿರಾಕಿಯು ಅಂಗಡಿಯ ಹುಡುಗನ ಮೇಲೆ ಸಿಟ್ಟಿಗೆದ್ದು, ಅದೇ ಆವೇಶದಲ್ಲಿ ಚಹವನ್ನು ಕುಡಿಯಲಾರಂಭಿಸಿದನು. ಚಹವು ತಪ್ಪುಮಾರ್ಗದಿಂದ ಹೋಗಿ ಗಿರಾಕಿಯು ಕೆಮ್ಮಹತ್ತಿದನು. ಇದನ್ನೆಲ್ಲ ನೋಡುತ್ತ ಕುಳಿತಿದ್ದ ನಾಗಪ್ಪ ಮಣೆಯನ್ನು ಸರಿಸುತ್ತ ಗಿರಾಕಿಯ ಸನಿಯದಲ್ಲಿ ಬಂದು ಕುಳಿತುಕೊಂಡ.

"ಅದೇನು ಅಷ್ಟು ಕೋಪ, ಫಾದರ್ ಹನುಮಂತಪ್ಪನವರೇ! ಇನ್ನೊಂದು ದೋಸೆ ತರಿಸೋಣ; ಸಮಾಧಾನ ತಾಳಬೇಕು." ಎನ್ನುತ್ತ ಹುಡುಗನಿಗೆ ಸರಿಯಾಗಿ ತಯಾರಿಸಿದ ದೋಸೆಯನ್ನು ತರಹೇಳಿದ.

"ಏನ್ರೀ, ನಾಗಪ್ಪಾ, ಮನೆಯಲ್ಲಿ ದೋಸೆ ಸಿಗುವಂತಿಲ್ಲಾ; ರೊಕ್ಕಾ ಕೊಟ್ಟಾದ್ರೂ ತಿನ್ನೋಣಾ ಅಂತಾ ಬಂದ್ರೇ, ಈ ಪ್ರಕಾರದ ದೋಸೆಯೇ? ನಾಯಿ ಕೂಡಾ ತಿನ್ನದಂಥಾದ್ದು!" ಎಂದು ಫಾದರ್ ಹನುಮಂತಪ್ಪ ಸಿಟ್ಟಿನಲ್ಲಿಯೇ ಚಹ ಕುಡಿಯುವುದು ಮುಗಿಸಿ ನಾಗಪ್ಪನ ಇದಿರು ಕುಳಿತುಕೊಂಡ.

ಡಿಕ್ಕಿಯ ಮೋರೆ ನೋಡಿದವರಿಗೆ ಫಾದರ್ ಹನುಮಂತಪ್ಪನ ಕೊನೆಯ ಅಭಿಪ್ರಾಯ ಅನ್ಯಾಯವಾದದ್ದು ಎಂದು ತಿಳಿದು ಬರುವ ಹಾಗಿತ್ತು.

ನಾಗಪ್ಪನಿಗೆ ಫಾದರ್ ಹನುಮಂತಪ್ಪನು ಅಪರಿಚಿತನಲ್ಲ. ಹನುಮಂತಪ್ಪನ ವೃತ್ತಾಂತ ನಾಗಪ್ಪನಿಗೆ ಸಂಪೂರ್ಣವಾಗಿ ಗೊತ್ತಿತ್ತು. ಪೂರ್ವಾಶ್ರಮದಲ್ಲಿ ಆತ ನೇಕಾರನಾಗಿದ್ದ. ಆ ಕಾಲದಲ್ಲಿ ಅವನಿಗೆ ನಾಲ್ಕು ಜನ ಹೆಂಡಿರಿದ್ದರು. ಈ ನಾಲ್ವರ ದೈನಂದಿನದ ಕಾಟವನ್ನು ಅನುಭವಿಸುತ್ತಿರುವಾಗ ಹನುಮಂತಪ್ಪನಿಗೆ ಸರ್ವಜ್ಞವಚನವೊಂದು ಬಾರಿ ಬಾರಿ ನೆನಪಿಗೆ ಬರುತ್ತಿತ್ತು.

"ಎತ್ತುಗಳು ಎರಡಾಗೆ | ಬತ್ತದಿಹ ಹಯನಾಗಿ |
ಪುತ್ರರಯ್ದಾಗೆ—**ಸತಿಯೊಬ್ಬಳಾಗಿಹರೆ** |
ನಿತ್ಯವಲಿ ಸುಖವು ಸರ್ವಜ್ಞ"

ನಿಜವಾಗಿಯೂ ಸರ್ವಜ್ಞಮೂರ್ತಿಯು ಹೆಂಡಿರ ಕಾಟ ಹೆಚ್ಚಾಗಿದ್ದಾಗಲೇ ಈ ಅಭಿಪ್ರಾಯವನ್ನು ವ್ಯಕ್ತಮಾಡಿದ್ದು ಎಂದು ಹನುಮಂತಪ್ಪನಿಗೆ ಕಂಡುಬಂದಿತ್ತು. ಅಂತೆಯೇ 'ಸತಿಯೊಬ್ಬಳಾಗಿಹ' ಧರ್ಮವನ್ನು ಹುಡುಕುತ್ತಿದ್ದ. 'ಕ್ರೈಸ್ತ ಮತದವರು ಒಬ್ಬಳಿಗಿಂತ ಹೆಚ್ಚು ಹೆಂಡಿರನ್ನು ಮದುವೆಯಾಗಲಾರರು.' ಎಂಬ ವಿಷಯವನ್ನು ಕೇಳಿಕೊಂಡು, ಈ ನಾಲ್ಕು ವರ್ಷಗಳಿಂದ ಜಾನ್ ಹನುಮಂತಪ್ಪನಾಗಿ, ನಮ್ಮೂರ ಚರ್ಚಿನ ಮುಖ್ಯ ಪಾದ್ರಿಯಾಗಿದ್ದ. ಅಂದಿನಿಂದ ಅನೇಕ ದಂಪತಿಗಳ ಲಗ್ನದಲ್ಲಿ ಮುಖ್ಯ ಪಾದ್ರಿಯಾಗಿ ಕ್ರೈಸ್ತಧರ್ಮದ ವಿವಾಹ ನಿಯಮಗಳನ್ನು ಓದಿ ಓದಿ, ಎಲ್ಲರಲ್ಲಿಯೂ 'ನಿಜವಾಗಿಯೂ ಇಂಥ ಧರ್ಮವೇ ಶ್ರೇಷ್ಠವಾದದ್ದು' ಎಂದು ನೇರವಾಗಿ ಪ್ರತಿಪಾದಿಸುತ್ತ ಸ್ವಾನುಭವಸತ್ಯಕ್ಕೆ ಧರ್ಮಸತ್ಯದ ಮಹತ್ವಕೊಡುತ್ತ ಬಂದಿದ್ದ. ನಾಗಪ್ಪನಿಗೆ ಈ ವಾದವನ್ನು ಕೇಳದಾಗ ಮೊದಲು ವಿನೋದವಾದರೂ, ಪದೇ ಪದೇ ಅದೇ ಮಾತನ್ನು ಕೇಳಿ ಕೇಳಿ ಅವನಿಗೆ ಬೇಸರ ಬಂದಿತ್ತು. ಏಕಪತ್ನೀವ್ರತವನ್ನು ಯಾವ ಧರ್ಮದಲ್ಲಿಯಾದರೂ ಕೈಕೊಳ್ಳಲು ಸಾಧ್ಯವಿಲ್ಲವೇ? ಅಂತೆಯೇ ನಾಗಪ್ಪನು ಈ ವಿಷಯವನ್ನು ಕುರಿತು ಜಾನ್ ಹನುಮಂತಪ್ಪನನ್ನು ಕಠಿನ ಸಮಸ್ಯೆಯಲ್ಲಿ ಕೆಡುಹಬೇಕೆಂದು ವಿಚಾರಿಸಿದ್ದ.

"ಏನ್‌ರೀ, ಅಪ್ಪ ಹನುಮಂತಪ್ಪನವರೇ—ನಾಗಪ್ಪ 'ಫಾದರ್' ಶಬ್ದದ ಭಾಷಾಂತರ ಮಾಡಿಕೊಂಡಿದ್ದ—ನಿಮ್ಮ ಧರ್ಮದಲ್ಲಿ ವಿವಾಹವಾಗುವ ದಂಪತಿಗಳಿಗೆ ನೀವು ಹೇಳುತ್ತಿರುವ ನಿಯಮಗಳನ್ನು ನಾನು ಚೆನ್ನಾಗಿ ಕೇಳಿದ್ದೇನೆ. ಆದರೆ ಅವುಗಳಲ್ಲಿ ಒಂದು ವಿಷಯ ಮಾತ್ರ ನನಗೆ ಇನ್ನೂ ಅರ್ಥವಾಗಿಲ್ಲ. ಅದೇನೆಂದರೆ—ನೀವು ಲಗ್ನವಾಗುವ ವಧೂವರರಿಗೆ "ದೇವಲೋಕದಲ್ಲಿ ಸಂಪೂರ್ಣವಾಗಿ ಐಕ್ಯಹೊಂದುವವರಿಗೆ ಮರ್ತ್ಯಲೋಕದಲ್ಲಿ ಕೂಡಿಕೊಂಡಿರಿ" (Be there united

on earth until you are definately united in Heaven) ಎಂದು ಹೇಳುವ ಸಾಂಪ್ರದಾಯವುಂಟಷ್ಟೇ? ಆದರೆ ನನಗೆ ಈ ನಿಮ್ಮ ಆಶೀರ್ವಚನದ ಅರ್ಥವೇ ಸಂಪೂರ್ಣವಾಗಿ ತಿಳಿಯಲೊಲ್ಲದು. ಏಕೆಂದರೆ ಮೊನ್ನೆ ನಮ್ಮ ಮಿಶನ್ ಸ್ಕೂಲ್ ಮಾಸ್ಟರು—ಜೋಸೆಫ್ ಮಲ್ಲಪ್ಪನವರು—ನನಗೆ ತಮಗೆ ಕಂಡ ಕನಸೊಂದನ್ನು ಹೇಳಿದರು. ಅಂದಿನಿಂದ ನಿಮಗೆ ಭೆಟ್ಟಿಯಾಗಿ ಆ ಕನಸಿನ ಸಮಸ್ಯೆಯನ್ನು ಸ್ಪಷ್ಟೀಕರಿಸಿಕೊಳ್ಳಬೇಕೆಂದು ತುಂಬಾ ಕುತೂಹಲವಾಗಿದೆ. ಅನಾಯಾಸವಾಗಿ ಈಗ ಭೆಟ್ಟಿಯಾದಿರಿ. ದಯೆಯಿಟ್ಟು ಮೊದಲು ಆ ಕನಸಿನ ವೃತ್ತಾಂತವನ್ನಿಷ್ಟು ಮೊದಲು ಕೇಳಬೇಕು."

ನಾಗಪ್ಪನು ಮಾತಿಗೆ ಪ್ರಾರಂಭಮಾಡಿದಾಗಿನಿಂದ "ವಿಶ್ರಾಂತಿ ಗೃಹ"ದ ಅನೇಕ ಗಿರಾಕಿಗಳು ತುಂಬ ಆಸಕ್ತಿಯಿಂದ ಈ ವಿಷಯವನ್ನು ಕೇಳುತ್ತಿದ್ದರು. ಕನಸಿನ ಸುದ್ದಿ ಕೇಳಿದ ಕೂಡಲೇ ಅವರ ಕುತೂಹಲವು ಇಮ್ಮಡಿಯಾಯಿತು. ಮಾನವ ಸ್ವಭಾವವೇ ಅಂತಹದು. ಜಾಗೃತ ಜೀವನದ ಏಕನಾದವು ಬೇಸರ ಹುಟ್ಟಿಸುವುದು. ಅದರಿಂದಲೇ ಎಲ್ಲ ಗಿರಾಕಿಗಳೂ "ಅದಾವ ಕನಸು?" ಎಂದು ಪ್ರಶ್ನಿಸುತ್ತ ನಾಗಪ್ಪ ಕುಳಿತಲ್ಲಿ ಕೂಡಿದರು. ನಾಗಪ್ಪನಿಗೆ ಶ್ರೋತೃವೃಂದದ ಈ ಆತುರತೆಯಿಂದ ಸ್ಫೂರ್ತಿ ಹೆಚ್ಚಿ, ಕನಸಿನ ವೃತ್ತಾಂತವನ್ನು ಹೇಳಲು ಪ್ರಾರಂಭಿಸಿದ.

"ಜೋಸೆಫ್ ಮಲ್ಲಪ್ಪನವರ ವೃತ್ತಾಂತ ಇಷ್ಟೇ ನೋಡಿ. ಅವರು ಲಗ್ನವಾಗಿ ಈಗ ಒಂದು ವರ್ಷವಾಗಿದೆ, ಅವರ ಈಗಿನ ಪತ್ನಿ ಲ್ಯೂಸಿ ದುರ್ಗವ್ವನವರು. ಇವರು ಈ ಲಗ್ನವಾಗುವ ಪೂರ್ವದಲ್ಲಿ ನಮ್ಮ ಕೈಲಾಸವಾಸಿ ಜೇಕಬ್ ಚೆನ್ನಪ್ಪನವರ ಹೆಂಡತಿಯಾಗಿದ್ದರು. ಜೋಸೆಫ್ ಮಲ್ಲಪ್ಪನವರು ಲ್ಯೂಸಿ ದುರ್ಗವ್ವನವರನ್ನು ವಿವಾಹ ಮಾಡಿಕೊಂಡ ಕಾಲಕ್ಕೆ ತಾವೇ ನಮ್ಮೂರ ಚರ್ಚಿನಲ್ಲಿ ಲಗ್ನದ ಪುರೋಹಿತರಾಗಿದ್ದಿರಷ್ಟೇ? ಆ ಕಾಲಕ್ಕೆ ತಾವು ನುಡಿದ ಅನೇಕ ಉಪದೇಶದ ಮಾತುಗಳಲ್ಲಿ ನಾನು ಈಗಲೇ ಹೇಳಿದ ವಾಕ್ಯವೊಂದು ಮಾತ್ರ ಜೋಸೆಫ್ ಮಲ್ಲಪ್ಪನವರನ್ನು ವಿಚಾರಕ್ಕೊಳಪಡಿಸಿತೆಂದು ಹೇಳಿದರು. ಈ

ಮಾತನ್ನು ಅವರೇ ನನಗೆ ತಿಳಿಸಿದರು. ಅರ್ಥಾತ್ "ದೇವಲೋಕದಲ್ಲಿ ಸಂಪೂರ್ಣವಾಗಿ ಐಕ್ಯ ಹೊಂದುವ ವರೆಗೆ ನೀವು ಮರ್ತ್ಯಲೋಕದಲ್ಲಿ ಕೂಡಿರಿ" ಎಂದು ನೀವು ಹೇಳಿದಿರಂತೆ ಅವರೀರ್ವರಿಗೂ! ಅಲ್ಲವೇ?"

"ಅದು ನಿಜ, ನಾಗಪ್ಪನವರೇ, ಅದು ನಮ್ಮ ಕ್ರೈಸ್ತ ಧರ್ಮದ ವಿವಾಹ ಪದ್ಧತಿ."

"ಸರಿ, ನಾನನ್ನುವುದೂ ಅದೇ ಕೇಳಿ. ನಿಮ್ಮ ಉಪದೇಶವೇನೋ ಮಾದರಿಯದಾಗಿತ್ತು, ಆದರ್ಶಯುಕ್ತವಾದ ಆಶೀರ್ವಚನವದು. ಆದರೂ ನೋಡಿ, ನಾವಿರುವುದು ಆದರ್ಶ ಸೃಷ್ಟಿಯಲ್ಲ. ಲಗ್ನವಾದ ದಿನ ಜೋಸೆಫ್ ಮಲ್ಲಪ್ಪನವರು ಚರ್ಚಿನಿಂದ ಮನೆಗೆ ಹೋದ ಕೂಡಲೇ ನೀವು ಹೇಳಿದ ಉಪದೇಶ ವಾಕ್ಯವನ್ನು ಆಳವಾಗಿ ವಿಚಾರಿಸುತ್ತ ತಮ್ಮ ಮನೆಯ ಅಂಗಣದಲ್ಲಿ ಕುಳಿತುಕೊಂಡರು. ಅವರು ಶಾಲೆಯ ಮಾಸ್ತರು ಎಂದು ನಿಮಗೆ ಗೊತ್ತಿದೆಯಷ್ಟೇ? ವರ ವಿಚಾರ ಸರಣಿಯು ಗಹನವಾದದ್ದು. ಅಂತಲೇ ಅವರು ಈ ನಿಮ್ಮ ವಾಕ್ಯವನ್ನು ಹೆಚ್ಚಾಗಿ ವಿಚಾರಿಸತೊಡಗಿದರು. ಅವರು ವಿಚಾರಿಸಿದ್ದು ಹೀಗೆ; "ದೇವಲೋಕದಲ್ಲಿ ಸಂಪೂರ್ಣ ಐಕ್ಯಹೊಂದುವ ವರೆಗೆ" ಎಂದು ಹೇಳಿದರಲ್ಲವೇ ನಮ್ಮ ಫಾದರು! ಸರಿ, ಹಾಗಾದರೆ ಇವೇ ಮಾತನ್ನೇ ಈ ಉಪದೇಶವನ್ನೇ, ಅವರು ನಮ್ಮ ಕ್ರಿಸ್ತಲೋಕವಾಸಿ ಜೇಕಬ್ ಚೆನ್ನಪ್ಪನವರ ವಿವಾಹದಲ್ಲಿಯೂ ಹೇಳಿರಬೇಕಷ್ಟೇ? ಹಾಗಾದರೆ ಈ ಮಾತಿನ ಪರಿಣಾಮವೇನಾಯಿತೆನ್ನಬೇಕು? ಈಗ ಈ ತತ್ವದ ಮೇಲಿಂದ ನಮ್ಮ ಲ್ಯೂಸಿಗೆ ಇಬ್ಬರು ಗಂಡಂದಿರು ಆದಂತಾಯಿತಲ್ಲಾ! ಶಾಂತಂ ಪಾಪಂ! ಕ್ರೈಸ್ತಧರ್ಮವು ಏಕಪತ್ನೀವ್ರತವನ್ನು ಸಾರುತ್ತಿರುವಾಗ ಈ ಸ್ಥಿತಿಯಲ್ಲಿ ಒಬ್ಬ ಪತ್ನಿಗೆ ಇಬ್ಬರು ಪತಿಗಳಾಗಿ ಬಿಟ್ಟರಲ್ಲ? ಇದೂ ಅಲ್ಲದೇ ಇನ್ನು ನಮ್ಮ ಲ್ಯೂಸಿ ಸ್ವರ್ಗವಾಸಿಯಾಗಿ..........." ಈ ರೀತಿಯಲ್ಲಿ ವಿಚಾರ ತರಂಗಗಳು ಹೆಚ್ಚಾಗಿ ಬರಹತ್ತಿ ಜೋಸೆಫ್ ಮಲ್ಲಪ್ಪನವರನ್ನು ನಿದ್ರಾಸಮುದ್ರದಲ್ಲಿ ಮುಳುಗಿಸಿಬಿಟ್ಟವು. ಅದೇನೋ ಹೇಳ್ತಾರೆ ನೋಡಿ ಮಾನವ ವಿಚಾರಕ್ಕೆ ಮರ್ಯಾದೆಯೆಂದರೆ ನಿದ್ರೆಯಂತೆ. ಎಲ್ಲಿಗೆ ವಿಚಾರ ಪ್ರವಾಹ ನಿಲ್ಲುವುದೋ, ಇಲ್ಲವೇ ವಿಚಾರಕ್ಕೆ

ಸಾಧ್ಯವಿಲ್ಲವೋ, ಅಲ್ಲಿ ಬರುವುದು ನಿದ್ರೆಯ ಉತ್ತರ. ಅದೇನೇ ಇರಲಿ. ಜೋಸೆಫ್ ಮಲ್ಲಪ್ಪನವರು ಆಗ ನಿದ್ರಿಸಿದಾಗ್ಗೆ ಅವರು ಕನಸು ಕಂಡರು. ಜಾಗೃತಾವಸ್ಥೆಯಲ್ಲಿ ಸ್ಪಷ್ಟೀಕರಿಸಲಿಕ್ಕೆ ಬಾರದ ಸಮಸ್ಯೆಯು ಕನಸಿನಲ್ಲಿ ಎಲ್ಲಿಯಾದರೂ ಪೂರ್ತಿಹೊಂದಲು ಸಾಧ್ಯವೇ? ಆಗ ಅವರು ಕಂಡ ಕನಸು ಈ ಪ್ರಕಾರವಾಗಿತ್ತು.

"ಕನಸಿನಲ್ಲಿ ಜೋಸೆಫ್ ಮಲ್ಲಪ್ಪನವರು ತಮ್ಮ ಪತ್ನಿ ಲ್ಯೂಸಿ ದುರ್ಗವ್ವನವರು ಮೃತರಾದಂತೆ ಕಂಡರು. ತಾವೂ ಅವರ ಜೊತೆಯಲ್ಲಿಯೆ ಸ್ವರ್ಗಕ್ಕೆ ನಡೆದು ಬಿಟ್ಟಿದ್ದರು---ಅಂದರೆ, ಕನಸಿನಲ್ಲಿ. ಅತ್ತ ಸ್ವರ್ಗದಲ್ಲಿಯಾದರೋ ಜೇಕಬ್ ಚೆನ್ನಪ್ಪನವರು ಅಲ್ಲಿಗೆ ಹೋದಂದಿನಿಂದ ತಮ್ಮ ಭೂಮಿಸ್ಥ ಪತ್ನಿಯವರ ಮಾರ್ಗಪ್ರತೀಕ್ಷೆಯನ್ನೇ ಮಾಡುತ್ತ ದಿನಹಾಕುತ್ತಿದ್ದರು. ಏಕೆಂದರೆ ಸಂಪೂರ್ಣವಾಗಿ ಗಂಡ-ಹೆಂಡಿರು ಐಕ್ಯಹೊಂದುವುದು ದೇವಲೋಕದಲ್ಲಿಯಷ್ಟೇ? ಅಂತೆಯೇ ಅವರು ಸದ್ಯ ಸ್ವರ್ಗವಾಸಿಯಾಗ ಬಂದ ಲ್ಯೂಸಿ ದುರ್ಗವ್ವನನ್ನು ಕಂಡ ಕೂಡಲೇ ನೇರವಾಗಿ ಧಾವಿಸಿ ಬಂದವರೇ 'ಲೋ ನನ್ನ ಲ್ಯೂಸಿ!' ಎಂದು ಅವಳನ್ನು ತಬ್ಬಿಕೊಂಡು ಬಿಟ್ಟರು.

"ಇಂದು ಮಾತ್ರ ಸಂಪೂರ್ಣ ಐಕ್ಯವಾಯಿತು ನೋಡು, ಪ್ರೇಯಸಿ, ನಮ್ಮ ನಿಮ್ಮ ಪ್ರಣಯ; ನಮ್ಮ ಮರ್ತ್ಯಲೋಕದ ವಿವಾಹದಲ್ಲಿ ನಮ್ಮ ಫಾದರ್ ಹನುಮಂತಪ್ಪನವರು ಹೇಳಿದ ಭಾವೀ ಆಶೀರ್ವಾದವು ಇಂದೇ ಸಫಲವಾಯಿತು ನೋಡು, ಪ್ರಿಯೆ. ಇನ್ನು ನಮ್ಮ ನಿಮ್ಮ ಪ್ರಣಯಕ್ಕೆ ಚ್ಯುತಿಯಿಲ್ಲ. ಮರ್ತ್ಯಲೋಕದಲ್ಲಿ ಸಂಭವಿಸಿದ ನಮ್ಮ ವಿವಾಹ ನೋಡಿಕೆಯದು ಮಾತ್ರ. ನಿಜವಾದ ದಾಂಪತ್ಯವೆಂದರೆ ದೇವಲೋಕದಲ್ಲಿಯೇ ಫಲಿಸಲು ಸಾಧ್ಯ.' ಎಂದವನೇ ಲ್ಯೂಸಿಯನ್ನು ಗಟ್ಟಿಯಾಗಿ ಬಿಗಿದಪ್ಪಿಕೊಳ್ಳುತ್ತ ಸನಿಯದಲ್ಲಿರುವ ಸುಂದರವಾದ ಒಂದು ಹೂದೋಟದ ಕಡೆಗೆ ಕರೆದೊಯ್ಯುವವನಿದ್ದ.

"ಆದರೆ ದೇವಲೋಕದಲ್ಲಿಯೂ ಆದರ್ಶಜೀವನವು ಪೂರ್ತಿಯಾಗಿ ಲಭಿಸುವಂತೆ ತೋರಲಿಲ್ಲ. ಏಕೆಂದರೆ ಅದೇ ಸಮಯಲ್ಲಿಯೇ ಜೋಸೆಫ್ ಮಲ್ಲಪ್ಪನವರು ಸ್ವರ್ಗದ ಬಾಗಿಲಿನಿಂದ ಇವರೀರ್ವರಿದ್ದಲ್ಲಿ

ಬಂದು ಬಿಟ್ಟರು! ತಮ್ಮ ಪತ್ನಿಯನ್ನು ತಬ್ಬಿಕೊಂಡು ನಡೆಯುತ್ತಿರುವ ಜೇಕಬ್ ಚೆನ್ನಪ್ಪನನ್ನು ಹಟಾತ್ತಾಗಿ ನಿಲ್ಲಿಸಿ ಲ್ಯೂಸಿಯನ್ನುದ್ದೇಶಿಸಿ ನುಡಿದರು.

"ಇದೇನು ಅನ್ಯಾಯ, ಅಲೌಕಿಕ ಲ್ಯೂಸಿ! ನಮ್ಮೀರ್ವರ ಸಂಪೂರ್ಣ ಪರಿಣಯವು ದೇವಲೋಕದಲ್ಲಿ ನೆರವೇರಬೇಕಾಗಿದೆಯಲ್ಲವೇ ? ಹೀಗಿರುವಲ್ಲಿ, ನೀನು ಈಗಾಗಲೇ ಪರಪುರುಷನನ್ನು ಹಿಂಬಾಲಿಸಿ ನಡೆದಿರುವಿಯಲ್ಲ? ನಮ್ಮ ಫಾದರು ಹೇಳಿದ್ದನ್ನು ಇಷ್ಟರಲ್ಲಿಯೇ ಮರೆತುಬಿಟ್ಟಿಯಾ ? ಬಾ, ನಡೆ; ಇತ್ತ ಕಾಣುವ ಹೂದೋಟಕ್ಕೆ ಹೊಗುವಾ. ನನ್ನ-ನಿನ್ನ ಪ್ರಣಯಸಾಫಲ್ಯ ಇಂದಿಗಾಯಿತು." ಎಂದವರೇ ಲ್ಯೂಸಿಯನ್ನು ತಮ್ಮ ಕಡೆಗೆ ಎಳೆಯಲಾರಂಭಿಸಿದರು.

"ಅದು ಹೇಗೆ, ಮಲ್ಲಪ್ಪನವರೇ, ನಾನು ಲ್ಯೂಸಿಗೆ ಪರಪುರುಷನಾಗಿ ಬಿಟ್ಟೆನೇ? ಅವಳ ಕೂಡ ನನ್ನ ವಿವಾಹವಾದದ್ದು ಮೊದಲೆಂಬದನ್ನು ಮರೆತು ಬಿಟ್ಟಿರಾ? ಏಕೆ, ಲ್ಯೂಸಿ, ನೀನಾದರೂ ಹೇಳಬಾರದೇ ? ನಾನು ಇಲ್ಲಿಗೆ ಬಂದಂದಿನಿಂದ ಇಂದಿನ ವರೆಗೆ ಲ್ಯೂಸಿಯ ಆಗಮನವನ್ನೇ ನಿರೀಕ್ಷಿಸುತ್ತ ಇದ್ದುದಕ್ಕೆ ಇದೇ ಪ್ರತಿಫಲವೇ? ಇತ್ತ ಬಾ, ಲ್ಯೂಸಿ, ಅದೇಕೆ ಸಂಕೋಚ ಪಡುತ್ತಿರುವುದು ? ನನ್ನ-ನಿನ್ನ ವಿವಾಹ ಕೇವಲ ಮರ್ತ್ಯಲೋಕದಲ್ಲಿ ಮಾತ್ರವೆಂದು ತಿಳಿದುಕೊಂಡಿದ್ದೆಯಾ ? ನಮ್ಮ ಫಾದರು ಹೇಳಿದ್ದನ್ನು ಮರೆತು ಬಿಟ್ಟೆಯೇನು? ಬಾ, ನಡೆ ಇತ್ತ" ಎಂದೆನ್ನುತ್ತ ಜೇಕಬ್ ಚೆನ್ನಪ್ಪನು ಲ್ಯೂಸಿಯನ್ನು ತನ್ನ ಕಡೆಗೆ ಎಳೆಯಹತ್ತಿದ.

"ಜೋಸೆಫ್ ಮಲ್ಲಪ್ಪನವರಿಗೆ ಈ ಮಾತೆಲ್ಲ ಒಂದು ದೃಷ್ಟಿಯಲ್ಲಿ ಸಮಂಜಸವಾಗಿಯೇ ಕಂಡು ಬಂದಿತು. ಆದರೆ ಇನ್ನೊಂದು ದೃಷ್ಟಿಯಿಂದ ನೋಡಿದಾಗ್ಯೆ ತಮ್ಮ ವಿಚಾರವೂ ಸರಿಯಾಗಿಯೇ ಸಮಂಜಸವೆನಿಸಹತ್ತಿತು. ಏಕೆಂದರೆ ಲ್ಯೂಸಿಯ ಕೂಡ ತಾವೂ ಸಹ ದೇವಲೋಕದಲ್ಲಿ ಐಕ್ಯವಾಗುವುದೆಂದು ಫಾದರ ಹನುಮಂತಪ್ಪನವರು ಹೇಳಿದ್ದರಲ್ಲವೇ? ಈ ರೀತಿಯಲ್ಲಿ ತುಂಬಾ ವಿಚಾರ ತೊಂದರೆಯಲ್ಲಿ ಬಿದ್ದರು. ಇದರ ಪರಿಣಾಮವಾಗಿ ಅವರು ಕನಸಿನಲ್ಲಿಯೇ ಜೇಕಬ್ ಚೆನ್ನಪ್ಪನ

ಕೂಡ ಬಲವಾಗಿ ವಾದ-ವಿವಾದ ಪ್ರಾರಂಭಿಸಿದರು. ‘ ಲ್ಯೂಸಿ ನಿನ್ನವಳಲ್ಲ; ನನ್ನವಳು ’ ಎಂದು ಈರ್ವರೂ ರೇಗಿದ ದನಿಯಲ್ಲಿ ಚರ್ಚಿಸ ಹತ್ತಿದರು. ಇನ್ನು ಮುಂದೆ ಕೈಗೆ ಕೈ ಹತ್ತಿ ಬಡಿದಾಡುವವರಿದ್ದರು. ಆದರೆ ಸುದೈವದಿಂದ ಅಷ್ಟು ದೂರ ಅವರ ಜಗಳ ಹೋಗಲಿಲ್ಲ.

ಏಕೆಂದರೆ ಇವರೀರ್ವರ ವಾದ-ವಿವಾದ ದನಿಯು ಪಕ್ಕದಲ್ಲಿಯೇ ಹವೆಯನ್ನು ತಗೆದುಕೊಳ್ಳಲಿಕ್ಕೆ ಹೊರಕ್ಕೆ ಬಂದಿದ್ದ ದೇವಲೋಕದ ಪ್ರತಿನಿಧಿಗೆ ಆಶ್ಚರ್ಯವೆನಿಸಿತು. ಎಂದೂ ಬಾರದ ವ್ಯಾಜ್ಯ ಇಂದೇಕೆ ನಮ್ಮ ದೇವಲೋಕದಲ್ಲಿ ಬಂದಿದೆಯೆಂದು ಚಿಂತಿಸುತ್ತ ವಾದ ನಡೆದ ಸ್ಥಾನಕ್ಕೆ ಬಂದು ನೋಡಿದ. ಪ್ರತಿನಿಧಿಯನ್ನು ಕಂಡಕೂಡಲೇ ಜೋಸೆಫ್ ಕೇಳಿದರು.

“ ಲ್ಯೂಸಿ ಯಾರ ಹೆಂಡತಿ, ಪ್ರಭೋ ! ”

ಇದಕ್ಕೆ ಪ್ರತಿಧ್ವನಿಯಂತೆ ಜೇಕಬ್ ಕೇಳಿಕೊಂಡ.

“ ಪ್ರಭುವೇ, ನೀನೇ ನೋಡುತ್ತ ಬಂದಿರುವೆ ನನ್ನ ಇಂದಿನ ವರೆಗಿನ ನಡೆ-ನುಡಿಗಳನ್ನು. ಇಲ್ಲಿಗೆ ಬಂದಾಗಿನಿಂದಲೂ ನಾನು ನನ್ನವಳೇ ಆಗಿರುವ ಲ್ಯೂಸಿಯ ಸ್ವರ್ಗಾಗಮನವನ್ನೇ ಕಾಯುತ್ತಿದ್ದೇನಲ್ಲವೇ ? ಹೀಗಿದ್ದೂ ಈಗ ಅವಳು ನನ್ನವಳಲ್ಲವೆಂದು ಈ ಗೃಹಸ್ಥ ಹೇಳತೊಡಗಿದ್ದಾನೆ, ಜೀಯಾ. ಕೃಪೆಮಾಡಿ ನಮ್ಮಿ ಜಗಳವನ್ನು ನೀನೇ ತೀರ್ಮಾನ ಮಾಡಬೇಕು. ವಿವಾಹ ನಿಯಮಗಳು ನಿನ್ನಿಂದಲಲ್ಲವೇ ನಿರ್ಮಿತವಾದವು, ಪ್ರಭೋ ! ಈ ಸಮಸ್ಯೆಯು ನಿನ್ನಿಂದಲೇ ಪರಿಹಾರವಾಗಬೇಕು ” ಎಂದು ಪ್ರಾರ್ಥಿಸಿಕೊಂಡ.

“ ದೇವ ಲೋಕದ ಪ್ರತಿನಿಧಿಯು ತುಂಬಾ ವಿಚಾರದಲ್ಲಿ ಬಿದ್ದ. ಇಂಥ ಸಮಸ್ಯೆಗಳು ಬರಲು ಸಾಧ್ಯವೇ ಎಂಬುದು ಅವನಿಗೆ ಕಂಡು ಬರಲಿಲ್ಲ. ಮಾನವರು ಎಂಥ ಆದರ್ಶ ನಿಯಮಗಳಿಗೂ ಒಂದು ರೀತಿಯ ವ್ಯಂಗವನ್ನು ತಂದುಕೊಳ್ಳುತ್ತಾರೆಂದು ಚಿಂತಿಸಿ ಈ ಪ್ರಕಾರವಾಗಿ ನುಡಿದ.

“ ದಿವಂಗತರಾದ ಮಾನವ ಪ್ರಾಣಿಗಳೇ ! ಲಗ್ನದ ನಿಯಮ-ಕಟ್ಟಳೆಗಳು ನನ್ನಿಂದ ನಿರ್ಮಿತವಾಗಿಲ್ಲ. ಮರ್ತ್ಯಲೋಕದಲ್ಲಿಯ ನನ್ನ

ಪ್ರತಿನಿಧಿಗಳು ತಮಗೆ ಸರಿದೋರಿದಂತೆ ನಿಯಮುಗಳನ್ನು ಮಾಡಿ ಕೊಂಡಿದ್ದಾರೆ. ಅವರು ಕಲ್ಪಿಸಿಕೊಂಡಿರುವ ನಿಯಮ-ನಡಾವಳಿಗಳಿಗೆ ನಾನು ಹೊಣೆಯಾಗಲಾರೆ. ಪ್ರಸ್ತುತ ನಿಮ್ಮ ಜಗಳದಲ್ಲಿ ನನ್ನ ತೀರ್ಮಾನ ಒಂದೇ ಒಂದು. ಅದೇನೆಂದರೆ, ಲಗ್ನದ ವಿಷಯದಲ್ಲಿ ಹೆಣ್ಣು ವ್ಯಕ್ತಿಗೇನೇ ನಾನು ಸಂಪೂರ್ಣ ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಕೊಟ್ಟಿದ್ದೇನೆ. ಅವಳು ಯಾರನ್ನು ಆರಿಸುವಳೋ ಅವನೇ ಅವಳ ಪತಿ. ಆದುದರಿಂದ, ಲ್ಯೂಸೀ, ಈಗ ನೀನು ಈ ಇಬ್ಬರಲ್ಲಿ ಯಾರನ್ನಾದರೂ ವರಿಸಬಹುದು. ಅದು ನಿನ್ನ ಇಷ್ಟ.''

'' ಲ್ಯೂಸಿಗೆ ಈ ದೇವಲೋಕ ಪ್ರತಿನಿಧಿಯ ನಿರ್ಣಯವು ಚಮತ್ಕಾರವಾಗಿ ಕಂಡುಬಂತು. ಅವಳು ಯಾರನ್ನು ಆರಿಸಬೇಕೆಂದು ಚಿಂತೆಗೊಳಗಾದಳು. ಏಕೆಂದರೆ, ವಸ್ತುತಃ ಅವಳಿಗೆ ಇವರ್ಯಾರೂ ಬೇಕಾಗಿರಲಿಲ್ಲ. ಆದರೆ ಅದೇ ವೇಳೆಗೆ ದೇವಲೋಕದ ಇನ್ನೊಂದು ವ್ಯಕ್ತಿಯು ಅವಳ ಸಮೀಪಕ್ಕೆ ಬಂದು ಅವಳನ್ನು ಕುರಿತು ತನ್ನ ಕಡೆಗೆ ಬರುವುದಕ್ಕೆ ಸನ್ನೆ ಮಾಡಹತ್ತಿತು. ಲ್ಯೂಸಿ ಈ ವ್ಯಕ್ತಿಯನ್ನು ಕಂಡು ಹಿಗ್ಗಿದಳು. ಏಕೆಂದರೆ ಈ ವ್ಯಕ್ತಿ ಮ್ಯಾಥ್ಯೂ ಮಲಕಪ್ಪ! ಮರ್ತ್ಯಲೋಕದಲ್ಲಿ ಸರರ್ಥಕವಾಗಿ ಲ್ಯೂಸಿಯ ಪ್ರೇಮ ಸಂಪಾದಿಸಲಿಕ್ಕೆಂದು ಹೆಣಗಿ ಹೋರಾಡಿ ಕೊನೆಗೆ ಬ್ರಹ್ಮಚಾರಿಯಾಗಿಯೇ ದೇವಲೋಕಕ್ಕೆ ಬಂದುಬಿಟ್ಟಿದ್ದ. ಲ್ಯೂಸಿಗಾದರೋ ಮ್ಯಾಥ್ಯೂನ ಮೇಲೆಯೇ ಪೂರ್ಣ ಪ್ರೇಮವಿತ್ತು. ಆದರೆ ಮರ್ತ್ಯಲೋಕದಲ್ಲಿ ಪ್ರೇಮಬಾಹ್ಯವಾದ ಕಾರಣಾಂತರಗಳಿಂದ ಅವನ ಪ್ರೇಮಕ್ಕೆ ಪ್ರತಿಫಲ ಕೊಡಲಾಗದೇ ನಿರ್ವಾಹವಿಲ್ಲದೇ ಬೇರೆಯವರೊಂದಿಗೆ ಲಗ್ನವಾಗಿದ್ದಳು. ಈಗ ಸಾಕ್ಷಾತ್ ಸ್ವರ್ಗದ ಪ್ರತಿನಿಧಿಯೇ ತನಗೆ ಸಂಪೂರ್ಣ ಆರಿಸುವ ಸ್ವಾತಂತ್ರ್ಯವನ್ನು ದಯಪಾಲಿಸಿದ್ದನ್ನು ಕೇಳಿ ಅವಳಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಅದೇ ಸಂತೋಷದ ಭರದಲ್ಲಿ ಜೋಸೆಫ್-ಜೇಕಬ್‌ರಿಬ್ಬರನ್ನೂ ಬಿಟ್ಟುಕೊಟ್ಟು ಮ್ಯಾಥ್ಯೂನ ಕಡೆಗೆ ಹೋಗಿ ನಿಂತು ಸ್ವರ್ಗದ ಪ್ರತಿನಿಧಿಗೆ ಈ ರೀತಿಯಾಗಿ ಧನ್ಯವಾದ ಮಾಡಿದಳು.

'' ದೊರೆಯೇ, ನೀನು ಇಂದು ಸ್ವರ್ಗದಲ್ಲಿ ದಯಪಾಲಿಸಿದ ಆರಿ

ಸುವ ಸ್ವಾತಂತ್ರ್ಯವನ್ನು ಮರ್ತ್ಯಲೋಕದಲ್ಲಿಯೇ ನನಗೆ ದಯಪಾಲಿಸಿದ್ದರೆ, ನನ್ನ ಜೀವನವೇ ಬದಲಾಗುತ್ತಿತ್ತು. ಅಲ್ಲದೇ ಈ ವ್ಯಾಜ್ಯವೂ ಇಲ್ಲದಂತಾಗುತ್ತಿತ್ತು. ಈಗ ನಾನು ಜೇಕಬ್‌ನನ್ನು ಆರಿಸಿದರೆ ಜೋಸೆಫ್‌ನಿಗೆ ಸಿಟ್ಟು, ಜೋಸೆಫ್‌ನನ್ನು ಆರಿಸಿದರೆ ಜೇಕಬ್‌ನಿಗೆ ಕೋಪ. ಅದು ಕಾರಣ ಜೋಸೆಫ್‌ನೂ ಬೇಡ, ಜೇಕಬ್‌ನೂ ಬೇಡ, ಮ್ಯಾಥ್ಯೂನೇ ನನಗಿದ್ದು ಬಿಡಲಿ" ಎಂದವಳೇ ಪಕ್ಕದಲ್ಲಿ ನಿಂತಿದ್ದ ಮ್ಯಾಥ್ಯೂನನ್ನು ಬಲವಾಗಿ ಅಪ್ಪಿಕೊಂಡು ಬಿಟ್ಟಳು!

"ಇದು ಕನಸಿನಲ್ಲಿ ನಡೆದ ವಿಷಯವಾದ್ದರಿಂದ ಲ್ಯೂಸಿಯು ಮ್ಯಾಥ್ಯೂನನ್ನು ವರಿಸಿದಾಗ ಜೋಸೆಫ್ ಮತ್ತು ಜೇಕಬ್‌ರ ಕ್ರೋಧ-ಖೇದ-ಆಶ್ಚರ್ಯಗಳನ್ನು ವರ್ಣಿಸಲು ಸಾಧ್ಯವಿಲ್ಲ. ಅದರಲ್ಲಿ ಜೋಸೆಫ್ ಮಲ್ಲಪ್ಪನವರು ಲ್ಯೂಸಿಯು ಈ ರೀತಿಯಲ್ಲಿ ಮ್ಯಾಥ್ಯೂನನ್ನು ತಬ್ಬಿಕೊಂಡಾಗ ತಮ್ಮ ಪತ್ನಿಯ ಈ ವರ್ತನವನ್ನು ಸಹಿಸಲಾರದೇ ಜೋರಾಗಿ 'ಏ, ಲ್ಯೂಸಿ, ಲ್ಯೂಸಿ ಇದನ್ನೇನು ಮಾಡಿಬಿಟ್ಟೆ' ಎಂದು ಚೀರಿಬಿಟ್ಟರಂತೆ! ಕರ್ಣಕಠೋರವಾದ ಆ ಚೀರಿನ ಧನಿಯೇ ಅವರನ್ನು ಕನಸಿನಿಂದ ಜಾಗೃತ ಮಾಡಿತೆಂದು ನನಗೆ ಹೇಳಿದರು. ನನಗಾದರೂ ಈ ಕನಸಿನ ವೃತ್ತಾಂತ ಸ್ವಲ್ಪ ಗಡುಚಾಗಿ ಕಂಡುಬಂತು. ಅಂದಿನಿಂದ ನಿಮ್ಮನ್ನು ಕಂಡು ಈ ಸಮಸ್ಯೆಯ ಸ್ಪಷ್ಟೀಕರಣಮಾಡಿಕೊಳ್ಳಬೇಕೆಂದು ನನ್ನ ಕುತೂಹಲ. ತಾವು ದಯೆಯಿಟ್ಟು ಈ ಪ್ರಶ್ನೆಯನ್ನು ಪರಿಹರಿಸಿಕೊಟ್ಟರೆ ನನಗೂ ಮತ್ತು ಜೋಸೆಫ್ ಮಲ್ಲಪ್ಪನವರಿಗೂ ಸರಿಯಾಗಿಯೇ ಉಪಕಾರಮಾಡಿದಂತಾಗುವುದು" ಎಂದು ನುಡಿದು ನಾಗಪ್ಪ ಕನಸಿನ ವೃತ್ತಾಂತ ಮುಗಿಸಿ ಸುಮ್ಮನಾದ.

ಗಿರಾಕಿಗಳೆಲ್ಲರೂ ಫಾದರ ಹನುಮಂತಪ್ಪನವರ ಮುಖವನ್ನು ನಿರೀಕ್ಷಿಸಹತ್ತಿದರು. ಕನಸಿನ ಸಮಸ್ಯೆಯು ನಿಜವಾಗಿಯೂ ಚಮತ್ಕೃತಿಯುದಾಗಿತ್ತು. ಫಾದರ ಹನುಮಂತಪ್ಪನವರು ಕೂಡಲೇ ನಾಗಪ್ಪನನ್ನು ಕುರಿತು ಈ ರೀತಿಯಲ್ಲಿ ಗಂಭೀರ ಮುದ್ರೆಯಿಂದ ನುಡಿದರು.

"ನಾಗಪ್ಪನವರೇ, ನೀವು ವಿವರಿಸಿದ ವೃತ್ತಾಂತ ಗಡುಚಾದ ವಿಷಯವೇನೋ ಸರಿಯೇ. ಆದರೆ ಈ ನಿಮ್ಮ ಸಮಸ್ಯೆಯು ಕೇವಲ

ಕನಸಿನ ಸ್ಥಿತಿಯಲ್ಲಿಯಷ್ಟೇ ಸಂಭವಿಸುವ ಸಂಗತಿಯು. ಜಾಗ್ರತಾವಸ್ಥೆಯ ಜೀವನದಲ್ಲಿ ಇಂಥ ಸಮಸ್ಯೆಗಳಿಗೆ ಅವಕಾಶವಿಲ್ಲ; ಅಂತೆಯೇ ಅವುಗಳಿಗೆ ಉತ್ತರವೂ ಇಲ್ಲ. ಆದ ಕಾರಣ ನೀವು ಇನ್ನು ಮುಂದೆ ಇಂಥವುಗಳ ನಿವಾರಣೆಯ ಗೋಜಿಗೆ ಹೋಗಬೇಡಿರಿ." ಎಂದವರೇ ಗಡಿಬಿಡಿಯಿಂದ ಚಹದಂಗಡಿಯವನಿಗೆ ರೊಕ್ಕ ಕೊಟ್ಟು ಹೊರಬಿದ್ದರು.

ಕೂಡಿದ ಗಿರಾಕಿಗಳೆಲ್ಲ ನಾಗಪ್ಪನ ವೃತ್ತಾಂತದ ಸಮಸ್ಯೆಯನ್ನು ಚರ್ಚಿಸುತ್ತ ತಮ್ಮ ತಮ್ಮ ಸ್ಥಳಗಳಿಗೆ ಹೊರಟು ಹೋದರು. ನಾಗಪ್ಪನಿಗೂ ಊಟದ ವೇಳೆಯಾಗುತ್ತ ಬಂದದ್ದರಿಂದ ಡಿಕ್ಕಿಯನ್ನು ಕರೆದುಕೊಂಡು ಸ್ವಸ್ಥಾನಕ್ಕೆ ತೆರಳಿದ.

## ೨. ಪಾತ್ರ-ಪಟು

"ಏನು ವಿದೂಷಕನ ಪಾರ್ಟು ಕಣ್ರೀ, ಅದು! ನಕ್ಕು ನಕ್ಕು ಹೊಟ್ಟೆ ಹುಣ್ಣಾಗಿ ಹೋಯ್ತು" ಎಂದು "ವಿಶ್ರಾಂತಿ-ಗೃಹದಲ್ಲಿಯ ಓರ್ವ ಗಿರಾಕಿ ಇನ್ನೋರ್ವ ಗಿರಾಕಿಗೆ ಹೇಳುತ್ತಿದ್ದ.

"ನಿನ್ನಿನ ನಾಟಕದ ಸುದ್ದೀ ಹೇಳ್ತೀರಾ? ಅಹುದು, ಸ್ವಾಮಿ, ಅಹುದು; ಮರೆಯದ ವಿಷಯ ಅದು" ಎಂದು ಎರಡನೆಯ ಗಿರಾಕಿ ನಾಟಕದ ವಿಷಯವನ್ನು ನೆನೆದು ನಗಲಿಕ್ಕೆ ಪ್ರಾರಂಭಿಸಿ, ಚಹವನ್ನು ತಪ್ಪುದಾರಿಯಿಂದ ಕುಡಿದು, ಕೆಮ್ಮಿ ಕೆಮ್ಮಿ ಕಣ್ಣೀರು ಸುರಿಸಹತ್ತಿದ.

"ಸಾವಧಾನ, ಸ್ವಾಮಿ, ಸಾವಧಾನ! ಹೇಳಿಯಾದರೂ ನಗರಿ, ಇಲ್ಲವೇ ನಕ್ಕ ಮೇಲಾದರೂ ಹೇಳಿರಿ. ಆಸ್ಪತ್ರೆ ದೂರದಲ್ಲಿದೆ." ಎಂದು ನಾಗಪ್ಪ ಮೂದಲಿಸಿ ನುಡಿದ.

ಗಿರಾಕಿಗಳು ಇದು ವರೆಗೂ ನಾಗಪ್ಪನನ್ನು ಕಂಡಿರಲಿಲ್ಲ. ಎಂದಿನಂತೆ ತನ್ನ ಚಹ ಕುಡಿಯುವುದು ಮುಗಿಸಿ, ಡಿಕ್ಕಿಯೊಂದಿಗೆ ಆಟವಾಡುತ್ತ ಮೂಲೆಯಲ್ಲಿಯ ತನ್ನ ಮುಕ್ಕಾಲು ಮಣೆಯ ಮೇಲೆ ಕುಳಿತುಕೊಂಡು ಗಿರಾಕಿಗಳ ವಿನೋದ ವೃತ್ತಿಯನ್ನು ಅವಲೋಕಿಸುತ್ತಿದ್ದ.

" ಅದೇನ್ರೀ, ನಾಗಪ್ನೋರು ನಿನ್ನೆ ನಾಟಕಕ್ಕೆ ಬಂದಿದ್ದಿಲ್ಲವೋ? " ಎಂದು ಊರ ಜನರೆಲ್ಲ ನಾಟಕವನ್ನು ನೋಡಲೇಬೇಕೆಂದು ಕಲ್ಪಿಸಿಕೊಂಡಿದ್ದ ಇನ್ನೋರ್ವ ಗಿರಾಕಿ ಆಶ್ಚರ್ಯದಿಂದ ಕೇಳಿದ.

" ಎಲ್ಲೀ ನಾಟಕಾ ನೋಡುವುದು, ಸ್ವಾಮಿ, ಇಲ್ಲಿಯೇ ನಡೆಯುತ್ತಿರುವ ದೈನಂದಿನದ ನಾಟಕವೇನು ಕಮ್ಮಿ ಇರುತ್ತದೆಯೇ? ಸೂಕ್ಷ್ಮಾವಲೋಕನೆ ಮಾಡಿ ನೋಡಿದಲ್ಲಿ ಜೀವನದ ಸರ್ವ ಸನ್ನಿವೇಶಗಳಲ್ಲಿಯೂ ಒಂದು ಬಗೆಯ ನಾಟಕವು ನಡೆದೇ ಇದೆ! ಇರಲಿ, ಬಿಡಿ; ತಾವು ಹೇಳುವ ನಾಟಕ ಯಾವುದು? ಏನು ಅಂಥಾ ಹಾಸ್ಯದ ವಿಷಯ?" ಎಂದು ನಾಗಪ್ಪ ಪ್ರಶ್ನೆಮಾಡಿದ.

" ನಮ್ಮೂರ 'ಭುವನೇಶ್ವರೀ' ಥೇಟರಿಗೆ ಬಂದಿದೆಯಲ್ರೀ, ಆ 'ಕಲೋತ್ತೇಜಕ ಕಂಪನಿ'! ಅದೇ ನಾಟಕ ನಾನು ಹೇಳೋದು. ನಿನ್ನೆ ರಾತ್ರಿ ಅವರು 'ಜಾನಕೀ ಪರಿಣಯ'ವೆಂಬ ನಾಟಕವನ್ನು ಆಡಿ ತೋರಿಸಿದರು. "

" ಆದರೆ 'ಜಾನಕೀ, ಪರಿಣಯ' ದಲ್ಲಿ ಏನು ಹಾಸ್ಯ...."

" ಅದೇ ಹೇಳ್ತೇನಿ, ಕೇಳಿ. ಆ ನಾಟಕದ ಮೂರನೇ ಅಂಕದಲ್ಲಿ ಜನಕ ಮಹಾರಾಜನ ದರ್ಬಾರು ನಡೆದಿರುವಾಗ ಅಲ್ಲಿಯ ರಾಜವಿದೂಷಕನು ಒಂದು ಮೋಜು ಮಾಡಿಬಿಟ್ಟ. ಅದೇನಂದ್ರೆ, ಅವನ ಗೆಳೆಯ...." ಎಂದು ಹೇಳುತ್ತಲೇ ನಾಟಕದ ವಿನೋದ ನೆನಪಾಗಿ ಗಿರಾಕಿ ಪುನಃ ಪುನಃ ಗಹಗಹಿಸಿ ನಗಲಿಕ್ಕೆ ಪ್ರಾರಂಭಿಸಿಬಿಟ್ಟ. ಅವನಿಗೆ ಮುಂದಿನ ಮಾತುಗಳನ್ನಾಡಲಿಕ್ಕೇ ಬಾರದಂತಾಯಿತು.

" ಸ್ವಲ್ಪ ಸುಧಾರಿಸಿಕೊಂಡು ಹೇಳಿ ಬಿಡ್ರಿ, ಸ್ವಾಮಿ, ಅದೆಂತಹ ಮೋಜು?" ಎಂದು ನಾಗಪ್ಪ ಕೇಳಿದ.

" ಹೇಳ್ತೇನೆ, ಸ್ವಾಮೀ, ಹೇಳ್ತೇನೆ. ಹೇಳೇ ನಗ್ತೇನಿ ನೋಡಿ

ಈ ಸಾರಿ. ಆ ರಾಜದರ್ಬಾರು ನಡೆದ ಕಾಲಕ್ಕೆ ನಾಟಕದ ಒಂದು ಪಾತ್ರ ವಿದೂಷಕನನ್ನು ಕುರಿತು "ನಿನ್ನ ತಂದೆ ಪ್ರಾಮಾಣಿಕನೋ?" ಅಂತಾ ಪ್ರಶ್ನೆಮಾಡಿತು. ಈ ಪ್ರಶ್ನೆಗೆ ವಿದೂಷಕನು "ಹೌದು, ಅದರಲ್ಲೇನು ಸಂಶಯ?" ಎಂದು ಪರಿಪ್ರಶ್ನೆಮಾಡಿದ. ಇದಕ್ಕೆ ಪ್ರತಿಯಾಗಿ "ನೀನನ್ನುವುದಕ್ಕೆ ಪುರಾವೆ ಏನು?" ಎಂದು ಆ ಪಾತ್ರ ಪುನಃ ಪ್ರಶ್ನೆಮಾಡಿದ. ಈ ಪ್ರಶ್ನೆಯ ಉತ್ತರವೇ ನೋಡಿ, ಮೋಜು ಮಾಡಿದ್ದು. "ಪುರಾವೆ ಕೇಳುವಿರಾ? ಇಷ್ಟೇ ನೋಡಿ ನಮ್ಮೆಪ್ಪ ನಮ್ಮೂರ ಮುನಿಸಿಪಲ್ ಚುನಾವಣೆಗೆ ನಿಂತಾಗ ಆರಿಸಿ ಬರಲಿಲ್ಲ," ಅಂತಾ ವಿದೂಷಕ ಹೇಳಿದ. ಸರಿ, ಥೇಟರಿನ ತುಂಬಾ ಗೊಂದಲವೇ ಗೊಂದಲ ನೋಡಿ. ಕೂಡಿದ ಜನರೆಲ್ಲ ನಕ್ಕು ನಕ್ಕು ಹಣ್ಣಾಗಿಬಿಟ್ಟರು. ಸಿಗರೇಟ ಸೇದುವವರು ಕೆಮ್ಮುಹತ್ತಿದರು; ತಂಬಾಕ ತಿನ್ನುವವರು ಗಂಟಲಿಗೆ ಹಚ್ಚಿಕೊಂಡು ಬಿಟ್ಟರು; ಸ್ವಲ್ಪದರಲ್ಲಿ ಹೇಳಬೇಕೆಂದರೆ ಅದೊಂದು ದೊಡ್ಡ ಪ್ರಕರಣವೇ ಆಗಿ ಹೋಯ್ತು ನೋಡಿ" ಎಂದು ನುಡಿದ ಗಿರಾಕಿ.

ನಾಗಪ್ಪನಿಗೆ ಈ ಪ್ರೇಕ್ಷಕವೃಂದದ ಹಾಸ್ಯರಸ ಸೇವನೆಯೇ ಚಮತ್ಕಾರವಾಗಿ ಕಂಡುಬಂತು.

"ಅಲ್ರೀ, ಸ್ವಾಮೀ, 'ಜಾನಕೀ ಪರಿಣಯ'ಕ್ಕೂ, ವಿದೂಷಕನ ತಂದೆಯ ಪ್ರಾಮಾಣಿಕತನಕ್ಕೂ ಮತ್ತು ಮುನಿಸಿಪಲ್ ಚುನಾವಣೆಗೂ ಏನೂ ಸಂಬಂಧ?" ಎಂದು ಕೇಳಿದ.

"ಅದ್ಯಾತಕ್ಕ ಬೇಕ್ರೀ ಸಂಬಂಧ? ವಿದೂಷಕ ಅಂದ್ರ ನಗಿಸುವ ಕೆಲಸ ಮಾಡೋವಾ; ಅಷ್ಟು ಮಾಡಿಬಿಟ್ರಾ ತೀರಿತು. ಮತ್ತೇನು ಬೇಕು ಸಂಬಂಧಾ?" ಎಂದು ಗಿರಾಕಿ ತುಂಬಾ ಸಾಹಿತ್ಯ ಸಾಮ್ರಾಟನಂತೆ ಅಭಿಪ್ರಾಯ ವ್ಯಕ್ತಮಾಡಿಬಿಟ್ಟ.

"ಸಂದರ್ಭವಿಲ್ಲದೇ ಹಾಸ್ಯರಸದ ಪರಿಣಾಮ ವಿಚಾರಗಳಿಗೆ ಸರಿಬರುವುದಿಲ್ಲ, ಸ್ವಾಮೀ! ನಮ್ಮ ಈಗಿನ ಪ್ರೇಕ್ಷಕವೃಂದಕ್ಕೆ ಏನಾದರೂ ನಗಲಿಕ್ಕೆ ಸಿಕ್ಕರಾಯಿತು, ನಕ್ಕುಬಿಡುತ್ತಾರೆ. ಆದರೆ ಅದರಲ್ಲಿ ಸಾರಾಸಾರ ವಿಚಾರ ಇರುವುದಿಲ್ಲ. ನೀವು ನಿಜವಾದ ಹಾಸ್ಯ ಸಂದರ್ಭ

ಒಂದನ್ನು ಕೇಳಿಲಿಚ್ಛಿಸಿದರೆ ನಾನು ಹೇಳಬಲ್ಲೆ. ಆದರೆ ತಮಗೆ ರುಚಿಸುವುದೋ........"

"ಇದೇನು ಮಾತ್ರೀ ನಾಗಪ್ನೋರೆ? ತಮ್ಮ ಕಥೀ ಎಂದಾದ್ರೂ ಕೇಳದ್ಹಾಂಗ ಇರ್ತಾವ್ರೇ? ಎಂದು ಗಿರಾಕಿ ಉತ್ತೇಜಕವಾಣಿಯಲ್ಲಿ ಹೇಳಿತು.

"ನಾನು ಈಗ ಹೇಳ್ಹೋದು ಕತೆಯಲ್ಲ, ಸ್ವಾಮೀ! ನಮ್ಮ ತಂಗಿಯ ಮಗ ಸುಬ್ಬೂಗೆ ಪ್ರಾಪ್ತವಾದ ಅನುಭವ" ಎಂದು ನಾಗಪ್ಪ ತಾಂಬೂಲ ಸೇವಿಸುತ್ತ ಸುಬ್ಬೂನ ವೃತ್ತಾಂತ ಪ್ರಾರಂಭಿಸಿದ.

"ನನ್ನ ತಂಗಿ ಚಿಕ್ಕಂದಿನಲ್ಲಿಯೇ ವಿಧವೆಯಾಗಿಬಿಟ್ಟಿದ್ದರಿಂದ ನನ್ನಲ್ಲಿಯೇ ಬಂದು ಇದ್ದುಕೊಂಡಿದ್ದಳು. ಅವಳಿಗೆ ಸುಬ್ಬೂ ಒಬ್ಬನೇ ಮಗ. ಸೂಬ್ಬೂ ಕನ್ನಡ ಶಾಲೆಗೆ ಹೋಗುತ್ತಿರುವಾಗಲೇ ಅವನು ತನ್ನ ಭಾವೀ ಜೀವನದ ಮಾದರಿಯನ್ನು ತೋರಿಸಲಿಕ್ಕೆ ಪ್ರಾರಂಭ ಮಾಡಿದ್ದ. ಶಾಲೆಯಲ್ಲಿಯ ಸರ್ವ ಶಿಕ್ಷಕರ ಫಾರ್ಸು ಮಾಡುವುದು ಅವನಿಗೆ ಸ್ವಾಭಾವಿಕವಾಗಿಯೇ ಸಾಧಿಸಿತ್ತು. ಅನುಕರಣೆಯೇ ಉಚ್ಚತಮವಾದ ಮುಖಸ್ತುತಿಯೆಂದು ತಿಳಿದುಕೊಂಡಿದ್ದನೋ ಏನೋ ಸುಬ್ಬು. ಅದೇನೆ ಇರಲಿ, ತನ್ನ ಮಿತ್ರಮಂಡಳಿಯಲ್ಲಿ ಮಾತ್ರ ಈ ಫಾರ್ಸಿನಿಂದ ಶಿಫಾರ್ಸು ಪಡೆದು ಅವರೆಲ್ಲರ ಆದರಕ್ಕೂ ಪ್ರೀತಿಗೂ ಪಾತ್ರನಾಗಿದ್ದ. ಶಿಕ್ಷಕರು ವರ್ಗಕ್ಕೆ ಬರುವುದು ತಡವಾಯಿತೆಂದರೆ ತೀರಿತು; ಸುಬ್ಬೂ ಅವರ ಶಿಕ್ಷಣ ಕಾರ್ಯವನ್ನು ತಾನೇ ಸಾಗಿಸಿಬಿಡುತ್ತಿದ್ದ. ಇಂಗ್ಲೀಷ್ ಶಾಲೆಗೆ ಬಂದ ಮೇಲಂತೂ ಈ ಪಾತ್ರಸಾಧನೆಯನ್ನು ತುಂಬಾ ಅಭ್ಯಾಸ ಮಾಡಿಬಿಟ್ಟಿದ್ದ; ಅಥವಾ ಪಾತ್ರಸಾಧನೆಯೇ ಅವನ ಅಭ್ಯಾಸವಾಗಿತ್ತೆಂದರೂ ಅತಿಶಯೋಕ್ತಿಯಾಗಲಾರದು. ಈ ಕಾರಣವಾಗಿಯೇ ಅವನ ಗೆಳೆಯರೆಲ್ಲ ಸುಬ್ಬೂನಿಗೆ "ಪಾತ್ರ-ಪಟು" ಎಂಬ ಬಿರುದಾಂಕಿತವನ್ನು ದಯಪಾಲಿಸಿದ್ದರು. ಈ ನಾಮಾಂಕಿತ ದೊರೆತ ಮೇಲಂತೂ ಸುಬ್ಬೂ ಅದಕ್ಕೆ ಬಾಧೆಬರದಂತೆ ವರ್ತಿಸುತ್ತಿದ್ದ. ಶಾಲೆಯ ವರ್ಷ ಸಮಾರಂಭದಲ್ಲಿ ಜರಗುವ ಎಲ್ಲ ನಾಟಕಗಳಲ್ಲಿಯೂ ಸುಬ್ಬೂನೇ ವಿನೋದಪಾತ್ರ ವಹಿಸುತ್ತಿದ್ದ. ಇಂಗ್ಲೀಷ್ ಐದನೇ ಇಯತ್ತೆಗೆ

ಬರುವಷ್ಟರಲ್ಲಿ ಸೂಬ್ಬೂ ಶಾಲೆಯ ಅಭ್ಯಾಸಕ್ರಮವನ್ನು ತ್ಯಜಿಸಿ ಪಾತ್ರ ಪಟುತ್ವದಲ್ಲಿಯೇ ಹೆಚ್ಚು ವೇಳೆಯನ್ನು ಕಳೆಯುತ್ತಿದ್ದ.

ಮಗನು ಈ ರೀತಿಯಲ್ಲಿ ದಿನೇ ದಿನೇ ಕಾಲಹರಣ ಮಾಡುತ್ತಿರುವುದನ್ನು ಕಂಡು ನನ್ನ ತಂಗಿಗೆ ತುಂಬಾ ಚಿಂತೆಯಾಗಿತ್ತು. ಅಂತೆಯೇ ಮೇಲಿಂದ ಮೇಲೆ ನನಗೆ "ಎಲ್ಲಿಯಾದರೂ ಸಾಹೇಬರಿಗೆ ಹೇಳಿಕೊಂಡು ಸುಬ್ಬೂನಿಗೆ ಒಂದು ಹಳ್ಳಿಯ ಅಂಚೆಯವನ ಕೆಲಸವನ್ನಾದರೂ ತೀವ್ರವಾಗಿ ಕೊಡಿಸಿ ಬಿಡಪ್ಪಾ" ಅಂತಾ ಚಿಂತಾಯುಕ್ತ ದನಿಯಲ್ಲಿ ಹೇಳುತ್ತಿದ್ದಳು. ಸುಬ್ಬೂನಂತೂ ದಿನಗತವಾದ ಹಾಗೆ ಶಾಲೆಯ ಪಾಠಗಳನ್ನು ಏನೂ ಕಲಿಯುತ್ತಿರಲಿಲ್ಲ. ತಾಯಿಯ ಮುಂದೆ ಏನಾದರೂ ಕತೆ ಹೇಳಿ ದುಡ್ಡು ಬಿಚ್ಚಿಸುತ್ತಿದ್ದ. ಪಾಪ, ಅವಳಿಗೇನು ಗೊತ್ತು? ಮಗಾ, ಇಂಗ್ರಜೀ ಕಲೀತಾನೆ ಅಂತಾ ತಿಳಿದು ಸುಬ್ಬೂ ಕೇಳಿದಾಗೆಲ್ಲ ಅಲ್ಲಲ್ಲಿ ಕೂಡಿಟ್ಟ ಹಣವನ್ನೆಲ್ಲ ಕೊಟ್ಟು ಬಿಡುತ್ತಿದ್ದಳು.

ಸುಬ್ಬೂಗೆ ಚಿಕ್ಕಂದಿನಿಂದಲೇ ಚಹ ಕುಡಿಯುವ ಚಟ ತುಂಬಾ ಅಂಟಿಕೊಂಡಿತ್ತು. ಈ ಚಟದ ತೃಪ್ತಿಗೆ ದುಡ್ಡು ಬೇಕಷ್ಟೇ? ಈ ದುಡ್ಡನ್ನು ದೊರಕಿಸಲಿಕ್ಕೆ ಸುಬ್ಬೂ ಹೂಡಿದ ತಂತ್ರಗಳು ಮಾದರಿಯವಾಗಿದ್ದುವು. ಉದಾಹರಣೆಗೆ ನಿಮಗೆ ಒಂದೇ ವಿಷಯ ಹೇಳುತ್ತೇನೆ. ತಾಯಿಗೆ ಅವನು ತಿಂಗಳಿಗೊಂದು ಸಲ ಕೆಲವೊಂದು ಪುಸ್ತಕಗಳ ಯಾದೀ ತಯಾರಿಸಿ ಕೊಡುತ್ತಿದ್ದ. ಒಂದು ದಿನ ನನ್ನ ತಂಗಿ ನನಗೆ ಸುಬ್ಬೂನ ಪುಸ್ತಕಗಳ ಯಾದಿಯನ್ನು ತೋರಿಸಿದಳು. ಮತ್ತು "ತಿಂಗಳಿಗೊಮ್ಮೆ ಸುಬ್ಬೂನ ಪುಸ್ತಕ ಬದಲಾಗುತ್ತವೇನಪ್ಪಾ?" ಎಂದು ಕೇಳಿದಳು.

ನಾನು ಸುಬ್ಬೂ ಬರೆದ ಯಾದಿಯನ್ನು ಅವಲೋಕಿಸಿದೆ; ಅಂದರೆ ಓದಲಿಲ್ಲ. ಏಕೆಂದರೆ ಯಾದಿಯಲ್ಲಿ ನನಗೂ ಕೂಡ ಓದಲಿಕ್ಕೆ ಬಾರದಂಥ ಅಕ್ಷರಗಳಲ್ಲಿ ಸುಬ್ಬೂ ಏನೇನೋ ಬರೆದಿದ್ದ. ನನ್ನ ಕೆಲಸ ನಿಮಗೆ ಗೊತ್ತಿದೆಯಷ್ಟೇ? ಸಾವಿರಾರು ಪ್ರಕಾರದ ಜನರ ಕೈಬರಹವನ್ನು ನಾನು ಪತ್ರ ಹಂಚುವಾಗ ಓದಬೇಕಾಗುತ್ತಿತ್ತು. ಆದರೂ ನನಗೆ ಸುಬ್ಬೂನ ಮಾದರಿಯ ಬರಹವು ತಿಳಿಯದಂತಾಗಿತ್ತು.

ಏನೇನೋ ಬರೆದು ಬಿಟ್ಟಿದ್ದ. ಪುಸ್ತಕಗಳ ಕ್ರಯದ ಪಟ್ಟಿ ಮಾತ್ರ ಸ್ಪಷ್ಟವಾಗಿ ಕಾಣಿಸಿದ್ದ. ಅಲ್ಲಲ್ಲಿ ಮಾತ್ರ ಕೆಲವು ಹೆಸರುಗಳು ತಿಳಿದು ಬಂದವು. ಉದಾಹರಣಾರ್ಥ: "ಕಿರಾತಾರ್ಜುನೀಯ ಯುದ್ಧ," "ಸೇಕ್ಸ್ ಪೇರ್ ನಾಟಕ," "ಇಂಟ್ರಂಡಂಟ," ಇನ್ನೂ ಏನೇನೋ ಬರೆದು ಬಿಟ್ಟಿದ್ದ. ನನಗಾದರೂ ಇಂಗ್ಲೀಷಿನಲ್ಲಿ ಅಷ್ಟು ಜ್ಞಾನವಿರಲಿಲ್ಲ. ಕೇವಲ ಪತ್ರಗಳ ಮೇಲಿನ ವಿಳಾಸ ಮಾತ್ರ ಓದಲಿಕ್ಕೆ ಕಲಿತುಕೊಂಡಿದ್ದೆ. ಇದ್ದರೂ ಇರಬಹುದು ಇವೆಲ್ಲ ಪುಸ್ತಕಗಳು ಎಂದು ನನಗೆ ಪರಿಚಯವಿದ್ದ ಓರ್ವ ಶಾಲೆಯ ಶಿಕ್ಷಕರನ್ನು ಇದನ್ನು ಕುರಿತು ವಿಚಾರಿಸಲಿಕ್ಕೆ ಹೋದಾಗ ಸುಬ್ಬೂನ ಸೋಗು ಹೊರಬಿದ್ದಿತು. ಇದು ತಿಳಿದ ಮೇಲಂತೂ ನಮ್ಮ ತಂಗಿ ಸುಬ್ಬೂನನ್ನು ಶಾಲೆಗೆ ಕಳಿಸಿ ಉಪಯೋಗವಿಲ್ಲವೆಂದು ಅವನನ್ನು ಎಲ್ಲಿಯಾದರೂ ಒಂದು ಅಂಗಡಿಯಲ್ಲಿ ಕೆಲಸಕ್ಕೆ ಹಚ್ಚಿಕೊಡಬೇಕೆಂದು ನನಗೆ ಹೇಳಿದಳು.

ನಾನು ಸುಬ್ಬೂನ ಸಲುವಾಗಿ ಉದ್ಯೋಗವನ್ನು ಹುಡುಕುತ್ತಿರುವಾಗ ನಮ್ಮೂರಿಗೆ ಒಂದು ನಾಟಕ ಕಂಪನಿಯು ಬಂದಿತ್ತು. ಸುಬ್ಬೂ ಯಾವ ಮಾಯೆಯಿಂದಲೋ ಹೋಗಿ ಅದರಲ್ಲಿ ಸೇರಿಕೊಂಡುಬಿಟ್ಟಿದ್ದ. ನಾನು ಹಳ್ಳಿಗಳಿಂದ ಪುನಃ ನಮ್ಮೂರಿಗೆ ಬರುವಷ್ಟರಲ್ಲಿ ಕಂಪನಿಯು ಹೊರಟು ಹೋಗಿತ್ತು; ಅದರ ಜೊತೆಯಲ್ಲಿ ಸುಬ್ಬೂನೂ ಮಾಯವಾಗಿದ್ದ. ನಾನು ಆ ಕಂಪನಿಯಿದ್ದಲ್ಲಿಗೆ ಹೋಗಿ ಎಷ್ಟು ಬಲವಾಗಿ ತಿಳಿಸಿ ಹೇಳಿದರೂ ಸುಬ್ಬೂ ಕೇಳಲಿಲ್ಲ; ಕಂಪನಿಯು ಕೂಡ ಹೊರಟುಬಿಟ್ಟ. "ಎಲ್ಲಿಯಾದರೂ ದುಡಿಯುವುದಷ್ಟೇ? ಅಂಗಡಿಯೇನು, ಕಂಪನಿಯೇನು?" ಎಂದು ನಾನು ತಂಗಿಗೆ ಸಮಾಧಾನ ಹೇಳಿದೆ. ಅವಳಿಗೂ ಇದು ಸಮಂಜಸ ಕಂಡುಬಂತು. ಸ್ವಲ್ಪೇ ದಿನಗಳಲ್ಲಿಯೇ ಸುಬ್ಬೂನಿಂದ ಆಗಾಗ ಪತ್ರಗಳೂ ಬರಹತ್ತಿದವು. ಅವುಗಳಲ್ಲಿ ಅವನು ತನ್ನ ಕಂಪನಿಯಲ್ಲಿ ಕೈತುಂಬ ಪಗಾರ ಸಿಗುತ್ತಿದೆಯೆಂದೂ, ಸರ್ವರಿಗೂ ತನ್ನ ಪಾತ್ರಪಟುತ್ವವು ಮಾನ್ಯವಾಗಿದೆಯೆಂದೂ, ಬರೆಯುತ್ತಿದ್ದ. ಆಗಾಗ ತಾಯಿಗೆ ನಾಲ್ಕಾರು ರೂಪಾಯಿಗಳನ್ನೂ ಕಳುಹಿಸುತ್ತಿದ್ದ. ಇದನ್ನು ಕಂಡು "ಸುಬ್ಬೂ ದಾರಿಗೆ ಹತ್ತಿಕೊಂಡ."

ಎಂದು ನಮಗೆಲ್ಲ ಒಂದು ಬಗೆಯ ಸಂತೋಷ-ಸಮಾಧಾನವಾಗಿತ್ತು. ಆದರೆ ಈ ಸಮಾಧಾನವು ಬಹಳ ದಿನಗಳ ವರೆಗೆ ಉಳಿಯಲಿಲ್ಲ.

ಏಕೆಂದರೆ ಒಂದು ಸಾರೆ ಸುಬ್ಬ್ಯಾ ಬರೆದ ಪತ್ರದಲ್ಲಿ ಎಲ್ಲವೂ ಕ್ಷೇಮವಾಗಿರಲಿಲ್ಲ. ಅದರಲ್ಲಿ ತಾನಿರುವ ಕಂಪನಿಯು ಯಾವುದೋ ಕಾರಣದಿಂದ ಒಡಕು-ಒಡಕಾಗಿ ತನ್ನ ನೌಕರಿಗೆ ಬಾಧೆ ಬಂದಿದೆ ಎಂದು ಕಾಣಿಸಿದ್ದ. ನಮ್ಮ ಪ್ರಾಂತದ ನಾಟಕ ಕಂಪನಿಗಳ ಸಮಾಚಾರ ತಮಗೆ ಗೊತ್ತಿದ್ದ ವಿಷಯವಷ್ಟೇ? ಅದೇನೋ ಹೇಳುತ್ತಾರಲ್ಲ ಆಧುನಿಕ ಶಾಸ್ತ್ರಜ್ಞರು—ಈ ನಮ್ಮ ಪೃಥ್ವಿಯು ಮೊದಲು ಒಂದೇ ಒಂದಾಗಿ ಉರಿಯುವ ಸೂರ್ಯನ ಭಾಗವಾಗಿತ್ತಂತೆ. ಅನಂತರ ಅದು ಜೋರಾಗಿ ತಿರುಗಿ ತಿರುಗಿ ಪ್ರಗತಿ ಹೊಂದುತ್ತಾ ಅದರಿಂದ ಅನೇಕ ಗೃಹಗಳೂ ಮತ್ತು ಅವುಗಳ ಕೂಡ ನಾವಿರುವ ಪೃಥ್ವಿಯೂ ಉದ್ಭವಿಸಿದುವಂತೆ. ಅದೇ ಪ್ರಕಾರವಾಗಿ ನಮ್ಮ ನಾಟಕ ಕಂಪನಿಗಳೂ ಊರಿಂದೂರಿಗೆ ತಿರುಗುತ್ತ ಹೋದಹಾಗೆಲ್ಲ ಅವುಗಳಿಗೂ ಗೃಹಚಾರ ಬಂದುಬಿಟ್ಟು ಒಂದಿದ್ದಲ್ಲಿ ಎರಡು, ಎರಡರಿಂದ ನಾಲ್ಕು, ನಾಲ್ಕರಿಂದ ಸೊನ್ನೆ ಅಂತ ಎಲ್ಲಾ ಬಯಲಾಗಿ ಹೋಗುತ್ತವೆ ನೋಡಿ.

ಅಂತೂ ಸುಬ್ಬ್ಯಾನಿಗೆ ಮಾತ್ರ ಈ ಕಂಪನಿಯ ಗತಿಯಿಂದ ನಿರುದ್ಯೋಗ ಬಂದುಬಿಟ್ಟಿತು. ಅಂದರೆ ನಮ್ಮ ಸುಬ್ಬ್ಯಾ ಉದ್ಯೋಗಿ ಅಂತ ಹೇಳಿದಂತಾಗಲಿಲ್ಲ. ಪಾತ್ರಪಟುತ್ವ ಒಂದನ್ನುಳಿದು ಯಾವುದರಲ್ಲಿಯೂ ಅವನಿಗೆ ಮನಸ್ಸಿರಲಿಲ್ಲ. ಈಗಲಾದರೋ ಆ ಉದ್ಯೋಗ ದೊರೆಯದಂತಾಗಿ ಬಿಟ್ಟಿತು. ಬೇರೆ ಯಾವುದಾದರೂ ನಾಟಕ ಕಂಪನಿಗಳಿಗೆ ಸೇರಿಕೊಂಡರೂ ಅವೂ ಕೂಡ ಹೀಗೆಯೇ ಗೃಹಗತಿಯಿಂದ ಇಂದಿಲ್ಲ ಮುಂದು ಬಯಲಾಗುವವೇ ಎಂದು ತಿಳಿದುಕೊಂಡು ನನ್ನ ತಂಗಿ ನನ್ನಿಂದ ಅವನಿಗೆ ಮನೆಗೆ ಬರಲಿಕ್ಕೆ ಪತ್ರವನ್ನು ಬರೆಯಿಸಿ ಬಿಟ್ಟಳು. ಅದನ್ನೋದಿದ ಸುಬ್ಬ್ಯಾ ಬಂದುಬಿಟ್ಟ.

ಆಗ ಪ್ರಾರಂಭವಾಯಿತು ನೋಡಿ; ನಮ್ಮ ಸುಬ್ಬ್ಯಾನ ನಿಜವಾದ ಪರೀಕ್ಷೆ. ಆ ಪರೀಕ್ಷೆಯ ತಯಾರಿ ಎಂದರೆ ಓದು ಬರೆಹಗಳಲ್ಲ. ಪ್ರತಿದಿನ ಮುಂಜಾನೆ ಎದ್ದವನೇ ಅಂಗಡಿಗಳಿಗೆಲ್ಲ ಹೋಗಿ ಅರ್ಜಿಮಾಡಿ

ಕೊಳ್ಳುವುದು. “ಬೇಕಾಗಿದೆ” ಎಂದು ಎಲ್ಲಿ ಸುದ್ದಿ ಹತ್ತುವುದೋ ಅಲ್ಲಿಗೆ ನೇರವಾಗಿ ಹೋಗಿ “ಬೇಡ ಈಗ” ಎಂದು ಕಳಿಸಿಕೊಂಡು ಬರುವುದು. ಎಲ್ಲಿ ಹೋದರೂ, ಎಷ್ಟು ಯತ್ನ ಮಾಡಿದರೂ ಯಶಸ್ಸು ದೊರಿಯಲಿಲ್ಲ. ಮೂರು ತಿಂಗಳುಗಳ ವರೆಗೆ ಹುಡುಕಿದರೂ ಉದ್ಯೋಗ ಸಿಕ್ಕಲಿಲ್ಲ. ಇದಕ್ಕೆ ಇನ್ನೂ ಒಂದು ಕಾರಣವಿತ್ತು. ಇದನ್ನು ನಾನು ಸುಬ್ಬೂಸಿಂದಲೇ ತಿಳಿದುಕೊಂಡೆ. ಸುಬ್ಬೂ ಅರ್ಜಿ ಮಾಡುತ್ತಿದ್ದ ಅಂಗಡಿಗಳಲ್ಲೆಲ್ಲ ಅವನು ಸ್ವತಃ ಹೋದಾಗ ಅಂಗಡಿಯವರು ಅವನಿಗೆ ಶುದ್ಧ ಬರೆಹ ಹೇಳುತ್ತಿದ್ದರಂತೆ. ಸರಿ, ಸುಬ್ಬೂ ಬರೆಯುತ್ತಿದ್ದ ಲಿಪಿಗಳನ್ನು ನಾನೂ ಕೂಡ ಓದಲಿಕ್ಕೆ ಸಾಧ್ಯವಿರಲಿಲ್ಲೆಂದು ಈಗಾಗಲೇ ನಿಮಗೆ ತಿಳಿಸಿರುವೆನಲ್ಲವೇ? ಅಂದ ಮೇಲೆ ಅವನಿಗೆ ಅಂಗಡಿಯಲ್ಲಿ ಕಾರಕೂನಿಕೆ ದೊರಿಯುವದೆಂತು? ಅವನು ಬರೆಯುವ ಅಕ್ಷರಗಳ ಕಲ್ಪನೆಯನ್ನು ನಿಮಗೆ ಕೊಡಬೇಕಾದರೆ ಸ್ವಲ್ಪ ಕಷ್ಟ. ನಮ್ಮ ಮುಸಲ್ಮಾನ ಬಾಂಧವರ ಮನೆಗಳ ಹೊರಗೋಡೆಗಳಿಗೆ ಕೆಮ್ಮಣ್ಣು ಸಾರಿಸಿ ಮೇಲೆ ಸುಣ್ಣದ ಅರಿವೆಯಿಂದ ಸಿಂಪಡಿಸಿರುವುದನ್ನು ತಾವು ನೋಡಿರಬಹುದು. ನಮ್ಮ ಸುಬ್ಬೂನ ಅಕ್ಷರಗಳು ಸಣ್ಣ ಪ್ರಮಾಣದ ಮೇಲೆ ಅಂತಹ ಚಿನ್ಹಗಳೆಂದೇ ಹೇಳಬಹುದು. ಅಂತೂ ಇಂತೂ ಸುಬ್ಬೂಗೆ ಎಲ್ಲಿಯೂ ಉದ್ಯೋಗ ದೊರಕುವ ಯೋಗ ಕಾಣಿಸಲಿಲ್ಲ.

ಈ ರೀತಿಯಲ್ಲಿ ನಿರಾಶೆಯಿಂದ ಅತ್ತಿತ್ತ ಓಡಿಸಲ್ಪಟ್ಟ ಜೇನ್ನೊಣದಂತೆ ಸುಬ್ಬೂ ಅಲೆದಾಡುತ್ತಿರುವಾಗ ನಮ್ಮೂರ ವಾಚನಾಲಯದಲ್ಲಿ ಬಂದಿದ್ದ ಒಂದು ವರ್ತಮಾನ ಪತ್ರದಲ್ಲಿಯ ಜಾಹೀರಾತು ಅವನ ಕಣ್ಣಿಗೆ ಬಿತ್ತು. ಅದರಲ್ಲಿ ಹೀಗೆ ಬರೆದಿತ್ತು.

“ಚಪಲನೂ, ಅಚ್ಚುಕಟ್ಟುಳ್ಳವನೂ, ಸ್ವಲ್ಪ ಇಂಗ್ರೇಜಿ ಜ್ಞಾನವಿದ್ದವನೂ ಆದ ಓರ್ವ ತರುಣನು ಬೇಕಾಗಿದ್ದಾನೆ!

ಸಂಬಳ ತಿಂಗಳೊಂದಕ್ಕೆ ಇಪ್ಪತ್ತು ರೂಪಾಯಿ!

ವಿಳಾಸ:—ಮೆಸರ್ಸ ದಿಲ್‌ಖುಷ್ ಅಂಡ್ಕ ಕಂಪನಿ, ದಾದರ ರೋಡ್, ಬಾಂಬೇ.”

ಈ ಜಾಹೀರಾತು ಓದಿ ಸುಬ್ಬೂನಿಗೆ ಪುನಃ ಆಶಾಂಕುರವಾಯಿತು. ಅಷ್ಟೊತ್ತಿಗೆ ಅವನಿಗೆ ನಮ್ಮೂರೂ ಬೇಜಾರು ಬಂದಿತ್ತು. ಅದರಲ್ಲಿಯೂ ಆ ನಾಟಕ ಕಂಪನಿಯಲ್ಲಿ ಸೇರಿದಂದಿನಿಂದ ಊರೂರು ತಿರುಗಿ ಅವನಿಗೆ ಒಂದೇ ಜಾಗೆಯಲ್ಲಿರುವುದು ಸೇರದಂತಾಗಿತ್ತು. ಈಗ ಲಾದರೋ ಮುಂಬಯಿ ಶಹರದ ಕಾಲ್ಪನಿಕಚಿತ್ರವು ಚಿತ್ತಾಕರ್ಷಕವಾಗಿ ಹೊಳೆದು ಬಂತು. ತಾಯಿಗೆ ತನ್ನ ಭಾವೀ ಜೀವನದ ಬೆಡಗನ್ನು ವರ್ಣಿಸಿ ಅವಳಿಂದ ಪ್ರವಾಸದ ಖರ್ಚನ್ನು ದೊರಕಿಸಿಕೊಂಡು ಮುಂಬಯಿ ನಗರಕ್ಕೆ ಪ್ರಯಾಣ ಬೆಳೆಸಿದ. ಉಗಿಬಂಡಿಯು ದಾದರ ನಿಲ್ದಾಣಕ್ಕೆ ಬಂದಾಗ ಸುಬ್ಬೂನ ಖಜಾನಿ ಮಾಯವಾಗುತ್ತ ಬಂದಿತ್ತು. ಅಂತೆಯೇ ಅವನು ನಗರ ಸೌಂದರ್ಯಾವಲೋಕನವನ್ನು ತ್ಯಜಿಸಿ ಮೊದಲು ಮೆಸರ್ಸ್ ದಿಲ್‌ಖುಷ್ ಕಂಪನಿಯ ವಿಳಾಸವನ್ನು ಜ್ಞಾಪಿಸಿಕೊಂಡು ನಿಲ್ದಾಣದಿಂದ ಹೊರಟ.

ಸುಬ್ಬೂ ದಿಲ್‌ಖುಷ್ ಕಂಪನಿಗೆ ಮುಟ್ಟುವುದರಲ್ಲಿ ನಿಮಗೆ ಆ ಹೆಸರುಳ್ಳ ಕಂಪನಿಯ ಪರಿಚಯ ಮಾಡಿಕೊಡುವುದು ಅವಶ್ಯವಿದೆ. ಮೆಸರ್ಸ್ ದಿಲ್‌ಖುಷ್ ಕಂಪನಿಯ ಬಂಧುಗಳು ಮುಂಬಯಿಯ ಶ್ರೀಮಂತ ಸಮಾಜಕ್ಕೆ ಬೇಕಾಗುವ ಸರ್ವ ಪದಾರ್ಥಗಳನ್ನೂ ನಿಯಮಿತ ಸಮಯಕ್ಕೆ ಒದಗಿಸಿಕೊಡುವ ಏಜೆಂಟರು. ಮೋಟಾರ ಕಾರುಗಳಿಂದ ದಂತ ಕೂರ್ಚಗಳ ವರೆಗೆ ಆಧುನಿಕ ಜೀವನದಲ್ಲಿ ಕಂಡುಬರುವ ಪದಾರ್ಥ ವಿಶೇಷಗಳನ್ನೆಲ್ಲ ಈ ಬಂಧುಗಳು ಸುಧಾರಕ ಶ್ರೀಮಂತ ವರ್ಗದವರಿಗೆ ನಿಯಮಿತ ವೇಳೆಗೂ ಹೊಣೆಗಾರರಾಗಿ ಒದಗಿಸಿಕೊಡುತ್ತಿದ್ದರು. ಅಂತೆಯೇ ಅವರ ಕಂಪನಿಯು ಬೊಂಬಾಯಿಯ ಎಲ್ಲ ದೊಡ್ಡ ಮನುಷ್ಯರ ಆದರಕ್ಕೂ ವಿಶ್ವಾಸಕ್ಕೂ ಪಾತ್ರವಾಗಿತ್ತು. ಅಲ್ಲಿ ದಿನಾಲು ಒಂದು ಬಗೆಯ ಗಿರಾಕಿಗಳ ಚಿಕ್ಕ ಜಾತ್ರೆಯೇ ನೆರೆಯುತ್ತಿತ್ತು. ಎಷ್ಟು ಗಿರಾಕಿಗಳು ಬಂದರೂ ಸಮಯ ಹಾನಿಮಾಡದೇ ಅವರಿಗೆಲ್ಲ ಬೇಕಾದ ಸಾಮಗ್ರಿಗಳನ್ನು ನೀಟಾಗಿಯೂ, ಅಚ್ಚುಕಟ್ಟಾಗಿಯೂ ಕಟ್ಟಿಕೊಟ್ಟು ತಮ್ಮ ಕಂಪನಿಯ ಜವಾನರಿಂದಲೇ ಗಿರಾಕಿಗಳ ಮನೆಗೆ ಕಳಿಸಿಕೊಡುತ್ತಿದ್ದರು. ಇದು ದಿಲ್‌ಖುಷ್ ಕಂಪನಿಯ ಜನಪ್ರಿಯವಾದ ವಿಶಿಷ್ಟತೆಯಾಗಿತ್ತು.

ಈ ಎಲ್ಲ ಕಾರ್ಯವು ಸೂಸೂತ್ರವಾಗಿ ಸಾಂಗವಾಗಲಿಕ್ಕೆ ಕಂಪನಿಯಲ್ಲಿಯ ಓರ್ವ ವ್ಯಕ್ತಿ ಮಾತ್ರ ಹೊಣೆಗಾರನಾಗಿದ್ದ. ಅವನ ಹೆಸರು ಖುಶೀರಾಮ್. ಇವನು ಕಂಪನಿಯ ಜೀವಾಳವಾಗಿಕೊಂಡಿದ್ದ. ಏಕೆಂದರೆ ಖುಶೀರಾಮನು ಕಂಪನಿಯ ಮುಖ್ಯ ಉಗ್ರಾಣಾಧಿಕಾರಿ. ಇವನಲ್ಲಿ ಕಂಪನಿಯ ಬಂಧುಗಳ ಆದರ ವಿಶ್ವಾಸ ಪೂರ್ತಿಯಾಗಿತ್ತು. ಮಾದರಿಯದಾಗಿತ್ತು. ಎಲ್ಲ ಪದಾರ್ಥಗಳ ಖರೀದಿಯಾಗಿ ಗಿರಾಕಿಗಳು ಹೊರಟು ಹೋಗುವಾಗ ಖುಶೀರಾಮನು ಅವೆಲ್ಲವುಗಳ ಕೊನೆಯ ಪರೀಕ್ಷೆಮಾಡಿ, ಏನಾದರೂ ನ್ಯೂನತೆಯಿದ್ದರೆ ತಿದ್ದಿಕೊಟ್ಟು ಕಳುಹಿಸುತ್ತಿದ್ದ. ಇವನ ಕಾರ್ಯದಕ್ಷತೆಯ ಕಾರಣವಾಗಿಯೇ ಕಂಪನಿಯು ಊರ್ಜಿತಾವಸ್ಥೆಗೆ ಬಂದು ಜನಪ್ರಿಯವಾಗಿತ್ತು. ಅಂತೆಯೇ ಕಂಪನಿಯ ಬಂಧುಗಳು ಇವನಿಗೆ ಕೈತುಂಬ ಸಂಬಳ ಕೊಟ್ಟು ಅವನಿಗೆ ಉತ್ತೇಜನ ಕೊಡುತ್ತಿದ್ದರು. ಏಕೆಂದರೆ ನೋಡಿ ಬೊಂಬಾಯಿಯ ಶ್ರೀಮಂತ ಗಿರಾಕಿಗಳೆಂದರೆ ನಮ್ಮ-ನಿಮ್ಮಂಥವರಲ್ಲ; ತುಂಬಾ ಬಿಗುಪಿನ ಜನರವರು. ತಾವು ಕೊಂಡುಕೊಳ್ಳುವ ಪದಾರ್ಥಗಳಲ್ಲಿ ಏನಾದರೂ ಕೊಂಚ ಹೆಚ್ಚು ಕಡಿಮೆಯಾದರೂ ಅವರು ಹಟಾತ್ತಾಗಿ ರುದ್ರರೂಪಿಗಳಾಗಿ ಬಿಡುತ್ತಿದ್ದರು; ಅಲ್ಲದೇ ಕಂಪನಿಯ ಆಶ್ರಯದಾತೃಗಳ ಯಾದಿಯಿಂದ ತಮ್ಮ ಹೆಸರುಗಳನ್ನು ಮರಳಿ ತಗೆದುಕೊಂಡು ಬಿಡುತ್ತಿದ್ದರು. ಈ ಜವಾಬ್ದಾರಿಯ ವಿಷಯವನ್ನು ಚೆನ್ನಾಗಿ ತಿಳಿದುಕೊಂಡ ಕಂಪನಿಯ ಬಂಧುಗಳು ಖುಶೀರಾಮನ ಕಾರ್ಯದಕ್ಷತೆಯಿಂದಲೇ ತಮ್ಮ ಕಂಪನಿಯ ಪ್ರಗತಿಯಾಗಿದೆಯೆಂದು ಭರವಸೆ ಇಟ್ಟು ಅವರನ್ನು ಬಲವಾಗಿ ಉತ್ತೇಜಿಸುತ್ತಿದ್ದರು. ಅವನಂಥ ಉಗ್ರಾಣಾಧ್ಯಕ್ಷನು ದೊರಕುವುದು ವಿರಳವಾಗಿತ್ತು.

ಸುಬ್ಬು ದಿಲ್‌ಖುಷ್ ಕಂಪನಿಯನ್ನು ಮುಟ್ಟಿದಾಗ ಅವನಿಗೆ ಮೊದಲು ಬೆಟ್ಟಿಯಾದವನು ಖುಶೀರಾಮನೇ. ಸುಬ್ಬು ತಾನು ಬಂದಿರುವ ಕಾರಣವನ್ನು ಅವನಿಗೆ ತಿಳಿಸಿದ. "ಕಂಪನಿಯ ಮಾಲೀಕರು ಈಗಲೇ ಬರುವವರಿದ್ದಾರೆ, ಕುಳಿತುಕೋ" ಎಂದು ಹೇಳಿ ಖುಶೀರಾಮ ತನ್ನ ಕೆಲಸಕ್ಕೆ ಹೊರಟುಹೋದ. ಸುಬ್ಬು ಈ ಭವ್ಯವಾದ ಇಮಾರತಿ

ಯನ್ನೂ, ಅಲ್ಲಿರುವ ಬಗೆಬಗೆಯ ಪದಾರ್ಥಗಳನ್ನೂ ಬಾಂಬೇನಗರದ ಶೃಂಗಾರಾದ್ಭುತವನ್ನೂ ನೋಡಿ ದಿಗ್ಭ್ರಾಂತನಾಗಿ ಕುಳಿತುಕೊಂಡು ಬಿಟ್ಟ. ಇದನ್ನೆಲ್ಲ ಅವಲೋಕಿಸುತ್ತಿರುವಾಗ ತನಗೆ ಇಂಥಾ ದೊಡ್ಡ ಕಂಪನಿಯಲ್ಲಿ ಕೆಲಸ ಹತ್ತಬಹುದೇ ಎಂದು ಸಂದೇಹಪಟ್ಟುಕೊಂಡ. ತನ್ನ ಸಂಗಡ ತಂದಿರುವ ಜಾಹೀರಾತಿನ ನಕಲನ್ನು ಹೊರಗೆ ತೆಗೆದು ಪುನಃ ಅದರಲ್ಲಿಯ ಮಾಹಿತಿಯನ್ನು ಓದಿನೋಡಿದ. "ಚಾಪಲ್ಯ," "ಅಚ್ಚುಕಟ್ಟುತನ" ತನ್ನಲ್ಲಿದ್ದುವು. "ತರುಣ" ನಂತೂ ಸರಿಯೇ. ಆದರೆ "ಆಂಗ್ಲಭಾಷೆಯ ಜ್ಞಾನ?" ಸರಿ, ತಾನು ಶಾಲೆಯಲ್ಲಿದ್ದಾಗ ಪಾತ್ರಪಟುತ್ವ ಬಿಟ್ಟು ಇಂಗ್ಲೀಷ್ ಏಕೆ ಕಲಿತುಕೊಳ್ಳಲಿಲ್ಲ ಎಂದು ಮಿಡುಕಿದ. ಆದರೂ ಅಷ್ಟರ ಮಟ್ಟಿಗೆ ಇಂಗ್ಲೀಷ್ ಬರುತ್ತದೆಯಲ್ಲ, ಹೇಗಾದರೂ ಸಾಗಿಸಬಹುದೆಂದು ಧೈರ್ಯಹೇಳಿಕೊಂಡ. ಮುಖ್ಯವಾಗಿ ಶುದ್ಧಬರೆಹದ ಪರೀಕ್ಷೆಯಿಲ್ಲದಿದ್ದರಾಯಿತು. ಉಳಿದದ್ದನ್ನೆಲ್ಲ ಇದುರಿಸ ಬಹುದೆಂದು ಆಶಿತೋರಿ ಮಾಲೀಕರ ಆಗಮನವನ್ನು ನಿರೀಕ್ಷಿಸುತ್ತ ಕುಳಿತುಕೊಂಡ.

ಆ ವೇಳೆಗೆ ಒಂದು ಥಳಥಳಿಸುವ ಮೋಟಾರಗಾಡಿಯು ಕಂಪಸಿಗೆ ಬಂದು ನಿಂತಿತು. ಅದರೊಳಗಿಂದ ಇಬ್ಬರು ಗೃಹಸ್ಥರು ಇಳಿದು ಬಂದು "ಮ್ಯಾನೇಜರ" ಎಂದು ಬರೆದ ಕಚೇರಿಯಲ್ಲಿ ಹೋದರು. ಸರಿ, ಇವರೇ ತನಗೆ ನೌಕರೀ ಕೊಡುವವರು ಎಂದುಕೊಂಡು ಸುಬ್ಬೂ ಅವರ ಖೋಲಿಯ ಕಡೆಗೆ ಹೊರಟು ಬಾಗಿಲಲ್ಲಿ ಬಂದು ಇನ್ನು "ಒಳಗೆ ಬರಲೇ?" ಎಂದು ಪ್ರಶ್ನಿಸುವಷ್ಟರಲ್ಲಿ ಓರ್ವ ಅಸಾಮಾನ್ಯ ದೇಹಸಂಪತ್ತಿನ ಶ್ರೀಮತಿಯವರು ಧಡಧಡ ನಡೆಯುತ್ತ ಬಂದು ಮ್ಯಾನೇಜರರ ಕಚೇರಿಯಲ್ಲಿ ಹೊಕ್ಕುಬಿಟ್ಟರು. "ಇದಾವ ಗೃಹ ಬಂತಪ್ಪಾ ನೌಕರೀ ಹುಡುಕುವ ಸಮಯಕ್ಕೆ!" ಎಂದು ಚಿಂತಿಸುತ್ತ ಸುಬ್ಬು ಪುನಃ ಮಾರ್ಗಪ್ರತೀಕ್ಷಿಸುತ್ತ ಕುಳಿತುಬಿಟ್ಟ.

ಸುಬ್ಬೂನಿಗೆ ಶ್ರೀಮತಿಯವರು ತುಂಬಾ ಕ್ರೋಧಾವೇಶದಲ್ಲಿರು ರೆಂದು ಕಂಡುಬಂತು. ಮ್ಯಾನೇಜರರ ಖೋಲಿಯ ಬಾಗಿಲನ್ನು ಕಾಲಿ ನಿಂದಲೇ ಒದ್ದು ತೆಗೆದು ಒಳಗೆ ಹೋದವರೇ ಮೇಜಿನ ಮೇಲಿಟ್ಟ,

ಕರೆಗಂಟೆಯನ್ನು ಮುರಿಯುವಂತೆ ಬಾರಿಸಿಬಿಟ್ಟರು. ಮಾಲೀಕರು ಬರುವುದು ಸ್ವಲ್ಪ ವಿಳಂಬವಾದ್ದರಿಂದ ಪುನಃ ಗಂಟೆಯನ್ನು ಒದರಿಸುತ್ತ ಕಾಲಲ್ಲಿದ್ದ ರದ್ದೀಕಾಗದಗಳ ಬುಟ್ಟಿಯನ್ನು ಬಲವಾಗಿ ಒದ್ದು ಕಚೇರಿಯಲ್ಲೆಲ್ಲ ಕಾಗದ ಹರವಿಬಿಟ್ಟರು. ಸುಬ್ಬೂ ಇದನ್ನೆಲ್ಲ ದೂರಿನಿಂದಲೇ ನೋಡುತ್ತ ಬೆಪ್ಪಗಾಗಿ ಬಿಟ್ಟ. ಈ ಮಾದರಿಯ ಗಿರಾಕಿಗಳ ಕೂಡ ವ್ಯವಹಾರ ಮಾಡುವುದು ಸಾಧ್ಯವೇ ತನ್ನಿಂದ ಎಂದು ಶಂಕಿಸಿ ಶ್ರೀಮತಿಯವರನ್ನು ನೋಡುತ್ತ ಕುಳಿತ. ಅವರ ಮೋರೆ ಕ್ರೋಧಾವೇಶದಿಂದ ಕೆಂಪೇರಿತ್ತು. ಯಾವುದೋ ಒಂದು ವಿಪರೀತ ಪ್ರಸಂಗವನ್ನು ಕುರಿತು ನಿರ್ಧರಿಸಿಕೊಂಡು ಬಂದವರಂತೆ ಅವರು ಮಾಲೀಕರನ್ನು ಕಾಣಲಿಕ್ಕೆ ಹವಣಿಸುತ್ತಿದ್ದರು. ಅಷ್ಟರಲ್ಲಿ ಮಾಲೀಕರೇ ಬಂದರು.

"ಕುಳಿತುಕೊಳ್ಳಬೇಕು. ಶ್ರೀಮತಿಯವರು, ಕುಳಿತುಕೊಳ್ಳಬೇಕು; ನಾನು ಬರುವುದು ಸ್ವಲ್ಪ ತಡವಾದದ್ದಕ್ಕೆ ಕ್ಷಮಿಸಬೇಕು" ಎಂದು ಮಾಲೀಕರು ತಪ್ಪುಮಾಡಿದ ವಿದ್ಯಾರ್ಥಿಗಳು ಸಿಟ್ಟಿನ ಶಿಕ್ಷಕರನ್ನು ಸಂತೈಸುವಂತೆ ತುಂಬಾ ಭಯ-ಭಕ್ತಿಯಿಂದ ನುಡಿದು ಪಕ್ಕದಲ್ಲಿದ್ದೊಂದು ಖುರ್ಚಿಯನ್ನು ತಾವೇ ಎತ್ತಿಕೊಂಡು ತಂದಿಟ್ಟರು.

"ನಾನು ಬಂದಿರುವುದು ಕುಳಿತುಕೊಳ್ಳಲಿಕ್ಕಲ್ಲ, ನಿಮ್ಮನ್ನು ಓಡಿಸಲಿಕ್ಕೆ!" ಎಂದು ಸಂದಿಗ್ಧವಾಗಿ ನುಡಿಯುತ್ತ ಶ್ರೀಮತಿಯವರು ಖುರ್ಚಿಯನ್ನು ದೂರು ಮಾರು ಬೀಳುವಂತೆ ಒದ್ದು ಕೆಡಹಿಬಿಟ್ಟರು.

ಬಾಗಿಲಿನಲ್ಲಿ ಕುಳಿತು ನೋಡುತ್ತಲಿರುವ ಸುಬ್ಬೂನಿಗೆ ಈ ನಾಟಕವನ್ನು ಕಂಡು ಸೋಜಿಗವಾಯಿತು. ಶ್ರೀಮತಿಯವರು ಈ ರೀತಿ ವರ್ತಿಸುತ್ತಿದ್ದರೂ ಮಾಲೀಕರು ಕೊಂಚ ಕೂಡ ಸಿಟ್ಟಿಗೇಳದೆ ಬಿದ್ದ ಖುರ್ಚಿಯನ್ನು ಎತ್ತಿಟ್ಟು ತಮ್ಮಿಂದೇನಾದರೂ ತಪ್ಪಾಗಿದ್ದ ಪಕ್ಷದಲ್ಲಿ ದಯವಿಟ್ಟು ಕ್ಷಮಿಸಬೇಕೆಂದು ಶ್ರೀಮತಿಯವರಿಗೆ ಹೇಳಿ ವಿನಂತಿಮಾಡಿಕೊಂಡರು. ಶ್ರೀಮತಿಯವರು ಇನ್ನೂ ಆವೇಶದಲ್ಲಿಯೇ ಇದ್ದರು.

"ತಮಗೆ ಕಳುಹಿಸಿದ ಪದಾರ್ಥಗಳು ಬಂದು ಮುಟ್ಟಿದವಲ್ಲವೇ?

ಕಳಿಸುವುದು ಸ್ವಲ್ಪ ವಿಲಂಬವಾದದ್ದೇನೋ ನಿಜ" ಎಂದು ಮಾಲೀಕರು ಮೃದುದನಿಯಲ್ಲಿ ಬಿನ್ನವಿಸಿದರು.

" ಸಾಮಾನುಗಳೇನೋ ಬಂದು ಮುಟ್ಟಿವೆ, ಆದರೆ ಆ ಸಾಮಾನುಗಳನ್ನು ನಾನು ಮುಟ್ಟುವಂತಿಲ್ಲ!" ಎಂದು ಇನ್ನಿಷ್ಟು ಸಂದಿಗ್ಧವಾಗಿ ನುಡಿದು ಹಲ್ಲುಕಟಿದರು.

" ಅಂದರೆ.... ಅರ್ಥವಾಗಲಿಲ್ಲ ತಮ್ಮ ಮಾತು...."

" ಅರ್ಥವಿಲ್ಲ ಇದರಲ್ಲಿ ಅನರ್ಥವಿದೆ ನಿಮ್ಮ ಕಂಪನಿಗೆ. ಅಹಹ! ಎಂಥ ದಿವ್ಯ ಕಂಪನಿ ನಡೆಸಿದ್ದೀರಿ ನೀವು. ತುಂಬಾ ಜಾಗ್ರತೆಯಾಗಿ ಪದಾರ್ಥಗಳನ್ನು ಒದಗಿಸಿಕೊಡುತ್ತಾರೆಂದು ಛಾಪು ಹಾಕಿದ್ದೀರಲ್ಲವೆ ಜನರಲ್ಲಿ. ನೋಡ್ತೇನೆ ನಿಮ್ಮ ಛಾಪು! ಇದೇ ದಿನದ ಟಾಯಿಮ್ಸ ಪತ್ರಿಕೆಯಲ್ಲಿ ಪ್ರಸಿದ್ಧಿಸಿ ಬಿಡುತ್ತೇನೆ ನಿಮ್ಮ ಕಂಪನಿಯ ರೀತಿಯನ್ನು. ಅಬ್ಬಾ! ಸೇಫ್ಟಿ ರೇಝರ್! ಷೇವಿಂಗ್ ಸ್ಟಿಕ್!! ವಾ, ವಾ!!!" ಎಂದು ಮಿತಿ ಮೀರಿ ರೇಗಿ ಶ್ರೀಮತಿಯವರು ಕಣ್ಣು ಹೊರಳಿಸಹತ್ತಿದರು.

ಮಾಲೀಕರಿಗೆ ಈ ಸಂದಿಗ್ಧವಚನದಿಂದ ದಿಗ್ಭ್ರಮೆಯಾದಂತಾಯಿತು. ಇದಾವ ಕ್ಷೌರದ ಕತ್ತಿ. ಇದೆಲ್ಲಿಯ ಗಡ್ಡದ ಕುಂಚ; ಶ್ರೀಮತಿಯವರಿಗೆ ಹುಚ್ಚು ಹಿಡಿದಿದೆಯೋ ಅಥವಾ ತಮಗೇ ಹುಚ್ಚೋ ಎಂದು ಶಂಕೆ. ಶಂಕೆಯೊಂದಿಗೆ ಭಯವೊಂದು ಬೇರೆ. ಶ್ರೀಮತಿಯವರು ತಮ್ಮ ಕಂಪನಿಯ ಆಶ್ರಯದಾತೃಗಳಲ್ಲಿ ಹಿರಿದಾದ ವ್ಯಕ್ತಿಗಳು. ಇವರು ಕಂಪನಿಗೆ ಬಹಿಷ್ಕಾರ ಕೊಟ್ಟು ಬಿಟ್ಟರೆ ಗತಿಯೇನು? ಅಲ್ಲದೇ ಟಾಯಿಮ್ಸ ಪತ್ರಿಕೆಯಲ್ಲಿಯೂ ಏನೇನೋ ಬರೆದು ಬಿಟ್ಟರೆ ಪರಿಣಾಮವೇನು? ಎನಿದೆಲ್ಲಾ ಗೂಢಸಮಾಚಾರವೆಂದು ಚಿಂತಿಸುತ್ತ ಶ್ರೀಮತಿಯವರನ್ನು ತುಂಬಾ ಭಯ-ಕುತೂಹಲಯುಕ್ತ ದನಿಯಲ್ಲಿ ಪ್ರಶ್ನಿಸಿದ.

" ಶ್ರೀಮತಿಯವರು ಸಿಟ್ಟಿಗೆದ್ದು ಬಿಟ್ಟರೆ ಬಡವರ ಗತಿಯೇನು? ತಮ್ಮ ಮಾತಿನ ಏನೂ ಅರ್ಥವಾಗಲಿಲ್ಲ ನನಗೆ. ದಯವಿಟ್ಟು ನಮ್ಮ ಅಪರಾಧವನ್ನು ಸರಳ ಶೈಲಿಯಲ್ಲಿ ತಿಳಿಸಿ ಹೇಳಬೇಕು."

" ಇದೇ ನೋಡಿ ನಿಮ್ಮ ಅಪರಾಧ! ಇದಕ್ಕೂ ಹೆಚ್ಚಿನದೇನಾದರೂ ಅಪರಾಧವನ್ನು ಮಾಡಲಿಕ್ಕೆ ಸಾಧ್ಯವಿದೆಯೇ ಎಂಬುದನ್ನು

ಇದನ್ನು ನೋಡಿ ನೀವೇ ವಿಚಾರಿಸಿರಿ" ಎಂದೆನ್ನುತ್ತ ತಮ್ಮ ಕೈಚೀಲ ದಲ್ಲಿದ್ದ ಚಿಕ್ಕ ಪೆಟ್ಟಿಗೆಯನ್ನು ತೆಗೆದು ಮೇಜಿನ ಮೇಲೆ ದೊಪ್ಪೆಂದು ಬಿಸುಟಿದರು.

ಏನಿದೆ ವಿಷಯ ಎಂದು ಸುಬ್ಬೂ ಇಣಿಕಿ ನೋಡಿದ. ಮಾಲೀಕರು ಪೆಟ್ಟಿಗೆಯನ್ನು ತೆರೆದು ನೋಡಿದಾಗ ಅದರಲ್ಲಿ ಒಂದು ಭದ್ರವಾದ ಕ್ಷೌರದ ಕತ್ತಿ, ಒಂದು ಗಡ್ಡದ ಕುಂಚ, ಒಂದು ಕತ್ತರಿ ಮುಂತಾದ ಚೌಲಕರ್ಮದ ಸರ್ವ ಸಲಕರಣೆಗಳಿದ್ದುವು. ಮಾಲೀಕನು ನಿಜವಾ ಗಿಯೂ ಗಾಬರಿಗೊಂಡು ಬೆಮರೊಡೆದ.

ಶ್ರೀಮತಿಯವರು ಇವುಗಳನ್ನೆಲ್ಲ ಕಂಡು ಇನ್ನೂ ರೇಗಿದರು.

"ಕಣ್ಣಿವೆಯೋ ನಿಮ್ಮ ಅಪರಾಧ ಕಾಣಲಿಕ್ಕೆ? ನಾನು ನಿನ್ನೆ ಸಾಯಂಕಾಲ ಕಳುಹಿದ ಸಾಮಾನಿನ ಯಾದಿಗೆ ನಿಮ್ಮಿಂದ ಈ ಸಾಮಾನು ಬಂದಿವೆ. ನಿಮ್ಮ ಕೂಲಿಯವನು ಅವುಗಳನ್ನು ತಂದು ಕೊಟ್ಟಾಗ್ಗೆ ನಾನು ಮನೆಯಲ್ಲಿ ಒಬ್ಬಳೇ ಇದ್ದರೆ ಅಷ್ಟು ಅನಾಹುತ ವಾಗುತ್ತಿರಲಿಲ್ಲ. ಆ ಕಾಲಕ್ಕೆ ನನ್ನ ಮಿತ್ರಮಂಡಳಿ ಚಹಾಕುಡಿಯಲಿಕ್ಕೆ ಬಂದಿದ್ದರು. ಬಂದಿರುವ ವಿಪರೀತದ ಜ್ಞಾನವಿಲ್ಲದೇ ಅಲ್ಲಿಯೇ ನಿಮ್ಮ ಸಾಮಾನುಗಳನ್ನು ಬಿಚ್ಚಿ ಬಿಟ್ಟೆ. ಅಲ್ಲೇನಿತ್ತು? ಕ್ಷೌರದ ಕತ್ತಿ! ಗಡ್ಡದ ಕುಂಚ!! ಕತ್ತರಿ!!! ಆಗ ನೋಡಬೇಕಾಗಿತ್ತು ನನ್ನ ಸ್ಥಿತಿ ಯನ್ನು. ನಮ್ಮ ಮಿತ್ರಮಂಡಳಿಯವರೆಲ್ಲ ತಮ್ಮ ತಮ್ಮೊಳಗೆ ಕುಸು-ಕುಸು ಮಾತನಾಡಹತ್ತಿದರು. "ಶ್ರೀಮತಿಯವರು ಈ ಪದಾರ್ಥಗಳನ್ನು ಎಂದಿನಿಂದ ಉಪಯೋಗಿಸಲಿಕ್ಕೆ ಪ್ರಾರಂಭಮಾಡಿದ್ದಾರೆ?" ಅಂತಾ ಒಬ್ಬರು; "ಅವರಲ್ಲೇನಿದೆ, ಸ್ತ್ರೀ-ಪುರುಷರಲ್ಲಿ ಸರಿಸಮಾನತ್ವ ಇರಬೇ ಕಲ್ಲವೇ? ಇವೇ ಆ ಸಮಾನತ್ವದ ಚಿನ್ಹಗಳು" ಅಂತಾ ಇನ್ನೊಬ್ಬರು; "ಶ್ರೀಮತಿಯವರು ಶ್ರೀಮಾನರನ್ನು ಎಲ್ಲಿಯೋ ದೊರಕಿಸಿದಂತೆ ಕಾಣು ತ್ತದೆ!" ಅಂತಾ ಮತ್ತೊಬ್ಬರು; "ಛೀ, ಛೀ, ಇಂಥಾ ಆಕಾರ ವಿಕಾರ ವುಳ್ಳವರಿಗೆ ಇನ್ನೂ ವಿವಾಹದ ಹುಚ್ಚೇ?" ಅಂತಾ ಬೇರೆಯವ ರೊಬ್ಬರು; "ಅದರಲ್ಲೇನ್ರೀ? ಆಕಾರ ಹೇಗಿದ್ದರೇನು? ದುಡ್ಡಿದೆ ಯಲ್ಲ, ದುಡ್ಡು, ಅದೇ ದೊಡ್ಡಪ್ಪನನ್ನು ತರಬಹುದು ನೋಡಿ!" ಅಂತಾ

ಇನ್ನೊಬ್ಬರು; ಈ ರೀತಿಯಲ್ಲಿ ಕೂಡಿದ ಗೆಳೆಯರೆಲ್ಲ ನನ್ನ ಚಹವನ್ನು ಮರೆತು ತಂಬಾ ವಿಡಂಬನೆ ಮಾಡಿಬಿಟ್ಟರು. ಈ ಮಾನಹಾನಿಯು ನೀವು ಎಷ್ಟು ಕೊಟ್ಟರೆ ತುಂಬಿ ಬಂದೀತು?" ಎಂದು ಕ್ರೋಧಾಗ್ನಿ ತುಂಬಿದ ಕಣ್ಣುಗಳಿಂದ ಮಾಲೀಕರನ್ನು ದಹನ ಮಾಡಿಬಿಟ್ಟರು.

"ಶ್ರೀಮತಿಯವರು ಸಮಾಧಾನ ತಾಳಬೇಕು. ಎಲ್ಲಿಯೋ ತಪ್ಪು ಗಂಟಾಗಿ ತಮಗೆ ಈ ಪದಾರ್ಥಗಳು ಬಂದಿರಬಹುದು. ಈಗಲೇ ಇದರ ಪೂರ್ಣ ವಿಚಾರಣೆ ಮಾಡುವೆನು. ತಾವು ಸ್ವಲ್ಪ ಕುಳಿತು ಸುಧಾರಿಸಿಕೊಳ್ಳಬೇಕು" ಎಂದು ಮಾಲೀಕರು ಪುನಃ ಖುರ್ಚಿಯನ್ನು ತಂದಿಟ್ಟರು.

"ನಿಮ್ಮ ಕಂಪನಿಯ ಉಗ್ರಾಣಾಧ್ಯಕ್ಷನಾರು?" ಎನ್ನುತ್ತ ಶ್ರೀಮತಿಯವರು ತಂದಿಟ್ಟ ಖುರ್ಚಿಯನ್ನು ದೂಡಿ ಟೊಂಕದ ಮೇಲೆ ಕೈಯಿಟ್ಟು ಕೊಂಡು ತುಂಬಾ ಬಿಗುಹಾಗಿ ನಿಂತುಕೊಂಡೇ ಕೇಳಿದರು.

"ಮಿಸ್ಟರ್ ಖುಶೀರಾಮ್ ಎಂಬುವನು" ಎಂದು ಮಾಲೀಕರು ನಿವೇದಿಸಿದರು.

"ಆ ನಿಮ್ಮ ಹುಶೀರಾಮನನ್ನು ಇದೇ ಕ್ಷಣಕ್ಕೆ ನನ್ನೆದುರಿನಲ್ಲಿಯೇ ಕೆಲಸದಿಂದ ಕಿತ್ತಿಹಾಕದ ವಿನಹ ನಾನು ಇಲ್ಲಿಂದ ಹೊರಡುವುದಿಲ್ಲ. ಇಲ್ಲವಾದರೆ ಟಾಯಿಮ್ಸ್ ಪತ್ರ!" ಎಂದು ಶ್ರೀಮತಿಯವರು. ಗುಡುಗಿದರು.

ಆಗಿನ ಆ ಮಾಲೀಕರ ಮುಖಮುದ್ರೆಯನ್ನು ನಮ್ಮ ಸುಬ್ಬೂ ವರ್ಣಿಸಿ ಹೇಳಿದಾಗ ನಾವೆಲ್ಲ ನಕ್ಕು ನಕ್ಕು ಬಿಕ್ಕಹತ್ತಿದ್ದೆವು.

"ಆದರೆ ಶ್ರೀಮತಿಯವರೇ, ಖುಶೀರಾಮ ಹೊರಟುಹೋದರೆ ನಮ್ಮ ಕಂಪನಿಯೇ ಬಂದು ಮಾಡಬೇಕಾಗುತ್ತದೆ. ಏನಾದರೂ ಬೇರೆ ರೀತಿಯ ದಂಡ- ಶಿಕ್ಷೆ ಮಾಡಿರಿ. ಆದರೆ ಖುಶೀರಾಮನನ್ನು ಮಾತ್ರ ಕೆಲಸದಿಂದ ತೆಗೆಯುವ ಹಾಗಿಲ್ಲ." ಎಂದು ಮಾಲೀಕರು ದೈನ್ಯ ಸ್ವರದಲ್ಲಿ ಅರಿಕೆ ಮಾಡಿಕೊಂಡರು.

"ನಿಮಗೆ ಹುಶೀರಾಮ ಬೇಕೋ, ನನ್ನ ಆಶ್ರಯ ಫಲ ಬೇಕೋ?

ಈ ಪ್ರಶ್ನೆಗೆ ಮೊದಲು ಉತ್ತರ ಬಂದು ಬಿಡಲಿ!" ಎಂದು ಶ್ರೀಮತಿಯವರು ಕೊನೆಯ ಮಾತೆಂದು ಕೇಳಿಬಿಟ್ಟರು.

ಇದು ನಿರುತ್ತರವಾದ ಪ್ರಶ್ನೆಗಳಲ್ಲಿ ಒಂದಾಗಿದ್ದರಿಂದ ಏನು ಪಂಚಿಕೆ ಮಾಡಬೇಕೆಂದು ವಿಚಾರಿಸುತ್ತಿರುವಾಗ್ಗೆ ಮತ್ತೊಂದು ಗಿರಾಕಿ ಕಂಪನಿಗೆ ದಯಮಾಡಿಸಿತು.

ಈಗ ಬಂದವರು ತೆಳುವಾದ ಮೈಯುಳ್ಳ ಓರ್ವ ಸಾಹೇಬರು. ಶ್ರೀಮತಿಯವರ ದೇಹಸಂಪತ್ತು ಇಂಥ ಈರ್ವ ಸಾಹೇಬರನ್ನು ಕುಸ್ತಿಯ ಜತಿಗಳನ್ನಾಗಿ ಮಾಡಬಹುದಾಗಿತ್ತೆಂದು ಸುಬ್ಬೂ ಹೇಳಿದ. ಸೃಷ್ಟಿಸಿದ ವಿಧಾತನು ಇಷ್ಟೇಕೆ ವೈಷಮ್ಯವನ್ನು ಹುಟ್ಟಿಸಿರುವನೋ ತಿಳಿಯದ ವಿಷಯವಾಗಿದೆ. ಆದರೂ ಒಂದು ವಿಷಯದಲ್ಲಿ ಮಾತ್ರ ಈ ಸಾಹೇಬರು ಶ್ರೀಮತಿಯವರನ್ನು ಸರಿಗಟ್ಟುವಂತಿದ್ದರು. ಅದೇನೆಂದರೆ ಕ್ರೋಧಾವೇಶದಲ್ಲಿ. ಅವರು ತುಂಬಾ ಆವೇಶದಿಂದ ಮಾಲೀಕರ ಕಚೇರಿಗೆ ಬಂದು ತಮ್ಮ ಕೈಯಲ್ಲಿದ್ದ ಒಂದು ಚಿಕ್ಕ ರಟ್ಟಿನ ಪಾಕೀಟನ್ನು ಮಾಲೀಕರ ಮುಖದ ಮೇಲೆಯೇ ಎಸೆದು ಬಿಟ್ಟರು.

"ಇದೇನಿದೆ ಕಾಣುತ್ತದೆಯೋ ನಿಮಗೆ?" ಎಂದು ರೇಗಿದ ದನಿಯಲ್ಲಿ ಸಾಹೇಬರು ಪ್ರಶ್ನಿಸಿದರು.

ಮಾಲೀಕರಿಗೆ ಈಗಂತೂ ಪೂರ್ಣ ಹುಚ್ಚು ಹಿಡಿದಂತಾಯಿತು. ಶ್ರೀಮತಿಯವರ ಸಿಟ್ಟನ್ನು ತೃಪ್ತಿಮಾಡಬೇಕೆನ್ನುವಷ್ಟರಲ್ಲಿಯೇ ·ಶ್ರೀಮಾನ್‌ರೂ ಸಿಟ್ಟಾಗಿ ಬಂದಿದ್ದರು. ಇಬ್ಬರೂ ಕಂಪನಿಯ ಹಿರಿದಾದ ಗಿರಾಕಿಗಳು. ಶ್ರೀಮತಿಯವರ ಪದಾರ್ಥಗಳು ಸಾಹೇಬರಿಗೆ ಹೋಗಿರಬೇಕೆಂದು ಊಹಿಸಿ ಆ ಪಾಕೀಟನ್ನು ಬಿಚ್ಚಿದರು. ಅವರ ಊಹೆ ನಿಜವಾಗಿತ್ತು. ಏಕೆಂದರೆ ಅದರಲ್ಲಿ ನೆಣಾಪಹಾರಿ ಮಾತ್ರೆಗಳ ನಾಲ್ಕು ಸೀಸೆಗಳಿದ್ದುವು! ತಮಗೆ ಗೊತ್ತಿರಬಹುದಲ್ಲವೇ ಈ ಮಾತ್ರೆಗಳ ಕಾರ್ಯ? ನೆಣ ಹೆಚ್ಚಾಗಿ ಭೂಭಾರವಾಗಿರುವ ಮಾನವರನ್ನು ಹಗುರಾಗಿ ಮಾಡುವ ಆಧುನಿಕ ಮಾತ್ರೆಗಳಿವು. ಸುಬ್ಬೂ ಶ್ರೀಮತಿಯವರ ಆಕಾರವನ್ನು ನೋಡಿ ಈ ಮಾತ್ರೆಗಳನ್ನು ಅವರು ಕೊಂಡುಕೊಳ್ಳುವುದು ವಿಹಿತವೇ, ಸಾಹಜಿಕವೇ ಎಂದು ಹೇಳಿಕೊಂಡ. ಅಷ್ಟರಲ್ಲಿ ಸಾಹೇಬರು ಗರ್ಜಿಸಿದರು.

" ಈ ಮಾತ್ರೆಗಳನ್ನು ಸೇವಿಸಿ ನಾನು ಇನ್ನೂ ಎಷ್ಟು ತೆಳುವಾಗ ಬೇಕೆಂದು ನಿಮ್ಮ ಬಯಕೆ? ಈಗಾಗಲೇ ನಮ್ಮ ವೈದ್ಯರು ನನಗೆ ಸ್ವಲ್ಪ ನೆಣಾರ್ಜನೆಯಾದರೇ ಕ್ಷೇಮವೆಂದು ಅಭಿಪ್ರಾಯ ಹೇಳಿದ್ದಾರೆ. ನೀವು ಕಳುಹಿದ ಈ ಮಾತ್ರೆಗಳನ್ನು ನಾನು ಸೇವಿಸಿಬಿಟ್ಟರೆ ನನಗೆ ಆಕಾಶದಲ್ಲಿ ಹಾರಿಹೋಗಲಿಕ್ಕೆ ವಿಮಾನವೇ ಬೇಕಾಗಿಲ್ಲ. ನಿರಾಯಾಸವಾಗಿಯೇ ಹಾರಿಹೋಗಬಹುದು. ಏನಿದರ ಅರ್ಥ?" ಎಂದವರೇ ಶ್ರೀಮತಿಯವರ ಕಡೆಗೆ ತಿರುಗಿ ನೋಡಿದರು.

" ಓಹೋ" ಎಂದುಕೊಂಡು ಅರ್ಥಮಾಡಿಕೊಂಡರು. ಮೇಜಿನ ಮೇಲೆ ಬಿದ್ದಿರುವ ಮಾತ್ರೆಗಳನ್ನು ಸರಿಪಡಿಸಿ ಸೀಸೆಯಲ್ಲಿ ತುಂಬಿ ಅದನ್ನು ಶ್ರೀಮತಿಯವರಿಗೆ ಕೊಡುತ್ತ ಹೀಗೆ ಹೇಳಿದರು.

" ಕ್ಷಮಿಸಬೇಕು, ಶ್ರೀಮತಿಯವರು. ನನ್ನ ಈ ಚಿಕ್ಕ ಪಾರಿತೋಷಕ ದಿಂದ ತಮಗೆ ಹಿತಕರವಾಗಬಹುದು!"

ಸಾಹೇಬರ ಈ ಪಾರಿತೋಷಕವು ಶ್ರೀಮತಿಯವರಿಗೆ ಸರಿಹೊಂದ ಲಿಲ್ಲ. ದೇಶ-ಕಾಲ-ಪಾತ್ರ ನೋಡಿ ಪಾರಿತೋಷಕವನ್ನು ಕೊಡುವುದು ವಿಹಿತ. ಶ್ರೀಮತಿಯವರು ಮತ್ತಿಷ್ಟು ಹೆಚ್ಚಾಗಿ ರೇಗಿಬಿಟ್ಟರು. ಏಕೆಂದರೆ ತಾವು ಸಿಜವಾಗಿಯೂ ದಪ್ಪವಾಗಿದ್ದರೂ ಆ ನೆಣವನ್ನು ಔಷಧಿಯಿಂದ ಪರಿಹಾರಮಾಡಿಕೊಳ್ಳುತ್ತಿರುವುದು ಜನರಿಗೆ ತಿಳಿಯಬಾರದೆಂದು ಅವರ ಗುಟ್ಟಿನ ಬಯಕೆ. ಈಗಲಾದರೋ ತಮ್ಮ ಗೌಪ್ಯ ಚಿಕಿತ್ಸೆಯು ಪ್ರಸಿದ್ಧ ವಾಗಿ ಬಿಟ್ಟಿತು. ಇದನ್ನು ಅವರಿಗೆ ಸಹಿಸುವುದಾಗಲಿಲ್ಲ. ಯಾವು ದಕ್ಕಾದರೂ ಮಿತಿಮರ್ಯಾದೆಯಿದೆ ನೋಡಿ. ಶ್ರೀಮತಿಯವರ ಸಹನಕ್ಕೆ ಇನ್ನು ಆಸ್ಪದ ಉಳಿಯಲಿಲ್ಲ.

" ಆ ಮಾತ್ರೆಗಳನ್ನು ಸೇವಿಸಿ ನೀವು ಹಾರಿ ಮಾಯವಾಗಿ ಹೋದರೆ ಈ ಪೃಥ್ವಿಯಲ್ಲಿ ಒಬ್ಬ ನಿರ್ಲಜ್ಜ ಮಾನವನ ನಂಬರು ಇಲ್ಲ ದಂತಾಗುವುದು. ಅದರಿಂದ ನಾಗರಿಕತೆಗೆ ಕ್ಷೇಮವೇ!" ಎನ್ನುತ್ತ ಆ ಸೀಸೆಯನ್ನು ಸಾಹೇಬರ ಮುಖಕ್ಕೆ ಒಗೆದು ಶ್ರೀಮತಿಯುವರು ಮಾಲೀಕರನ್ನು ಗದ್ದರಿಸಿದರು.

“ಏನೆಂದರಿ ನನ್ನ ಪ್ರಶ್ನೆಗೆ ? ನಾನು ಬೇಕೋ ನಿಮಗೆ, ನಿಮ್ಮ ಹುಶೀರಾಮ ಬೇಕೋ ?”

“ಖುಶೀರಾಮ ಅವನ ಹೆಸರು, ಶ್ರೀಮತಿಯವರೇ.”

“ಯಾವ ರಾಮನೇ ಇರಲಿ. ನನ್ನ ಪ್ರಶ್ನೆಗೆ ಉತ್ತರ ಬರಲಿ” ಎಂದು ಹಟಕ್ಕೇ ನಿಂತರು.

ಮ್ಯಾನೇಜರನು ವಿಚಾರಿಸಿಕೊಂಡ. ‘ಖುಷಿರಾಮನಂಥ ವ್ಯಕ್ತಿಯನ್ನು ಹುಡುಕಿ ತರುವುದು ದುಃಸಾಧ್ಯವಾದರೂ ಅಸಾಧ್ಯನಾಗಿರಲಿಲ್ಲ. ಆದರೆ ಶ್ರೀಮತಿ, ಶ್ರೀಮಾನ್‌ರಂಥ ಗಿರಾಕಿಗಳು ? ಛೀ, ಛೀ, ಐಯ್ದಂಕಿಯ ಚೆಕ್ಕಿನ ಗಿರಾಕಿಗಳಿವು. ಇವರನ್ನು ತ್ಯಜಿಸಿದರೆ ಹೇಗಾದೀತು ?’ ಎಂದು ಕಷ್ಟದಿಂದ ನಿರ್ಧರಿಸಿ, ಉಪಾಯವಿಲ್ಲದ ವಿಷಯವೆಂದುಕೊಂಡು ಖುಶೀರಾಮನನ್ನು ದೂರನುಡಿಯ ಯಂತ್ರದಲ್ಲಿ ಕರೆದು ಬರಹೇಳಿದ.

“ಹಾಜರ ಹುಜೂರ” ಎಂದು ಖುಶೀರಾಮನ ಉತ್ತರ ಬಂತು. ಅದರೊಂದಿಗೆ ಬಣ್ಣದ ಚಾಳಿಸು ಹಾಕಿಕೊಂಡ ಉಗ್ರಾಣಾಧಿಕಾರಿಯೂ ಬಂದು ಮುಜುರೆ ಮಾಡಿ ನಿಂತುಕೊಂಡ.

“ಇವನೇ ನಿಮ್ಮ ನೌಕರನೋ ?” ಶ್ರೀಮತಿಯವರು ಠೀವಿಯಿಂದ ಕೇಳಿದರು.

“ಅಹುದು, ಶ್ರೀಮತಿಯವರೇ....ಆದರೂ ದಯವಿಟ್ಟು........”

“ದಯೆ-ಮಾಯೆ ನಿಮ್ಮಲ್ಲಿ ತೋರಿಸುತ್ತ ಹೋದರೆ ನಮ್ಮ ಮಾನ-ಮರ್ಯಾದೆ ಎಲ್ಲಿಗೆ ಬಂದೀತು ? ಹೂಂ, ಬಂದು ಬಿಡಲಿ ನಿಮ್ಮ ಬರತರ್ಫಿನ ಹುಕುಂ” ಎಂದು ಶ್ರೀಮತಿಯವರು ಪುನಃ ಗರ್ಜಿಸಿದರು.

ಮಾಲೀಕರಿಗೆ ಬೇರೆ ಮಾರ್ಗವೇ ಉಳಿಯಲಿಲ್ಲ. ತಮ್ಮ ಆಪ್ತ ನೌಕರನನ್ನು ಹೊಡೆದೊಡಿಸುವ ದುಃಖದಲ್ಲಿ ಅವರು ಮುಖ ಮೇಲಕ್ಕೆತ್ತದೆ ತಮ್ಮ ಮೇಜನ್ನುದ್ದೇಶಿಸಿ ನುಡಿದರು.

“ಖುಶೀರಾಮ್, ನೀನು ಇಂದಿನಿಂದ ಕಂಪನಿಯ ನೌಕರನಲ್ಲ. ನಿನ್ನ ದುರ್ಲಕ್ಷ್ಯದಿಂದ ಶ್ರೀಮತಿಯವರ ಹಾಗೂ ಸಾಹೇಬರ ಮರ್ಯಾದೆ ಹಾನಿಯಾಗಿದೆ. ನಿನ್ನ ಸಂಬಳದ ಚೆಕ್ಕು ತೆಗೆದುಕೋ” ಎಂದು ಮಾಲೀಕರು ಚೆಕ್ಕು ಬರೆದುಕೊಟ್ಟು ಉಸ್ಸೆಂದು ಕುಳಿತು ‘ಇಲ್ಲಿಗೆ

ಮುಗಿಯಿತು ನಮ್ಮ ಕಂಪನಿಯ ಪ್ರಗತಿ' ಎಂದುಕೊಂಡು ದೀರ್ಘ ವಾದ ಚಿಂತೆಯಲ್ಲಿ ಬಿದ್ದ.

"ಆಗಬಹುದು, ಹುಜೂರ್" ಎಂದು ನಿವೃತ್ತ ವ್ಯಕ್ತಿ ಹೊರಟು ಹೋಯಿತು.

ಶ್ರೀಮತಿಯವರೂ ಸಾಹೇಬರೂ ಸಮಾಧಾನ ಹೊಂದಿ ತಮ್ಮ ಮೋಟಾರು ಹತ್ತಿ ಹೋದರು.

ಅವರು ಹೋದ ಕ್ಷಣಕ್ಕೇ ಖುಶೀರಾಮನು ಲಗುಬಗೆಯಿಂದ ಬಂದವನೇ "ಏತಕ್ಕೆ ಕರೆದದ್ದು ಹೂಜೂರ್, ಬರಲಿಕ್ಕೆ ಸ್ವಲ್ಪ ತಡ ವಾಯಿತು" ಎಂದು ಮಾಲೀಕರನ್ನು ಕೇಳಿದ.

ಮಾಲೀಕರಿಗೆ ಮತ್ತೆ ದಿಗಿಲು ಬಿತ್ತು. ಇದೇ ಈಗ ನೌಕರಿಯಿಂದ ನಿವೃತ್ತನಾದ ಖುಶೀರಾಮ ಪುನಃ ಹೇಗೆ ಬಂದನೆಂದು ವಿಚಾರಿಸಿದರು. ತಮ್ಮ ತಲೆ ನೆಟ್ಟಗಿದೆಯೋ ಇಲ್ಲವೋ ಎಂದು ಮುಟ್ಟಿಕೊಂಡು ನೋಡಿ ದರು. ಇದ್ದಲ್ಲಿಯೇ ಇತ್ತು ತಲೆ. ಇದೇನು ಕನಸೋ ಎಂದುಕೊಂಡರು. ಶ್ರೀಮತಿಯವರು ಕೆಡವಿದ ಖುರ್ಚಿ ಅಲ್ಲಿಯೇ ಬಿದ್ದಿತ್ತು. ಸರಿ, ಇದು ಕನಸಲ್ಲ ಎಂದು ನಿರ್ಧರಿಸಿಕೊಂಡರು. ಖುಶೀರಾಮನನ್ನು ದಿಟ್ಟಿಸಿ ನೋಡುತ್ತ ಪ್ರಶ್ನಿಸಿದರು.

"ನಿನಗೆ ಅಣ್ಣ ತಮ್ಮಂದಿರಿದ್ದಾರೆಯೇ?"

"ನಾನೊಬ್ಬನೇ ಮಗ, ಹುಜೂರ್, ನನ್ನ ತಂದೆ ತಾಯಿಗಳಿಗೆ" ಎಂದು ಖುಶೀರಾಮ ಹೇಳಿದ.

"ಹಾಗಾದರೆ ನೀನು ಬಣ್ಣದ ಚಾಳಿಸು ಎಂದಿನಿಂದ ಹಾಕ ಹತ್ತಿರುವಿ?"

"ನಾನೆಂದೂ ಚಾಳೀಸು ಹಾಕಿಲ್ಲ ಹುಜೂರ್."

"ಅಂದ ಮೇಲೆ ನಾನು ಇದೇ ಈಗ ಇನ್ನೊಬ್ಬ ಖುಶೀರಾಮನನ್ನು ಬರತರ್ಫ್ ಮಾಡಿ ಕಳಿಸಿದೆನೆಲ್ಲಾ?" ಇನ್ನು ಬಹಳ ಹೊತ್ತು ಸುಮ್ಮ ನಿದ್ದು ಉಪಯೋಗವಿಲ್ಲವೆಂದು ನಮ್ಮ ಸುಬ್ಬ್ಯಾ ಆಗ ಹಾಜರಾಗಿ ಬಂದ. ಅವನು ಶ್ರೀಮತಿಯವರ ಹಾಗೂ ಸಾಹೇಬರ ನಾಟಕ ಲೀಲೆ ಯನ್ನು ಅವಲೋಕಿಸುತ್ತ ನಿಂತಾಗ ಅವನಿಗೆ ಖುಶೀರಾಮನ ಪಾತ್ರ

ವಹಿಸುವ ವಿಚಾರ ಬಂದಿತ್ತು. ಮಾಲೀಕರನ್ನು ಉಳಿಸಿಕೊಳ್ಳಲಿಕ್ಕೆಂದು ಖುಶೀರಾಮನ ವೇಷಧರಿಸಿ ಬಂದು ಬಿಟ್ಟಿದ್ದ. ಪಾತ್ರ ಪಟುತ್ವದಲ್ಲಿ ಸೂಬ್ಬ್ಯಾ ಎಂದಿಗಾದರೂ ನುರಿತವ. ಮಾಲೀಕರಿಗೂ ಕೂಡ ಅವನ ವೇಷದಲ್ಲಿ ನ್ಯೂನತೆ ಕಂಡು ಬರಲಿಲ್ಲ.

"ನೀನು ಯಾರು?" ಎಂದು ಮಾಲೀಕರು ಸುಬ್ಬ್ಯಾನ್ನ ಪ್ರಶ್ನಿಸಿದರು.

ಆಗ್ಗೆ ನಮ್ಮ ಸುಬ್ಬ್ಯಾ ತಾನು ಬಂದ ಕಾರ್ಯವನ್ನೂ, ನೋಡಿದ ನಾಟಕವನ್ನೂ, ತಾನು ಅದರಲ್ಲಿ ತಾತ್ಕಾಲಿಕವಾಗಿ ವಹಿಸಿದ ಪಾತ್ರವನ್ನೂ ವಿಸ್ತರಿಸಿ ಹೇಳಿದ. ಮಾಲೀಕರಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. "ಖುಶೀರಾಮನೂ ಉಳಿದುಕೊಂಡ, ಶ್ರೀಮತಿ–ಸಾಹೇಬರೂ ಉಳಿದುಕೊಂಡರು. ಇದೆಲ್ಲದರಿಂದ ತಮ್ಮ ಕಂಪನಿಯೂ ಉಳಿದುಕೊಂಡಿತು" ಎಂದು ಹಿಗ್ಗಿ ತಾವು ಬರೆದುಕೊಟ್ಟ ಚೆಕ್ಕನ್ನು ಸುಬ್ಬ್ಯಾನಿಗೆ ಇನಾಂ ಕೊಟ್ಟರು. ಅಲ್ಲದೇ ತಮ್ಮ ಕಂಪನಿಯಲ್ಲಿ ಅವನಿಗೆ ಖುಶೀರಾಮನ ಕೆಳಗಿನ ನೌಕರಿಯನ್ನೇ ದಯಪಾಲಿಸಿ ಬಿಟ್ಟರು. ಮೊನ್ನೆಯೇ ಅವನ ಪತ್ರ ಬಂದಿದೆ ನೋಡಿ. ಈಗ ನೂರು ರೂಪಾಯಿ ಸಂಬಳವಂತೆ. ನನ್ನ ತಂಗಿಗೆ ಹೇಳಿದರೆ ನಂಬಲಿಲ್ಲ. ಅವನಿಂದ ರೂಪಾಯಿಗಳು ಬರಹತ್ತಿದ ಮೇಲೆ ಅವಳಿಗೆ ಈಗ ಖಾತ್ರಿಯಾಗಿದೆ. ಹೀಗಿದೆ, ಸ್ವಾಮೀ, ವಿನೋದ ಪಾತ್ರದ ಮಹತ್ವ. ಸಂದರ್ಭ-ಸಮಯೋಚಿತ ವಿನೋದದಿಂದ ಮನರಂಜನೆಯಾಗುವುದು. ಅದೆಲ್ಲಾ ಬಿಟ್ಟು 'ಜಾನಕೀ ಪರಿಣಯ'ದಲ್ಲಿ ಮುನಿಸಿಪಲ್ ಚುನಾವಣೆಯನ್ನು ತಂದು ಬಿಟ್ಟರೆ ಹೇಗೆ?" ಎಂದು ಹೇಳಿ ನಾಗಪ್ಪ ಸುಬ್ಬ್ಯಾನ 'ಪಾತ್ರಪಟುತ್ವ'ವನ್ನು ಮುಗಿಸಿದ.

ಗಿರಾಕಿಗಳೆಲ್ಲ ನಾಗಪ್ಪನ ಕತೆಗೆ ತುಂಬಾ ಮೆಚ್ಚಿದವರಾಗಿ ಮತ್ತೊಂದು ಟೀ ಆರ್ಡರು ಮಾಡಿಬಿಟ್ಟರು; ಡಿಕ್ಕಿಗೂ ಅಂದು ಇಡೀ ಬಿಸ್ಕೀಟ್ ಸಿಕ್ಕಿತು. ಎಲ್ಲರೂ ಪುನಃ ನಿದಾನವಾಗಿ ಚಹ ಕುಡಿದು ತಮ್ಮ ತಮ್ಮ ಮನೆಗಳಿಗೆ ಹೊರಟು ಹೋದರು.

## ೩. ಬಂಧು-ಪ್ರೇಮ

ನಿತ್ಯಕರ್ಮದಂತೆ ನಮ್ಮೂರ ನಾಗಪ್ಪ ವಿಶ್ರಾಂತಿ ಗೃಹಕ್ಕೆ ಬಂದು ತನ್ನ ಮುಕ್ಕಾಲು ಮಣೆಯ ಮೇಲೆ ಕುಳಿತುಕೊಂಡು ಚಹವನ್ನು ತರಲಿಕ್ಕೆ ಹೇಳಿದ. ಡಿಕ್ಕಿಯು ಬಿಸ್ಕೀಟಾಗಮನವನ್ನು ನಿರೀಕ್ಷಿಸುತ್ತ ಮೇಜಿನ ಬುಡದಲ್ಲಿ ಕುಳಿತುಕೊಂಡಿತ್ತು.

"ಕಠಿಣ ಕಾಲ ಬಂದಿದೆ, ಸ್ವಾಮೀ, ನೋಡಿದಲ್ಲೆಲ್ಲ ನಿರುದ್ಯೋಗ ಸಮಸ್ಯೆಯೇ ಕಂಡುಬರುತ್ತದೆ" ಎಂದು ಒಂದು ದೋಸೆಯ ಗಿರಾಕಿ ಹೇಳುತ್ತಿತ್ತು.

"ನಿಜಾ ಕಣ್ರೀ ನೀವು ಹೇಳೋದು; ಬೀ ಯೇ ಪರೀಕ್ಷಾ ಮಾಡಿದವ್ರು ಬೀದೀ ಪರೀಕ್ಷಾ ಮಾಡ್ತಾ ಹೊರಡ್ತಾರಂತೆ, ಕೇಳಿದ್ದೀರಾ?" ಎಂದು ಒಂದು ಚೂಡಾದ ಗಿರಾಕಿ ಅಭಿಪ್ರಾಯ ಪಟ್ಟಿತು.

"ಅದೂ ಕ್ಷೇಮವೇ ಅಂತಾ ಇಟ್ಟುಕೊಳ್ಳಿ, ಸ್ವಾಮೀ; ಕಲ್ತವರೆಲ್ಲಾ ಬೀದೀ ಪರೀಕ್ಷಾ ಮಾಡಿದ್ರೇನೇ ನಮ್ಮ ಪಟ್ಟಣಗಳ ಆರೋಗ್ಯ-ಶಿಸ್ತುಗಳು ಸುಧಾರಿಸಬಹುದಲ್ಲವೇ?" ಎಂದು ದೋಸೆಯ ಗಿರಾಕಿ ಪ್ರತಿಪ್ರಶ್ನೆ ಮಾಡಿತು.

"ಆದೊಂದು ದೊಡ್ಡ ಸಮಸ್ಯೆ, ಸ್ವಾಮೀ, ಮಕ್ಕಳಿಗೆ ವಿದ್ಯಾಭ್ಯಾಸ ಮಾಡ್ಸಿ ಬಿಟ್ಟರೆ ಮುಗೀಲಿಲ್ಲ ನಮ್ಮ ಜವಾಬ್ದಾರೀ. ಅವರಿಗೆ ನೌಕ್ರೀ ಸಿಗೋತನಕಾ ನಮಗ ಸದ್ದಿಲ್ಲಾ ನೋಡಿ."

ನೌಕ್ರೀ ಸಿಕ್ಕ ಮಾಲ್ಯಾರ ಏನು ಸೌಖ್ಯ ಕಣ್ರೀ, ಸಿಕ್ಕವರ ಕೂಡಾ ಸಿಗದೇ ಇದ್ದವರ ಜಗಳಾ."

ಗಿರಾಕಿಗಳ ಮಾತನ್ನು ಕೇಳುತ್ತಿರುವಾಗ ನಾಗಪ್ಪನ ಚಹ ಬಂದಿತು. ಅದನ್ನು ಕುಡಿದು ತಾಂಬೂಲ ಸಂಚಿಯನ್ನು ಬಿಚ್ಚುತ್ತ ನಾಗಪ್ಪ ಗಿರಾಕಿಗಳ ಹತ್ತಿರಕ್ಕೆ ಬಂದು ಕುಳಿತುಕೊಂಡ.

"ಏನು, ಸ್ವಾಮೀ, ಜಗಳಾ ಅಂದಿರಿ? ಏನು ವಿಶೇಷಾ?" ನಾಗಪ್ಪ ಕೇಳಿದ.

"ಓಹೋ, ನಾಗಪ್ಪನವರೇ! ಬನ್ನಿ, ಬನ್ನಿ, ಇದೊಂದು ವಿಚಿತ್ರದ ಜಗಳ ಅಣ್ಣತಮ್ಮಂದಿರಲ್ಲಿ...."

"ಯಾವ ಅಣ್ಣತಮ್ಮಂದಿರು?"

"ನಮ್ಮ ವಕೀಲರಿದ್ದಾರಲ್ಲಾ ಹನುಮಂತರಾಯರು, ಅವರ ಮಕ್ಕಳು ಇಬ್ಬರೂ ಬೀಯೇ ಎಮ್ಮೇ ಮಾಡಿ ಬೀಯೇದವಗೆ ನೌಕ್ರೀ ಸಿಕ್ಕಿದ್ದಕ್ಕೆ ಎಮ್ಮೇದ ಹುಡುಗ ಗುದ್ಯಾಡಿದನಂತ. ಇದೆಂಥಾ ಬಂಧು ಪ್ರೇಮಾ ಈ ಕಲ್ತು ಸುಧಾರಿಸಿದವರದೂ, ಅಂತಾ ನಾ ಕೇಳೋದು."

"ಕಲಿತವರೆಲ್ಲಾ ಜಗಳಾಡುವುದು ಬಿಟ್ಟು ಬಿಟ್ಟರೆ ನಮ್ಮ ವಕೀಲರ ಗತಿ ಏನಾದೀತು ಸ್ವಾಮೀ? ಬಂಧುಪ್ರೇಮ ಅನ್ನೋದು ಪುಸ್ತಕ ವಿದ್ಯಾದಿಂದ ಬರೋದಲ್ಲ. ಅದೊಂದು ಸ್ವಾಭಾವಿಕ ಪ್ರೀತಿ. ಆದರ್ಶವಾದ ಬಂಧುಪ್ರೇಮವನ್ನು ವಾಲ್ಮೀಕಿ ಮುನಿಯು ರಾಮಾಯಣದಲ್ಲಿ ಚಿತ್ರಿಸಿಲ್ಲವೇ? ಅಲ್ಲದೇ ನಮ್ಮ ಒಂದು ದಂತಕತೆಯಲ್ಲಿಯೂ ಒಂದು ಬಗೆಯ ಮೋಜಿನ ಬಂಧುಪ್ರೇಮವನ್ನು ವರ್ಣಿಸಿದ್ದಾರೆ." ಎಂದು ನಾಗಪ್ಪ ನುಡಿದ.

"ನಾನು ಹೇಳಿದ್ದು ನೌಕರಿಯ ಸಲುವಾಗಿ ಬಂದ ಜಗಳಾ, ನಾಗಪ್ನೋರೇ...." ಎಂದು ಗಿರಾಕಿ ಹೇಳುತ್ತಿತ್ತು.

"ಈ ಕತೆಯಲ್ಲಿಯೂ ಅದೇ ವಿಷಯ ಬಂದಿದೆ, ಸ್ವಾಮೀ; ನಿಮಗೆ ಇಚ್ಛೆಯಿದ್ದರೆ...."

"ಸರಿ, ಹಾಗಾದರೆ, ಹೇಳಿ ಬಿಡಿ ನಾಗಪ್ನೋರೆ, ಯಾವ ಕತೆ ಅದು?" ಗಿರಾಕಿಗಳು ನಾಗಪ್ಪನ ಸುತ್ತಲೂ ಕೂಡಿದರು.

ನಾನು ಹೇಳುವ ಕತೆಯು ಕಾಲವಿಲ್ಲದ್ದು. ಆದರೂ ಇಂದಿನ ಕಾಲಕ್ಕೂ ಅಂದಿಗೂ ಒಂದು ಮಾತ್ರ ಸಾಮ್ಯವಿಷಯ. ಅದೇನೆಂದರೆ, ಇಂದಿನಂತೆ ಅಂದೆಯೂ ನಿರುದ್ಯೋಗ ಸಮಸ್ಯೆಯು ಬಲವಾಗಿ ವ್ಯಾಪಿಸಿಕೊಂಡಿರಲಿಕ್ಕೆ ಬೇಕು. ಏಕೆಂದರೆ ಈ ಕತೆಯಲ್ಲಿ ಬರುವ ಅಣ್ಣ ತಮ್ಮಂದಿರು ಕಥಾ ಪ್ರಾರಂಭಕಾಲಕ್ಕೆ ನಿರುದ್ಯೋಗ ಚಕ್ರದಲ್ಲಿ ತಿರುಗಿ ತಿರುಗಿ

ಭ್ರಾಂತಿಗೊಂಡಿದ್ದರು. ಅವರೀರ್ವರೂ ಬಡವರಾಗಿದ್ದು ಚಾಕರಿ ಮಾಡಿದ ವಿನಃ ಹೊಟ್ಟೆ ತುಂಬಿಕೊಳ್ಳುವಂತಿರಲಿಲ್ಲ. ಎಲ್ಲಿಯಾದರೂ ಸೇವಕ ವೃತ್ತಿಯನ್ನು ಮಾಡಬೇಕೆಂದು ಅನೇಕ ಶ್ರೀಮಂತ ಜನರಲ್ಲಿ ಹೋಗಿ ಪ್ರಾರ್ಥಿಸಿಕೊಂಡರು. ಎಲ್ಲಿಯೂ ಉದ್ಯೋಗವೇ ಸಿಕ್ಕಲಿಲ್ಲ. ಸೇವಕ ವೃತ್ತಿಯನ್ನು ಬಿಟ್ಟು ಇತರ ಕಾರ್ಯ ಕೈಕೊಳ್ಳಲಿಕ್ಕೆ ಅವರು ಓದಿ ಬರೆದ ಯುವಕರಲ್ಲ. ಅಂತೆಯೇ ಈ ಕಾರ್ಯವನ್ನೊಂದುಳಿದು ಇನ್ನಾವ ರೀತಿಯಿಂದಲೂ ಅವರ ಬಾಳು ಸಾಗುವಂತಿರಲಿಲ್ಲ.

ಅಲ್ಲಲ್ಲಿ ತಿರುಗಿ ತಿರುಗಿ ಬೇಸರಗೊಂಡು ಇನ್ನು ದೇಶಾಂತರ ವನ್ನಾದರೂ ಮಾಡಿದರೆ ಉದ್ಯೋಗ ದೊರೆಯಬಹುದೆಂಬ ಆಶೆಯಿಂದ ಬಂಧುಗಳೀರ್ವರೂ ಊರು ಬಿಟ್ಟು ಹೊರಟರು. ಹಿರಿಯನ ಹೆಸರು ಗುಂಡ. ಅವನು ದೇಹ ಸಂಪತ್ತನ್ನು ಚೆನ್ನಾಗಿ ಪಡೆದವನಾಗಿದ್ದ. ಎತ್ತರ ವಾದ ಆಳು, ಬಲವುಳ್ಳ ಬಾಹುಗಳು. ಎಂತಹ ದೈಹಿಕಶ್ರಮದ ಕಾರ್ಯ ವನ್ನಾದರೂ ನಿರಾಯಾಸವಾಗಿ ಮಾಡಿಬಿಡುವಂತಿದ್ದ. ಚಿಕ್ಕವನ ಹೆಸರು ನಾರಾಯಣ. ಅವನು ಅಣ್ಣನಷ್ಟು ಬಲವಂತನಾಗಿರಲಿಲ್ಲ. ತೆಳುವಾದ ದೇಹ, ಬಿಳುಪಾದ ಮೋರೆಯುಳ್ಳವ. ಈಚೆಗೆ ಹೊಟ್ಟೆತುಂಬ ಅಶನ ವಿಲ್ಲದೇ ನಾರಾಯಣನು ಮತ್ತಿಷ್ಟು ಬಿಳುಪೇರಿದವನಾಗಿದ್ದ. ಹೀಗಿ ದ್ದರೂ ಚಿಕ್ಕವನಲ್ಲಿ ಹಿರಿಯನಿಗಿಂತ ಹೆಚ್ಚಾದ ಒಂದು ವಿಶಿಷ್ಟತೆಯಿತ್ತು. ಅಂದರೆ ನಾರಾಯಣನು ಚತುರ; ಯುಕ್ತಿಯುಳ್ಳವ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಹಿರಿಯನಾದ ಗುಂಡ ಶಕ್ತಿವಂತ, ಚಿಕ್ಕವನಾದ ನಾರಾ ಯಣನು ಯುಕ್ತಿವಂತ.

ಗುಂಡ ನಾರಾಯಣರು ಊರೂರು ತಿರುಗುತ್ತ ಕೊನೆಗೆ ಒಂದು ಪಟ್ಟಣಕ್ಕೆ ಬಂದು ತಲ್ಪಿದರು. ಅಲ್ಲಿ ವಿಚಾರಿಸುತ್ತ ಹೋದಂತೆ ಒಂದು ಜಾಗೆಯಲ್ಲಿ ಕೆಲಸಹತ್ತುವ ಸಂಭವವಿದೆಯೆಂದು ತಿಳಿದುಬಂತು. ಅವ ರಿಗೆ ಈ ಸುದ್ದಿಯನ್ನು ಕೇಳಿ ಬಲವಾದ ಆಸೆಹುಟ್ಟಿತು. ಯಾರಲ್ಲಿ ಕೆಲಸವಿದೆಯೆಂದು ವಿಚಾರಿಸುತ್ತ ಹೋದಂತೆ ಓರ್ವ ಅಂಗಡಿಕಾರನಲ್ಲಿ ಬಂದರು. ಅವನನ್ನು ಪ್ರಶ್ನಿಸಿದಾಗ್ಗೆ ಕೆಲಸ ಬಯಸುವವರು ಓರ್ವ ಆಚಾರ್ಯರಿದ್ದಾರೆಂದು ಗೊತ್ತಾಯಿತು.

"ಅವರ ವಿಳಾಸ ಗೊತ್ತಿದಿಯೋ ನಿಮಗೆ?" ಎಂದು ಗುಂಡ ಕೇಳಿದ.

"ಇಲ್ಲಿಂದ ಬಲಕ್ಕೆ ಹೋಗಿ ಪುನಃ ಎಡಕ್ಕೆ ತಿರುಗಿದರೆ ಒಂದು ದೇವಸ್ಥಾನ ಬರುವುದು. ಆಚಾರ್ಯರು ಅಲ್ಲಿಯ ಪೂಜಾರಿಗಳು. ಅವರ ಮನೆಯೂ ಅಲ್ಲಿಯೇ ಇದೆ." ಎಂದು ಅಂಗಡಿಕಾರ ಹೇಳಿದ.

ಅವರಲ್ಲಿ ಸೇವಕರು ಬೇಕಾಗಿರುವರಂತೆ; ನಾವು ನೌಕರೀ ಹುಡುಕುತ್ತ ಬಂದಿರುವೆವು."

"ದೊರೆಯಬಹುದು ನಿಮಗೆ ನೌಕರೀ. ಆದರೆ ಆಚಾರ್ಯರಲ್ಲಿ ಸೇವಕರಾಗಿದ್ದವರು ಬಹಳ ದಿನ ಬಾಳುವುದಿಲ್ಲವೆಂದು ಇಲ್ಲಿಯ ಜನರ ಅಭಿಪ್ರಾಯ.

"ಅಂದರೆ?"

"ಅದೇನೋ ಆಚಾರ್ಯರು ಸೇವಕರಿಂದ ವಿಪರೀತ ಕೆಲಸವನ್ನು ತೆಗೆದುಕೊಳ್ಳುತ್ತಾರಂತೆ. ಅಲ್ಲದೇ ಅವರ ಕೆಲಸದ ಕರಾರುಗಳೂ ಸಂಬಳದ ನಿಯಮಗಳೂ ಗಡುಚಾಗಿವೆಯಂತೆ. ಇದು ನಾನು ಕೇಳಿದ ಮಾತು. ನೀವೇ ಹೋಗಿ ಕಂಡುಕೊಳ್ಳಬಹುದು" ಎಂದು ಅಂಗಡಿಕಾರ ಅಭಿಪ್ರಾಯವಿತ್ತ.

ಗುಂಡ ನಾರಾಯಣರು ಆಚಾರ್ಯರಲ್ಲಿ ಹೋದರು. ಅವರಿಗೆ ಆಗ ಎಂಥ ಕೆಲಸವಾದರೂ ಮಾನ್ಯವಾಗಿತ್ತು. ಬಿಕ್ಷುಕರಿಗೆ ಆಯ್ದು ಕೊಳ್ಳುವ ಅಧಿಕಾರ ಪ್ರಸಂಗವಿಲ್ಲವಷ್ಟೇ? ಉಭಯತರೂ ತಮ್ಮೊಳಗೆ ಈ ವಿಷಯವನ್ನು ವಿಚಾರಿಸಿಕೊಂಡು ಎಂತಹ ಕೆಲಸವಿದ್ದರೂ ಸ್ವೀಕರಿಸಿ ಕೊಳ್ಳಬೇಕೆಂದೇ ನಿರ್ಣಯಿಸಿಕೊಂಡರು.

ಆಚಾರ್ಯರ ಮನೆಯು ದೇವಸ್ತಾನದ ಹಿಂದೆಯೆ ಇದ್ದಿತು. ಅವರ ಮನೆಯ ಪಕ್ಕದಲ್ಲಿ ಒಂದು ಚಿಕ್ಕತೋಟವೂ, ಅದರಲ್ಲಿ ಒಂದು ಬಾವಿಯೂ ಇದ್ದವು. ಆಚಾರ್ಯರು ಆ ಕಾಲಕ್ಕೆ ಮೂರನೇ ಲಗ್ನ ಮಾಡಿಕೊಂಡಿದ್ದು ಹೆಂಡತಿಯನ್ನು ತವರುಮನೆಗೆ ಕಳುಹಿದ್ದರು. ಗುಂಡ ನಾರಾಯಣರು ಆಚಾರ್ಯರ ಮನೆಯನ್ನು ತಲ್ಪಿದಾಗ ಅವರು ತಮ್ಮ

ಕುದುರೆಗೆ ಕಡಲೆಯನ್ನು ತಿನಿಸುತ್ತಿದ್ದರು. ಇವರನ್ನು ಕಂಡು ಆಚಾರ್ಯರು ಬಂದ ಕಾರ್ಯವನ್ನು ವಿಚಾರಿಸಿದರು.

"ಸ್ವಾಮೀ, ತಮಗೆ ಸೇವಕರು ಬೇಕಾಗಿದೆಂದು ಕೇಳಿ ಬಂದಿರುವೆವು. ನಾವು ಅಣ್ಣತಮ್ಮಂದಿರು. ತಮ್ಮಲ್ಲಿ ಸೇವೆಯನ್ನು ಕೈಕೊಳ್ಳಬೇಕೆಂದು ಬಯಸಿ ಬಂದಿದ್ದೇವೆ."

"ನಮಗೆ ಸೇವಕರು ಬೇಕಾಗಿರುವುದೇನೋ ನಿಜವೇ. ಆದರೆ ಸದ್ಯ ಒಬ್ಬನೇ ಚಾಕರನು ಬೇಕು. ನಿಮಗೆ ಕೆಲಸದ ಮಾಹಿತಿ ಇದೇಯೇ?" ಎಂದು ಆಚಾರ್ಯರು ಕೇಳಿದರು.

"ನಮಗೇನು ಗೊತ್ತು, ಸ್ವಾಮೀ? ತಾವು ಹಚ್ಚಿದ ಕೆಲಸವನ್ನು ಕೈಕೊಳ್ಳುವೆವು. ಏನೇನು ಕಾರ್ಯಗಳಾಗಬೇಕು ನಮ್ಮಿಂದ?"

"ನಮ್ಮ ಸೇವಕರಾಗಿ ಈಗ ಅನೇಕರು ಓಡಿಹೋಗಿದ್ದಾರೆ. ಅಂತೆಯೇ ಇನ್ನು ಮುಂದೆ ನಾನು ತೆಗೆದುಕೊಳ್ಳುವ ಸೇವಕರನ್ನು ಜಾಗ್ರತೆಯಿಂದ ಆಯ್ದುಕೊಳ್ಳಬೇಕಾಗಿದೆ. ನಮ್ಮ ಕರಾರುಗಳಿಗೆ ನಿಮ್ಮ ಒಪ್ಪಿಗೆಯುಂಟೇ?" ಆಚಾರ್ಯರು ಕೇಳಿದರು.

"ನಿವೇದಿಸಬೇಕು, ಸ್ವಾಮೀ ಏನು ಕಾರ್ಯ ವಿಶೇಷಗಳು?"

"ನಮ್ಮಲ್ಲಿ ಈಗ ಮನೆಯಲ್ಲಿ ಹೆಂಗಸರಿಲ್ಲ. ಕೆಲಸವೇನೋ ಸ್ವಲ್ಪವೇ ಅಗಿದೆ. ಆದರೆ ಮುಖ್ಯವಾಗಿ ಕೆಲಸ ಮಾಡಹತ್ತಿದ ಮೇಲೆ ನಾಲ್ಕೊಪ್ಪತ್ತಾದರೂ ನಮ್ಮಲ್ಲಿ ಇದ್ದುಕೊಂಡಿರಬೇಕು. ದಿನಕ್ಕೊವ್ಮೆ ಸೇವಕರನ್ನು ಬದಲಾಯಿಸುವುದು ನನಗೆ ಇಷ್ಟವಿಲ್ಲ. ಇದಕ್ಕೆ ನಿಮ್ಮ ಸಮ್ಮತಿಯೇ?"

"ಅದೇನು, ಸ್ವಾಮೀ, ನಾವು ನಿಮ್ಮಲ್ಲಿಯೇ ಕಾರ್ಯಕ್ಕೆ ನಿಂತುಕೊಳ್ಳಲು ಬಂದಿರುವೆವು. ಸೀವಾಗಿ ನಮ್ಮನ್ನು ತ್ಯಜಿಸುವುದೇ ಹೊರತು ನಾವೇನು ನಿಮ್ಮ ಸೇವೆಯನ್ನು ಬಿಟ್ಟು ಹೋಗುವವರಲ್ಲ."

"ಎಲ್ಲರೂ ಸುರುವಿನಲ್ಲಿ ಹೀಗೆಯೇ ಹೇಳಿ ಬಿಡುತ್ತಾರೆ. ಆದರೆ ಎರಡೇ ದಿನಗಳಲ್ಲಿ...."

"ಚಿಂತಿಸಬಾರದು, ಸ್ವಾಮೀ, ತಾವು ನಾವು ಬಿಟ್ಟು ಹೋಗದಂತೆ

ಯಾವ ಕರಾರನ್ನಾದರೂ ಮಾಡಿಕೊಳ್ಳಬಹುದು. ಎಲ್ಲವೂ ಸ್ವಾಮಿಗಳನ್ನೇ ಅವಲಂಬಿಸಿದೆಯಲ್ಲವೇ?"

"ಸರಿ, ಹಾಗಾದರೆ. ನಿಮ್ಮ ಹೆಸರೇನು?"

"ನಾನು ಗುಂಡ."

"ನಾನು ನಾರಾಯಣ."

"ಸರಿ, ಸದ್ಯ ನಮಗೆ ಬೇಕಾಗಿರುವುದು ಒಬ್ಬ ಸೇವಕ. ನಿಮ್ಮಲ್ಲಿ ಯಾರು ಶಿಷ್ಯರಾಗಬೇಕೆನ್ನುವಿರಿ? ನಮಗೆ ಯಾರಾದರೂ ಸರಿಯೇ?"

ಈ ಪ್ರಶ್ನೆಗೆ ಉತ್ತರವನ್ನು ಹೇಳುವ ಪೂರ್ವದಲ್ಲಿ ಗುಂಡ-ನಾರಾಯಣರು ಒಬ್ಬರನ್ನೊಬ್ಬರು ನೋಡಿದರು. ನಾರಾಯಣನು ತಾನೇ ಮೊದಲು ಚಾಕರಿಗೆ ಹತ್ತಿಕೊಳ್ಳಬೇಕೆಂದು ಯೋಚಿಸಿದ. ಆದರೆ ಅವನು ಇನ್ನೂ ನಿರ್ಣಯಿಸುವ ಪೂರ್ವದಲ್ಲಿಯೇ ಹಿರಿಯನಾದ ಗುಂಡನು ನಾರಾಯಣನನ್ನು ಈ ಕಾರ್ಯಕ್ಕೆ ಹಚ್ಚಲು ಒಪ್ಪದೇ ಆಚಾರ್ಯರಿಗೆ ಸ್ಪಷ್ಟವಾಗಿ ಹೇಳಿದ.

"ನಾನೇ ತಮ್ಮ ಸೇವಕನಾಗಲು ಬಯಸುತ್ತೇನೆ, ಸ್ವಾಮೀ," ಗುಂಡ ಅಂದ.

"ಯಾರು, ಗುಂಡನೇ? ಸರಿ, ಇನ್ನು ನಿನ್ನ ದೈನಂದಿನದ ಕಾರ್ಯಕ್ರಮ."

"ಹೇಳಬೇಕು, ಸ್ವಾಮೀ."

"ಲಕ್ಷ್ಯವಿಟ್ಟು ಕೇಳಿಕೋ, ಗುಂಡಾ. ನೀನು ನಮ್ಮಲ್ಲಿ ದಿನಾಲು ಮಾಡತಕ್ಕ ಕಾರ್ಯಗಳೆಂದರೆ ಈ ಪ್ರಕಾರದವು.

೧. ದಿನಾಲು ಮೂರು ಹೊರೆ ಕಟ್ಟಿಗೆ ತಂದು ಹಾಕುವುದು.

೨. ದಿನಾಲು ಕುದುರೆಗೆ ನೀರು ತೋರಿಸುವುದು.

೩. ಪ್ರತಿನಿತ್ಯ ಕುದುರೆಯ ಕಾಲಲ್ಲಿ ಬೆಂಕಿ ಹಾಕುವುದು. ಇಲ್ಲಿ ಸೊಳ್ಳೇ ಕಾಟ ಬಹಳ.

೪. ಪ್ರತಿನಿತ್ಯ ಮನೆಯ ಹಿತ್ತಲದಲ್ಲಿರುವ ಚಿಕ್ಕ ಹೌದಿನಲ್ಲಿ ನೀರು ತುಂಬುವುದು.

ಇವು ಮುಖ್ಯ ಕಾರ್ಯಗಳು. ಅಲ್ಲದೇ ಮನೆಯಲ್ಲಿ ಸಣ್ಣಪುಟ್ಟ ಕೆಲಸಗಳಿದ್ದರೆ ಅವನ್ನೂ ಮಾಡಬೇಕು. ಇವುಗಳನ್ನೆಲ್ಲ ಮಾಡ ಬಲ್ಲಿಯಾ?"

"ಆಗಬಹುದು, ಸ್ವಾಮೀ, ಎಲ್ಲವನ್ನೂ ಕೈಕೊಳ್ಳುವೆನು. ಆದರೆ ಸ್ವಾಮಿಗಳು...."

"ಬಲ್ಲೆ, ಬಲ್ಲೆ, ಸಂಬಳದ ವಿಷಯವಷ್ಟೇ? ಈ ಎಲ್ಲ ಕಾರ್ಯಗಳನ್ನು ಪೂರ್ತಿಯಾಗಿ ಮಾಡುತ್ತ ಬಂದರೆ ನಿನಗೆ ದಿನಾಲೂ ಎಲೆಯ ತುಂಬ ಅನ್ನವನ್ನೂ, ತಿಂಗಳಿಗೆ ನಾಲ್ಕು ರೂಪಾಯಿ ವೇತನವನ್ನೂ ಕೊಡುತ್ತೇವೆ. ಮತ್ತೇನು?"

"ಆಗಬಹುದು, ಸ್ವಾಮೀ, ನನ್ನ ಕಬೂಲಿ ಇದಕ್ಕೆಲ್ಲ."

"ಆದರೆ ಒಂದು ಕರಾರು, ನಮ್ಮಲ್ಲಿಯ ನೌಕರಿಯನ್ನು ನೀನು ಬೇಡವೆಂದು ಒಂದು ವರ್ಷದೊಳಗಾಗಿ ಬಿಟ್ಟು ಹೋದರೆ, ನೀನು ಒಂದು ನೂರು ರೂಪಾಯಿ ದಂಡಕೊಡಬೇಕು, ಅಲ್ಲದೇ ಕತ್ತೆಯ ಮೇಲೆ ಬಾಲದ ಕಡೆಗೆ ಮೋರೆಮಾಡಿಕೊಂಡು ಕುಳಿತು ಊರ ಸುತ್ತಲೂ ಮೂರು ಸಾರೆ ಸುತ್ತು ಹಾಕಬೇಕು. ತಿಳಿಯಿತೇ?"

"ತಿಳಿಯಿತು, ಸ್ವಾಮೀ, ಆದರೆ ತಾವೇ ನನ್ನ ನೌಕರಿ ಬೇಡವೆಂದರೆ?"

"ಸರಿ, ನಾವು ಅದೇ ದಂಡ ಶಿಕ್ಷೆಗೆ ಪಾತ್ರರು. ಇದಕ್ಕೆ ನಿನ್ನ ಒಪ್ಪಿಗೆಯೇ?"

"ಆಗಬಹುದು, ಸ್ವಾಮಿ, ನಾಳಿನಿಂದಲೇ ಬಂದು ಕೆಲಸಕ್ಕೆ ಕೈಕೊಳ್ಳುವೆನು." ಎಂದು ಹೇಳಿ ಗುಂಡ ನಾರಾಯಣರು ಆಚಾರ್ಯರಿಗೆ ನಮಸ್ಕರಿಸಿ ಹೊರಟು ಬಂದರು.

ಆಚಾರ್ಯರನ್ನು ಸಂದರ್ಶಿಸಿ ಗುಂಡ-ನಾರಾಯಣರು ತಾವು ಆ ದಿನ ಮೊದಲು ಕಂಡ ಅಂಗಡಿಕಾರನಲ್ಲಿ ಬಂದರು. ಅವನಿಗೆ ತಮ್ಮ ವೃತ್ತಾಂತವನ್ನು ತಿಳುಹಿಸಿ, ಅವನ ಅಂಗಡಿಯ ಹಿಂಭಾಗದ ಒಂದು ಚಿಕ್ಕ ಕೋಣೆಯನ್ನು ಬಾಡಿಗೆ ಹಿಡಿದು ಅಲ್ಲಿಯೇ ಇರುವುದೆಂದು ನಿರ್ಣಯಿಸಿದರು. ಅಂಗಡಿಯವರು ಇವರ ಬಡತನದ ಕಷ್ಟವನ್ನು ಕೇಳಿ

ನಾರಾಯಣನಿಗೆ ತನ್ನಲ್ಲಿಯೇ ಉದ್ಯೋಗ ಹಚ್ಚಿಕೊಟ್ಟ. ಮತ್ತು ಗುಂಡನಿಗೆ ಆಚಾರ್ಯರಲ್ಲಿ ಹುಷಾರಿಯಾಗಿಕೊಂಡು ಕೆಲಸ ಮಾಡ ಲಿಕ್ಕೆ ಉಪದೇಶ ಮಾಡಿದ.

ಆ ದಿನ ರಾತ್ರಿ ಊಟಮಾಡಿ ಮಲಗುವಾಗ ಗುಂಡ-ನಾರಾಯ ಣರು ತಮ್ಮ ಕೆಲಸಗಳ ವಿಷಯವಾಗಿ ಮಾತನಾಡಿದರು.

"ನೋಡು, ಗುಂಡಾ ಮತ್ತೆ, ಆಚಾರ್ಯರ ನೌಕರೀ ಸಾಕು ಅಂತಾ ಅನ್ನೋಹಾಂಗಿಲ್ಲಾ, ಹುಷಾರಿ!"

"ಅದೇತಕ್ಕೆ ಭಯವ್ವೋ, ನಾನಿ! ಒಂದೇ ವರ್ಷದ ಮಟ್ಟಿಗೆ ಆ ಕರಾರು ಅಷ್ಟೇ?"

"ಆದರೂ ಯಾಕೋ ಸಂಶಯ ಬರ್ತದಪಾ ನನಗ. ಆಚಾರ್ರು ಏನು ಹಂಚ್ಕೀ ಮಾಡ್ಯಾರೋ."

"ಅದರಾಗೇನು ಹಂಚ್ಕೀ, ನಾನಿ. ಯಾವ ಕಾಳಜೀನೂ ಬ್ಯಾಡಾ. ದೇವರು ಕೊಟ್ಟ ದೇಹದ ಶಕ್ತೀ ಅದೆ ನನಗ. ನೀ ಮಾತ್ರ ಜಪ್ಪಿಸಿ ಕೊಂಡಿರು ಪ್ರಕೃತಿ, ತಿಳೀತ?" ಅಂತಾ ಮಾತನಾಡುತ್ತ ಉಭಯ ಬಂಧುಗಳೂ ದೀರ್ಘನಿದ್ರೆಹೋದರು.

ಮಾರನೆಯ ದಿವಸ ಬೆಳಗಿನಲ್ಲಿ ಎದ್ದವರೇ ತಮ್ಮ ತಮ್ಮ ಕೆಲಸ ಗಳಿಗೆ ಹೊರಟು ಹೋದರು.

ಗುಂಡನು ಆಚಾರ್ಯರಲ್ಲಿ ಬಂದ ಕೂಡಲೇ ಅವರು ಅವನ ಕೈಯಲ್ಲಿ ಒಂದು ದೊಡ್ಡ ಕೊಡಲಿಯನ್ನೂ ಹಗ್ಗವನ್ನೂ ಕೊಟ್ಟು ಕಟ್ಟಿಗೆ ಹೊರೆಗಳನ್ನು ತರಲಿಕ್ಕೆ ಅಡವಿಗೆ ಕಳುಹಿದರು.

ಗುಂಡನು ಕೊಡಲಿಯನ್ನು ಹಿಡಿದದ್ದು ಅದೇ .ಮೊದಲು. ಅಡವಿ ಯಲ್ಲಿ ಹೋಗಿ ಅತ್ತಿತ್ತ ತಿರುಗಾಡಿ ಕಟ್ಟಿಗೆ ಹೊರೆಮಾಡಿಕೊಂಡು ಆಚಾರ್ಯರಲ್ಲಿ ಬರುವುದರೊಳಗೆ ಒಂಬತ್ತು ಗಂಟೆಯಾಯಿತು. ಕಟ್ಟಿಗೆ ಹೊರೆಗಳನ್ನು ಕೆಳಗಿರಿಸಿ ಸ್ವಲ್ಪ ವಿಶ್ರಮಿಸಿಕೊಳ್ಳಬೇಕೆನ್ನುವುದರಲ್ಲಿಯೇ ಆಚಾರ್ಯರು ಲಗುಬಗೆಯಿಂದ ಬಂದು ಕುದುರೆಗೆ ನೀರು ತೋರಿಸಿ ಕೊಂಡು ಬರಲಿಕ್ಕೆ ಆಜ್ಞಾಪಿಸಿದರು.

"ಗುಂಡನು ಆಚಾರ್ಯರ ಕುದುರೆಯನ್ನು ಅರ್ಧಮೈಲಿನ

ದೂರದಲ್ಲಿರುವ ಕೆರೆಗೆ ಕರೆದೊಯ್ದು ಮೈತೊಳೆದು ನೀರು ಕುಡಿಸಿ ಕೊಂಡು ಬಂದ. ಕುದುರೆಯನ್ನು ಕೊಟ್ಟಿಗೆಯಲ್ಲಿ ಕಟ್ಟಿ ಕುಳಿತುಕೊಳ್ಳ ಬೇಕೆನ್ನುವಷ್ಟರಲ್ಲಿಯೇ ಆಚಾರ್ಯರು ಗಡಿಬಿಡಿಯಿಂದ ಬಂದರು.

ಕುದುರೆಯ ಚಾಕರಿ ಆಯಿತಷ್ಟೇ? ಕುಳಿತು ಬಿಟ್ಟೆಯಲ್ಲ? ಹೌದನ್ನು ತುಂಬಬೇಕಲ್ಲವೇ? ಅದೋ ನೋಡು, ಆ ಗೋಡೆಗಿರುವ ಹಗ್ಗ, ಹಿತ್ತಲಲ್ಲಿರುವ ಕೊಡವನ್ನು ತೆಗೆದುಕೊಂಡು ನೀರು ಸೇದಿ ಹಾಕು. ಏಳು" ಎಂದು ಆಜ್ಞೆಮಾಡಿ ಹೊರಟು ಹೋದರು.

ಗುಂಡನು ಹಗ್ಗವನ್ನು ತೆಗೆದುಕೊಂಡು ಹಿತ್ತಲಿನಲ್ಲಿ ಹೋದ. ಅಲ್ಲಿರುವ ಹೌದನ್ನು ನೋಡಿದ. ಮೂರು-ನಾಲ್ಕು ಕೊಡ ನೀರು ಹಿಡಿ ಯುವಷ್ಟು ಪ್ರಮಾಣವಿತ್ತು. ಬಾವಿಯ ಮೇಲೆ ಹಗ್ಗವನ್ನು ಹಾಕಿ ನೀರು ಜಗ್ಗಿದ. ಒಂದು, ಎರಡು, ಮೂರು, ನಾಲ್ಕು, ಐದು, ಆರು. ಏಳನೇ ಕೊಡವನ್ನು ತಂದಾಗ ಹೌದು ಇನ್ನೂ ಬರಿದೇ ಆಗಿತ್ತು. ಗುಂಡನಿಗೆ ಅಚ್ಚರಿಯಾಯಿತು. ಪುನಃ ನಾಲ್ಕು ಕೊಡ ನೀರು ಸುರು ವಿದ. ಹೌದು ಇನ್ನೂ ಬರಿದೆ. ಮತ್ತೆ ನಾಲ್ಕು ಕೊಡ ನೀರು ತಂದು ಹಾಕಿದ. ಇನ್ನೂ ತುಂಬಿರಲಿಲ್ಲ ಹೌದು.

ಗುಂಡನ ಕೈಗಳಿಗೆ ಗುಳ್ಳೆ ಬಂದಿದ್ದವು. ಆದರೂ ಪುನಃ ಜಗ್ಗಿ ಹಾಕಿದ. ಸುಮಾರು ಮೂವತ್ತು ಕೊಡ ನೀರು ಹಾಕಿದ ನಂತರ ಹೌದು ತುಂಬಿತು. ಪಾರಾದೆನೆಂದು ಹಿಗ್ಗಿ ಗುಂಡ ಉಸ್ಸೆಂದು ಕುಳಿತು ಕೊಂಡ.

ಅಷ್ಟೊತ್ತಿಗೆ ಎರಡು ಗಂಟೆಯಾಗುತ್ತ ಬಂದಿತ್ತು. ಗುಂಡನಿಗೆ ಹೊಟ್ಟೆ ಹಸಿದು ಎಲೆ ತುಂಬ ಬರಲಿರುವ ಅನ್ನದ ಚಿತ್ರ ಕಾಣಿಸ ಹತ್ತಿತು. ಆಚಾರ್ಯರಲ್ಲಿ ಬಂದು ಊಟದ ಹೊತ್ತಾಯಿತೆಂದು ಹೇಳಿದ.

ಆಚಾರ್ಯರು ಒಳಗೆ ಹೋಗಿ ಹೊರಗೆ ಒಂದರು. ಅವರ ಕೈಯಲ್ಲಿ ಒಂದು ಚಿಕ್ಕ ಎಲೆಯಿತ್ತು. ಅದು ಅಳ್ಳೀಎಲೆಯೊಂದು! ಅದರ ತುಂಬ ಅನ್ನ ಹಾಕಿ ಕೊಟ್ಟರು. ಗುಂಡನಿಗೆ ಅದನ್ನು ನೋಡಿ ಹುಚ್ಚು ಹಿಡಿದಂತಾಯಿತು.

" ಇದೇನು, ಸ್ವಾಮೀ " ಎಂದು ಕೇಳಿದ.

" ಇದು ನಿನಗೆ ಪ್ರತಿನಿತ್ಯ ದೊರಕುವ ಎಲೆಯ ತುಂಬ ಅನ್ನ ! " ಎಂದು ಆಚಾರ್ಯರು ಹೇಳಿದರು.

ಸರಿ, ನೌಕರಿಯ ಪ್ರಥಮ ದಿನವೇ ಜಗಳಾಡುವುದೇ? ಹಸಿದ ಹೊಟ್ಟೆಗೆ ಗುಂಡ ಅದೇ ಅನ್ನವನ್ನೇ ಬಲಿಮಾಡಿದ. ಅನಂತರ ಹೊಟ್ಟೆ ತುಂಬ ನೀರು ಕುಡಿದು ಡರ್ರೆಂದು ತೇಗಿಬಿಟ್ಟ !

ಗುಂಡನ ಅಂದಿನ ಅಳ್ಳೀ ಎಲೆಯ ತುಂಬ ಉಂಡ ಊಟವು ಅವನ ಹೊಟ್ಟೆಯನ್ನು ಹೆಚ್ಚಾಗಿ ಹಸಿವೆಮಾಡಿತು. ಗುಂಡನಿಗೆ ದೇಹ ಸಂಪತ್ತು ಚೆನ್ನಾಗಿಯೇ ಇತ್ತೆಂದು ಹೇಳಿರುವೆನಷ್ಟೇ? ಆಚಾರ್ಯರು ಕೊಟ್ಟ ಅನ್ನವು ಅವನಿಗೆ ಯಾವ ಬಗೆಯ ಹಸಿವೆಯನ್ನೂ ತೃಪ್ತಿಪಡಿಸಲಿಲ್ಲ.

ಅಷ್ಟೊತ್ತಿಗೆ ನಾಲ್ಕು ಗಂಟೆಯಾಯಿತು. ಇನ್ನಾದರೂ ಸ್ವಲ್ಪ ವಿಶ್ರಮಿಸಿಕೊಂಡು ಮುಂದಿನ ಕಾರ್ಯಕ್ಕೆ ಹೋಗಬೇಕೆಂದು ಗುಂಡ ಕುದುರೆಯನ್ನು ಕಟ್ಟಿದ ಕೊಟ್ಟಿಗೆಯಲ್ಲಿ ಮಲಗಿಕೊಳ್ಳಲಿಕ್ಕೆ ತಯಾರಿ ಸುತ್ತಿದ್ದ. ಆದರೆ ಆಚಾರ್ಯರು ಅವನಿಗೆ ಹಾಗೆ ಮಲಗಗೊಡಲಿಲ್ಲ. ಮನೆಯ ಸಣ್ಣಪುಟ್ಟ ಕೆಲಸಗಳೆಂದು ಅವನಿಗೆ ದೊಡ್ಡ ಕೆಲಸವನ್ನೇ ಹಚ್ಚಿಬಿಟ್ಟರು.

ಗುಂಡನು ಆಚಾರ್ಯರ ಎಲ್ಲ ಕೆಲಸವನ್ನೂ ಮುಗಿಸಿಕೊಂಡು ನಾರಾಯಣನಲ್ಲಿ ಬಂದಾಗ ರಾತ್ರಿ ಹತ್ತು ಗಂಟೆಯಾಗಿತ್ತು. ಅವನ ಮೋರೆಯಲ್ಲಿ ಜೀವನದ ಕಳೆಯೇ ಇರಲಿಲ್ಲ. ತನ್ನ ಕೋಣೆಗೆ ಬಂದವನೇ ಉಸ್ಸೆಂದು ಕುಳಿತುಕೊಂಡ.

" ಅದೇನು ಗುಂಡಾ, ಆಚಾರ್ಯರ ಕೆಲಸ ಮುಗಿಸುವುದು ಬಹಳ ಹೊತ್ತಾಯಿತಲ್ಲ. ಊಟಮಾಡಿ ಬಂದಿರುವೆಯಾ ? ನಾರಾಯಣ ಪ್ರಶ್ನಿಸಿದ.

" ಏನಾದರೂ ತಿನ್ನಲಿಕ್ಕೆ ಇದೇಯೇ, ನಾನೀ ? ಮೊದಲು ಕೊಟ್ಟು ಬಿಡು " ಎಂದು ಗುಂಡ ನುಡಿದ.

" ಅದೇಕೆ ಆಚಾರ್ಯರಲ್ಲಿ ಊಟ ಸಿಗಲಿಲ್ಲವೋ ? "

" ಎಲೆಯ ತುಂಬ ಅನ್ನವನ್ನು ಕೊಟ್ಟರು ಆಚಾರ್ಯರು. "

" ಮತ್ತೇಕೆ ಹಸಿವೆ ? "

" ಆ ಎಲೆಯನ್ನು ಕೇಳು ಆ ಪ್ರಶ್ನೆ. "

" ಅಂದರೆ ? "

" ಅದು ಅಳ್ಳಿಯ ಎಲೆ. "

ನಾರಾಯಣನಿಗೆ ಇದರ ಅರ್ಥವಾಗಲಿಲ್ಲ. ಆಗ ಗುಂಡ ಎಲ್ಲ ತಿಳಿಸಿ ಹೇಳಿದ. ಅಲ್ಲದೇ ಆ ಮೂವತ್ತು ಕೊಡ ನೀರಿನ ಹೌದಿನ ವಿಷಯವನ್ನೂ, ಆ ಎರಡು ಮೈಲು ದೂರ ಅಡವಿಗೆ ಹೋಗಿ ಕಟ್ಟಿಗೆ ಹೊರೆಗಳನ್ನು ತಂದದ್ದನ್ನೂ, ಆ ಕುದುರೆಗೆ ನೀರು ತೋರಿಸುವ ಕಾರ್ಯವನ್ನೂ, ಆ ಅಳ್ಳಿಯ ಎಲೆಯ ತುಂಬ ದೊರೆತ ಅನ್ನವನ್ನೂ, ಅಲ್ಲದೆ ಕಿರುಕುಳವಾದ ಆ ಆಚಾರ್ಯರ ಸಣ್ಣ ಪುಟ್ಟ ಮನೆಯ ಕೆಲಸಗಳ ದೊಡ್ಡ ವೃತ್ತಾಂತವನ್ನೂ ಗುಂಡ ಹಾಸಿಗೆಯ ಮೇಲೆ ಮಲಗಿಕೊಂಡಿರುವಾಗ ನಾರಾಯಣನಿಗೆ ವಿವರಿಸಿ ಹೇಳಿದ.

ಅಣ್ಣನ ಈ ವೃತ್ತಾಂತವನ್ನು ಕೇಳುತ್ತ ನಾರಾಯಣನಿಗೆ ಚಿಂತೆಯಾಯಿತು. ಚಿಂತಿಸುತ್ತ ಹೋದಂತೆ ಕೋಪಬಂತು. ಕೋಪಿಸುತ್ತ ಹೋದಂತೆ ಆಚಾರ್ಯರ ಮೇಲೆ ಸೇಡು ತೆಗೆದುಕೊಳ್ಳುವ ವಿಚಾರ ಬಂದಿತು. ಆ ಸೇಡನ್ನು ಯಾವ ರೀತಿಯಲ್ಲಿ ತೀರಿಸಿಕೊಳ್ಳಬೇಕೆಂದು ಯೋಚಿಸುತ್ತ ಅವನಿಗೆ ಆ ರಾತ್ರಿ ನಿದ್ರೆ ಹತ್ತಲಿಲ್ಲ. ಇದೇ ಚಿಂತೆಯಲ್ಲಿ ರಾತ್ರಿಯೆಲ್ಲಾ ಕಳೆದು ಬೆಳಗಾಯಿತು.

ಗುಂಡನಿಗೆ ಹಾಸಿಗೆಯನ್ನು ಬಿಟ್ಟು ಏಳುವಂತೆ ಅನಿಸಲಿಲ್ಲ. ಕೈತುಂಬ ಗುಳ್ಳೆಗಳು ಬಂದಿದ್ದು ಅವುಗಳ ನೋವಿನಲ್ಲಿ ಗುಂಡನಿಗೆ ಯಾವ ಪದಾರ್ಥವನ್ನೂ ಮುಟ್ಟಲಿಕ್ಕೆ ಬರುವಂತಿರಲಿಲ್ಲ. ಆದರೂ ಆಚಾರ್ಯರ ಆ ನೂರು ರೂಪಾಯಿ ದಂಡ, ಆ ಕತ್ತೆಯ ಮೇಲೆ ಕುಳಿತು ಮೆರೆಯುವ ಶಿಕ್ಷೆಯ ಚಿತ್ರಗಳನ್ನು ನೆನಪಿಗೆ ತಂದುಕೊಂಡು ತನ್ನ ಅಂಥ ಸ್ಥಿತಿಯಲ್ಲಿಯೇ ಹಾಸಿಗೆಯಿಂದ ಎದ್ದು ಆಚಾರ್ಯರಲ್ಲಿ ಹೊರಡುವ ಯತ್ನ ನಡೆಸಿದ್ದ. ಆದರೆ ಅಣ್ಣನ ಆ ಮೋರೆಯನ್ನೂ, ಅವನ ಕೈಗಳನ್ನೂ ನೋಡಿದ ನಾರಾಯಣನಿಗೆ ಕೋಪ ಕನಿಕರ ಬಂದು

ಗುಂಡನಿಗೆ ಮಲಗಿಕೊಳ್ಳಲಿಕ್ಕೆ ಹೇಳಿದ. ಅಂಗಡಿಕಾರನಿಂದ ತಿನ್ನುವ ಪದಾರ್ಥಗಳನ್ನು ತಂದು ಕೊಟ್ಟ.

"ಮತ್ತೆ ಆಚಾರ್ಯರಲ್ಲಿ ಹೋಗುವುದು ಬೇಡವೇ ಇಂದು?" ಗುಂಡ ಪ್ರಶ್ನಿಸಿದ.

"ಇಂದು ನಾನೇ ಹೋಗುತ್ತೇನೆ ಅವರಲ್ಲಿ. ನೀನು ಇಂದು ಮಲಗಿಕೊಂಡಿರು. ಅಂಗಡಿಕಾರನಿಗೆ ನಾನು ಪುನಃ ಇಲ್ಲಿಗೆ ಬರುವ ವರೆಗೆ ನಿನಗೆ ಊಟದ ಸಾಮಾನುಗಳನ್ನು ಕೊಡಲಿಕ್ಕೆ ಹೇಳಿದ್ದೇನೆ. ನಿನಗೆ ಮೈಯಲ್ಲಿ ಹಗುರಾದ ನಂತರ ಅಂಗಡಿಯಲ್ಲಿ ನಾನು ಮಾಡುತ್ತಿರುವ ಕೆಲಸವನ್ನು ನೀನು ಮಾಡುತ್ತಿರು........"

"ಇದೇನು, ನಾನಿ? ಬಹಳ ದಿವಸ ಹೋಗುವವರಂತೆ ನನಗೆ ಎಲ್ಲ ಹೇಳುತ್ತಿರುವಿ. ಆಚಾರ್ಯರಲ್ಲಿ ರಾತ್ರಿ ಮಲಗಿಕೊಳ್ಳುವ ಕರಾರು ಮಾಡಿಲ್ಲವಷ್ಟೇ?"

"ಅವರ ಕರಾರುಗಳನ್ನೆಲ್ಲಾ ನಾನು ಅವರಿಗೇ ಮುಟ್ಟಿಸಿ ಬರುವವನಿದ್ದೇನೆ. ಅಂತೆಯೇ ನಾನು ಬರುವುದು ತಡವಾಗಬಹುದು."

"ಆದರೂ, ಎಂದು ಬರಬೇಕೆಂದು ಮಾಡಿರುವಿ? ಆಚಾರ್ಯರ ಕೆಲಸಗಳು ನಿನ್ನಿಂದ ಮಾಡಲು ಸಾಧ್ಯವೇ? ಹಿರಿಯನಾದ ನನಗೇ ಒಂದೇ ದಿನದಲ್ಲಿಯೆ ಈ ಸ್ಥಿತಿಯಾಗಿದೆ!"

"ನಿನಗೆ ಸದ್ಯ ಯಾವ ಚಿಂತೆಯೂ ಬೇಡ. ನೀನು ಪೂರ್ಣವಾಗಿ ವಿಶ್ರಮಿಸು. ನಾನು ಆಚಾರ್ಯರನ್ನು ಅವರ ಕರಾರಿನಂತೆ ಕತ್ತೆಯ ಮೇಲೆ ಕುಳಿಸಿ ಸುತ್ತು ಹಾಕಿಸುವ ವರೆಗೆ ಇಲ್ಲಿಗೆ ಬರುವಂತಿಲ್ಲ........"

"ಶಾಂತಂ ಪಾಪಂ! ಇದೇನು ಹೇಳುತ್ತಿರುವಿ? ಹೀಗೆಲ್ಲ ಮಾಡಬಾರದಪ್ಪಾ, ನಾವು, ನಾನಿ! ಬಡವರಾದ ನಮಗೆ ದೊಡ್ಡವರ ಆಶ್ರಯಬೇಕಲ್ಲವೇ? ಪುನಃ ನೌಕರೀ ಸಿಗಲಿಕ್ಕಿಲ್ಲ.

"ಅದೆಲ್ಲಾ ನೀನು ಚಿಂತಿಸಬೇಡ ಸದ್ಯಕ್ಕೆ. ಇಂಥ ನೌಕರಿಗಳು ನನಗೆ ಬೇಕಾಗಿಲ್ಲ. ದೊಡ್ಡವರಾದ ಕ್ಷಣಕ್ಕೆ ಬೇಕು ಬೇಕಾದದ್ದು ಮಾಡುವುದೇ? ನೋಡಿಕೋ ನಿನ್ನ ಕೈಯನ್ನು? ಅದಕ್ಕೆ ಇಂದು ಎಣ್ಣೆಯನ್ನು ಸವರಿ ಸರಿಯಾಗಿ ಕಾವು ಕೊಡು. ಇನ್ನು ನಾನು ಹೊರಡು

ವೆನು. ಆಗಲೇ ಹೊತ್ತಾಗುತ್ತ ಬಂತು." ಎಂದು ಹೇಳಿ ನಾರಾಯಣನು ಅಂಗಡಿಕಾರನಲ್ಲಿ ಹೋದ.

ಅಂಗಡಿಯವನಿಗೆ ತಾನು ಮಾಡಿರುವ ಹಂಚಿಕೆಯನ್ನು ತಿಳಿಸಿ, ಗುಂಡನ ಪರಾಮರಿಕೆ ಮಾಡಲಿಕ್ಕೆ ಹೇಳಿ ಆಚಾರ್ಯರ ಮನೆಗೆ ಹೊರಟು ಹೋದ.

ಆಚಾರ್ಯರು ಗುಂಡ ಬರುವುದು ಏಕೆ ತಡವಾಯಿತೆಂದು ಮನೆಯ ಬಾಗಿಲಿನಲ್ಲಿಯೇ ಅವನ ಮಾರ್ಗಪ್ರತೀಕ್ಷೆ ಮಾಡುತ್ತ ನಿಂತಿದ್ದರು. ಗುಂಡನ ಬದಲು ನಾರಾಯಣನು ಬರುತ್ತಿರುವುದನ್ನು ನೋಡಿ ಅವನು ಬಂದ ಕೂಡಲೇ ಪ್ರಶ್ನಿಸಿದರು.

"ಅದೇನು, ಗುಂಡ ಬರಲಿಲ್ಲ ಇಂದು?"

ಏನೂ ಮಾಡದವರಂತೆ ಶಾಂತವೃತ್ತಿಯಿಂದ ಈ ರೀತಿಯಲ್ಲಿ ಪ್ರಶ್ನಿಸುತ್ತಿರುವ ಆಚಾರ್ಯರನ್ನು ಕಂಡು ನಾರಾಯಣನಿಗೆ ವಿಪರೀತ ಕೋಪ ಬಂದು ಬಿಟ್ಟಿತು. ಆದರೂ ಸಿಟ್ಟಿನ ಕೈಯಲ್ಲಿ ಬುದ್ಧಿಯನ್ನು ಕೊಡಬಾರದೆಂದು ತಾನೂ ಶಾಂತನಾಗಿಯೇ ಉತ್ತರವನ್ನು ಹೇಳಿದ.

"ಅಹುದು ಸ್ವಾಮೀ, ಗುಂಡನಿಗೆ ಇಂದು ಜಾಡ್ಯವಾಗಿದೆ. ಅಂತೆಯೇ ನಾನು ಅವನ ಕಾರ್ಯ ಮಾಡಲಿಕ್ಕೆ ಬಂದಿರುವೆನು."

"ನೋಡು, ನಾನು ನಿನ್ನೆಯೇ ಹೇಳಲಿಲ್ಲವೇ ನಿಮಗೆ? ದಿನಕ್ಕೊಮ್ಮೆ ಶಿಷ್ಯರನ್ನು ಬದಲಾಯಿಸುವುದು ನನಗೆ ಸಮ್ಮತವಿಲ್ಲೆಂದು?" ಎಂದು ಆಚಾರ್ಯರು ಅನ್ಯಾಯ ಹೊಂದಿರುವ ದನಿಯಲ್ಲಿ ಹೇಳಿದರು.

"ಕ್ಷಮಿಸಬೇಕು, ಸ್ವಾಮೀ! ಇನ್ನು ಮುಂದೆ ತಾವಾಗಿಯೇ ಬಿಟ್ಟು ಹೋಗೆನ್ನುವವರೆಗೆ ನಾನು ಹೊರಡುವುದಿಲ್ಲ. ನಾನಾದರೂ ಗುಂಡನ ತಮ್ಮನೇ? ಅವನಾದರೇನು ನಾನಾದರೇನು, ತಮ್ಮ ಕಾರ್ಯ ಸಾಂಗವಾದರೆ ತೀರಿತಲ್ಲವೇ? ದಯವಿಟ್ಟು ಗುಂಡನ ಅಪರಾಧವನ್ನು ಕ್ಷಮಿಸಬೇಕು."

"ಆಗಲಿ, ನೋಡುತ್ತೇನೆ ನಿನ್ನ ಕಾರ್ಯವನ್ನಷ್ಟು. ಆದರೆ ನೋಡು, ಪುನಃ ಎಚ್ಚರಿಕೆ! ನಮ್ಮ ಕರಾರುಗಳು ನೆನಪಿನಲ್ಲಿವೆಯಷ್ಟೇ ನಿನಗೆ? ಪುನಃ ಹೇಳಬೇಕೋ?

" ಎಲ್ಲವೂ ನೆನಪಿದೆ, ಸ್ವಾಮೀ, ತಮ್ಮ ಕರಾರುಗಳನ್ನು ಮರೆಯುವುದೇ ? " ಎಂದು ನಾರಾಯಣನು ಆಚಾರ್ಯರ ಭರವಸೆಗಾಗಿ ಪುನಃ ಎಲ್ಲ ಕೆಲಸದ ನಿಯಮಗಳನ್ನೂ ದಂಡ-ಶಿಕ್ಷೆಯ ವಿಷಯವನ್ನೂ ಆಚಾರ್ಯರಿಗೆ ಒಂದೊಂದಾಗಿ ವಿವರಿಸಿ ಹೇಳಿದ.

" ಸರಿ, ಹಾಗಾದರೆ, ಸುರುವು ಮಾಡಿ ಬಿಡು ಇಂದಿನ ಕಾರ್ಯವನ್ನು. ಕಟ್ಟಿಗೆ ತರುವುದು ಹೊತ್ತಾಗಿ ಬಿಟ್ಟಿತು. ಹೊರಡಿನ್ನು " ಎಂದು ಆಚಾರ್ಯರು ನಾರಾಯಣನಿಗೆ ಕೊಡಲಿ ಇರುವ ಜಾಗೆಯನ್ನು ತೋರಿಸಿದರು. ನಾರಾಯಣನು ಕೊಡಲಿಯನ್ನು ಹೊತ್ತುಕೊಂಡು ನಡೆದು ಬಿಟ್ಟ.

ಮೂರು ತಾಸು ಹೊತ್ತಾದರೂ ಕಟ್ಟಿಗೆ ತರಲಿಕ್ಕೆ ಹೋದ ನಾರಾಯಣನು ಬರಲೇ ಇಲ್ಲ. ಇದೇನು ಇಂದು ಅಡವಿಯಲ್ಲಿರುವ ಕಟ್ಟಿಗೆಯನ್ನೆಲ್ಲಾ ತಂದು ಬಿಡುವನೋ ಎಂದು ಆಚಾರ್ಯರು ವಿಚಾರಿಸುತ್ತಿರುವಷ್ಟರಲ್ಲಿ ನಾರಾಯಣನು ಆಚಾರ್ಯರಲ್ಲಿ ಬಂದು ಕೇಳಿದ.

" ಕಟ್ಟಿಗೆ ಬಂತು, ಸ್ವಾಮೀ, ಮುಂದಿನ ಕಾರ್ಯ ನೀರಿನದಲ್ಲವೇ ? "

" ಎಲ್ಲಿದೆ ಕಟ್ಟಿಗೆ ? "

" ಇಲ್ಲಿದೆ, ಸ್ವಾಮೀ " ಎಂದು ನಾರಾಯಣನು ಒಂದೊಂದೇ ಕಟ್ಟಿಗೆಯಿಟ್ಟು ಕಟ್ಟಿದ ಮೂರು ಹೊರೆಗಳನ್ನು ಮೂಲೆಯಲ್ಲಿಟ್ಟದ್ದು ತೋರಿಸಿದ.

ಆಚಾರ್ಯರು ನಾರಾಯಣನನ್ನು ದಿಟ್ಟಿಸಿ ನೋಡಿದರು.

" ಇವೆಂಥಾ ಹೊರೆಗಳೋ ? "

" ನಮ್ಮ ಕರಾರಿನಲ್ಲಿ ಮೂರು ಹೊರೆಗಳು ಎಂತಿದೆ, ಸ್ವಾಮೀ " ಎಂದು ಹೇಳಿದ.

ಆಚಾರ್ಯರು ಗುಂಡನೇ ಉತ್ತಮ ಎಂದುಕೊಂಡು ಹೌದಿನಲ್ಲಿ ನೀರು ತುಂಬಲಿಕ್ಕೆ ಹೇಳಿದರು.

ನಾರಾಯಣನು ಹಗ್ಗ ತೆಗೆದುಕೊಂಡು ಹಿತ್ತಲಲ್ಲಿ ಹೊರಟ.

ಎರಡು ಕೊಡ ನೀರನ್ನು ಜಗ್ಗಿ ಹಾಕಿದ. ಹೌದು ಚಿಕ್ಕದಿದ್ದು ಇಷ್ಟೇಕೆ ನೀರು ಹಿಡಿಯಹತ್ತಿದೆ ಎಂದು ಯೋಚಿಸಿದ. ಮೂರನೇ ಕೊಡವನ್ನು ಸುರುವಿದ. ಇನ್ನೂ ತುಂಬಲೇ ಇಲ್ಲ. ಅದೇಕೆ ಈ ಹೌದಿಗೆ ಅಷ್ಟು ನೀರಡಿಕೆ ಎಂದು ಆಚಾರ್ಯರನ್ನೇ ವಿಚಾರಿಸಬೇಕೆಂದು ಹೊರಡುವ ಮೊದಲು ಹೌದನ್ನು ಪರೀಕ್ಷಿಸಿದ. ತಳದಲ್ಲಿ ಒಂದು ತೂತಾಗಿತ್ತು! ಓಹೋ ಅಂದವನೇ ಅದನ್ನು ಮುಚ್ಚಲಿಕ್ಕೆ ಅರಿವೆಯೊಂದನ್ನು ಹುಡುಕಿದ. ಅದರ ಸಲುವಾಗಿ ಆಚಾರ್ಯರನ್ನು ಕೇಳಲು ಬಂದ.

ಆಚಾರ್ಯರು ಮನೆಯಲ್ಲಿರಲಿಲ್ಲ. ಪುನಃ ಹಿತ್ತಲಲ್ಲಿ ಹೋಗಿ ಅತ್ತಿತ್ತ ನೋಡುತ್ತಿರುವಷ್ಟರಲ್ಲಿ ಅವರನ್ನು ಕಂಡ. ಆದರೆ ಆಚಾರ್ಯರು ಪಂಜೆಯನ್ನು ಏರಿಸಿ ತೋಟದಲ್ಲಿ ಮೂಲಂಗಿಯ ಮಡಿಸಾಲುಗಳಿಗೆ ನೀರು ಹಾಯಿಸುತ್ತಿದ್ದರು. ಪುನಃ ಓಹೋ ಅಂದುಕೊಂಡು ಕೂಗಿ ಕೇಳಿದ.

"ಆಚಾರ್ಯಸ್ವಾಮೀ, ಒಂದು ಅರಿವೆಯ ತುಂಡು ಬೇಕಾಗಿದೆ."

"ಅದೇನಾಯಿತೋ, ಮತ್ತೇ?"

"ಏನೂ ಇಲ್ಲ ಸ್ವಾಮೀ, ಹೌದಿಗೆ ಸ್ವಲ್ಪ ಗಾಯವಾಗಿ ನೀರು ಹೋಗಹತ್ತಿದೆ."

ನಾರಾಯಣನು ತಮ್ಮ ಹತ್ತಿರ ಬಂದು ಪರೀಕ್ಷಿಸಿದರೆ ಕೆಲಸ ಇನ್ನೂ ಕೆಟ್ಟೀತೆಂದು ಆಚಾರ್ಯರು ತಾವೇ ಲಗುಬಗೆಯಿಂದ ಬಂದು ಅರಿವೆಯನ್ನು ಕೊಟ್ಟರು. ಅವರೆದುರಿನಲ್ಲಿಯೇ ನಾರಾಯಣನು ಹೌದನ್ನು ಸರಿಮಾಡಿ ನೀರು ತುಂಬಿ ಬಿಟ್ಟ. ಸರಿ, ಇನ್ನು ಮುಂದೆ ಒಬ್ಬ ತೋಟಿಗನನ್ನೇ ಕೆಲಸಕ್ಕೆ ಹಚ್ಚಬೇಕಾಯಿತೆಂದು ಆಚಾರ್ಯರು ಚಿಂತಿಸಿದರು.

ಆದರೆ ಆಚಾರ್ಯರ ಚಿಂತೆಯು ಇಷ್ಟಕ್ಕೇ ಮುಗಿಯುವಂತಿರಲಿಲ್ಲ. ನೀರಿನ ಕಾರ್ಯವಾದ ನಂತರ ಕುದುರೆಯ ಕಾರ್ಯವಷ್ಟೇ? ನಾರಾಯಣನು ಕುದುರೆಯ ಕೊಟ್ಟಿಗೆಯಲ್ಲಿ ಹೋಗಿ ಅದನ್ನು ಹೊರಗೆ ತಂದ. ಹಿತ್ತಲಿನಲ್ಲಿ ಕುದುರೆಯನ್ನು ಒಯ್ದು ಅದರ ಮುಖವನ್ನು ಕೆರೆಯ ಕಡೆಗೆ ತಿರುವಿಸಿ "ಅದೋ ನೋಡು, ನೀರು ಕಾಣಿಸುತ್ತದೋ?"

ಎಂದು ಕುದುರೆಗೆ ನೀರು ತೋರಿಸಿ, ಅಲ್ಲಿಯೇ ಬೆಳೆದಿರುವ ಬಾಳೆಯ ಗಿಡದಿಂದ ಒಂದು ದೊಡ್ಡ ಎಲೆಯನ್ನು ಕೊಯ್ದುಕೊಂಡು, ಪುನಃ ಕುದುರೆಯನ್ನು ಕೊಟ್ಟಿಗೆಯಲ್ಲಿ ಕಟ್ಟಿದ. ಕುದುರೆಗೆ ನೀರಡಿಕೆಯಾಗಿ ಜೋರಾಗಿ ಹೂಂಕರಿಸಿತು. ಅದರ ದನಿಯನ್ನು ಕೇಳಿ ಆಚಾರ್ಯರು ಬಂದರು.

" ನೀರು ಕುಡಿಸಿ ಆಯಿತೇ ಕುದುರೆಗೆ, ಏಕೋ ಒದರುತ್ತದಲ್ಲ ? " ಎಂದು ಕೇಳಿದರು.

" ಇದೇ ಈಗ ಅದಕ್ಕೆ ನೀರು ತೋರಿಸಿದ್ದೇನೆ, ಸ್ವಾಮೀ. ಕಣ್ತುಂಬಾ ನೋಡಿದೆ, ಕೇಳಿ, " ಎಂದು ನಾರಾಯಣ ಹೇಳಿದ.

" ಇಷ್ಟರಲ್ಲಿ ಕೆರೆಗೆ ಹೋಗಿ ಬಂದೆಯೋ ? " ಆಚಾರ್ಯರು ಅಚ್ಚರಿಯ ದನಿಯಲ್ಲಿ ಕೇಳಿದರು.

" ಕೆರೆಗೆ ಎಲ್ಲಿ ಹೋಗಬೇಕೆಂದು ಕರಾರಿದೆ ಸ್ವಾಮೀ ? ಕುದುರೆಗೆ ನೀರು ತೋರಿಸಿಕೊಂಡು ಬರುವುದು ಎಂದು ನಮ್ಮ ಕರಾರಿಲ್ಲವೇ ? " ಎಂದ ನಾರಾಯಣ.

ಇದು ನಿರುತ್ತರವಾದ ಪ್ರಶ್ನೆಯಾದ್ದರಿಂದ ಆಚಾರ್ಯರು ಗುಂಡನನ್ನು ನೆನೆದುಕೊಂಡು ದೀರ್ಘ ಶ್ವಾಸ ಬಿಟ್ಟರು.

ಅಷ್ಟೊತ್ತಿಗೆ ಅಂಚೆಯ ಜವಾನನು ಬಂದು ಆಚಾರ್ಯರಿಗೆ ಒಂದು ಪತ್ರವನ್ನು ತಂದು ಕೊಟ್ಟನು. ಆಚಾರ್ಯರು ಅದನ್ನು ಓದಬೇಕೆನ್ನುವುದರಲ್ಲಿ ನಾರಾಯಣನು ಊಟಕ್ಕೆ ಹೊತ್ತಾಯಿತೆಂದು ಸೂಚಿಸಿದ. ಆಚಾರ್ಯರು ಒಳಗೆ ಹೋಗಿ ಅಳ್ಳಿಯ ಎಲೆಯಲ್ಲಿ ಅನ್ನ ಬಡಿಸಿಕೊಂಡು ಬಂದರು.

ನಾರಾಯಣನು ಭವ್ಯವಾದ ಬಾಳೆಯ ಎಲೆಯನ್ನು ಇಟ್ಟುಕೊಂಡು ಕುಳಿತುಕೊಂಡಿದ್ದ.

" ಇದೇನು, ಸ್ವಾಮೀ, ಬಡಿಸಲಿಕ್ಕೆ ಪಾತ್ರೆಯಿಲ್ಲವೇ ? "

ಚರ್ಚೆ ಮಾಡುತ್ತ ನಿಂತರೆ ನಾರಾಯಣನು ಪುನಃ ತಮ್ಮ ಕರಾರನ್ನೇ ತಮಗೆ ತಿನಿಸುವನೆಂದು ಯೋಚಿಸಿ ಆಚಾರ್ಯರು ತಮ್ಮ ಪಾಲಿನ ಅನ್ನವನ್ನೆಲ್ಲಾ ತಂದು ನಾರಾಯಣನ ಎಲೆಯ ತುಂಬ ಬಡಿಸ

ಬೇಕಾಯಿತು. ಹೊತ್ತು ಬಹಳವಾದ್ದರಿಂದ ಆಚಾರ್ಯರು ಅಂದು ಅವಲಕ್ಕಿಯ ಮೇಲೆಯೇ ಊಟವನ್ನು ಸಾಗಿಸಿದರು!

ನಾರಾಯಣನು ಹೊಟ್ಟೆತುಂಬ ಉಂಡು ಹೆಚ್ಚಾಗಿ ಉಳಿದ ಅನ್ನ ವನ್ನು ಹೊರಗೆ ಒಯ್ದು ಒಂದು ನಾಯಿಗೆ ಹಾಕಿದ. ಆ ಮೇಲೆ ಕುದು ರೆಯ ಕೊಟ್ಟಿಗೆಯಲ್ಲಿ ಹೋಗಿ ಮಲಗಿಕೊಂಡ.

ಆಚಾರ್ಯರು ಅಂಚೆಯವನು ತಂದು ಕೊಟ್ಟ ಪತ್ರವನ್ನು ಓದಿದರು. ಅದು ಅವರ ಹೆಂಡತಿಯ ತಂದೆಯವರು ಬರೆದದ್ದು. ಮರು ದಿನವೇ ಆಚಾರ್ಯರು ಹೊರಟು ಅಳಿಯತನಕ್ಕೆ ತಪ್ಪದೇ ಬರಬೇ ಕೆಂದು ಬರೆದಿದ್ದರು. ಚಿಕ್ಕ ಹೆಂಡತಿಯನ್ನು ಕಳುಹಿಸಿ ಬಹಳ ದಿನವಾದ್ದ ರಿಂದ ಆಚಾರ್ಯರು ಈಗ ಅಳಿಯತನಕ್ಕೆ ಹೊರಡಲು ಹಿಗ್ಗಿದರು. ಕೂಡಲೇ ನಾರಾಯಣನಿಗೆ ಕರಾರಿನಲ್ಲಿರುವ ಮನೆಯ ಸಣ್ಣಪುಟ್ಟ ಕೆಲಸ ಗಳನ್ನು ಹೇಳುವುದನ್ನು ಕೂಡಾ ಮರೆತು ಬಿಟ್ಟರು. ಅಳಿಯತನದ ಉತ್ಸಾಹದಲ್ಲಿ ನಾರಾಯಣನ ನೆನಪೇ ಆಗಲಿಲ್ಲ ಅವರಿಗೆ. ಮರು ದಿನವೇ ಪ್ರಯಾಣಕ್ಕೆ ಹೊರಡುವುದನ್ನು ನಿರ್ಣಯಿಸಿ ದಾರಿಯಲ್ಲಿ ತಿನ್ನಲಿಕ್ಕೆಂದು ಅವಲಕ್ಕೀ, ಉಂಡಿ ಮೊದಲಾದವುಗಳನ್ನು ತಯಾರಿಸಿ ಒಂದು ಚಿಕ್ಕ ಪೆಟ್ಟಿಗೆಯಲ್ಲಿ ಹಾಕಿಟ್ಟರು.

ಈ ಎಲ್ಲ ಪ್ರಯಾಣದ ಸಿದ್ಧತೆಯಾಗುವುದರಲ್ಲಿ ರಾತ್ರಿ ಎಂಟು ಗಂಟೆಯಾಗುತ್ತ ಬಂತು. ನಾರಾಯಣನಿಗೆ ಅನ್ನವು ಹೆಚ್ಚಾಗಿ ತುಂಬಾ ನಿದ್ರೆ ಬಂದು ಬಿಟ್ಟಿತ್ತು; ಎಚ್ಚರವಾಗುವಂತಿರಲಿಲ್ಲ. ಆದರೆ ಸೊಳ್ಳೆಯ ಕಡಿತವನ್ನು ತಾಳಲಾರದೇ ಕೊಟ್ಟಿಗೆಯಲ್ಲಿಯ ಕುದುರೆಯು ಕಟ್ಟಿ ದಲ್ಲಿಯೇ ಖುರಪುಟಧ್ವನಿಯನ್ನು ಹಬ್ಬಿಸಿತು. ನಾರಾಯಣನು ಲಗು ಬಗೆಯಿಂದ ಎಚ್ಚತ್ತು ಕುದುರೆಯ ಕಾಲಲ್ಲಿ ಬೆಂಕಿ ಹಾಕುವುದು ಉಳಿ ದಿದೆಯಲ್ಲಾ ಎಂದು ನೆನಪುಮಾಡಿಕೊಂಡು ಬೆಂಕಿಯನ್ನು ತರಲಿಕ್ಕೆ ಆಚಾರ್ಯರಲ್ಲಿ ಬಂದ. ಆಚಾರ್ಯರು ಅದೇ ಫಲಹಾರದ ಪದಾರ್ಥ ಗಳನ್ನು ತಯಾರಿಸಿ ರಾತ್ರಿಯ ಅನ್ನಕ್ಕೆ ಏರಿಸಿದ್ದರು. ನಾರಾಯಣನಿಗೆ ಕೆಂಡವನ್ನು ಕೊಟ್ಟು ತೀವ್ರವಾಗಿ ಕುದುರೆಯ ಚಾಕರಿಯನ್ನು ಮುಗಿಸ ಬೇಕೆಂದು ಆಜ್ಞೆಮಾಡಿದರು.

ಕೆಂಡವನ್ನು ಕೊಟ್ಟಿಗೆಯಲ್ಲಿ ತಂದವನೇ ಮೊದಲು ಕುದುರೆಯ ಕಾಲಿನಲ್ಲಿ ಇಟ್ಟ. ಕುದುರೆಗೆ ಇದು ಹೊಸದಾದ ಅನುಭವವಾದ್ದರಿಂದ ಕಾಲು ಸುಡಹತ್ತಿದಂತೆ ಥಟಪಟನೆ ಒದ್ದಾಡುತ್ತ ಕೊಟ್ಟಿಗೆ ಹಾರಿ ಹೋಗುವಂತೆ ಹೂಂಕರಿಸಿತು. ಆಚಾರ್ಯರು ಗಡಿಬಿಡಿಯಿಂದ ಬಂದು ನೋಡಿದಾಗ್ಗೆ ಕುದುರೆಯ ಕಾಲು ಇನ್ನೂ ಬೆಂಕಿಯಲ್ಲಿಯೇ ಇತ್ತು. ಕೂಡಲೇ ಬೆಂಕಿಯನ್ನು ದೂಡಿ ಕೋಪಾವಿಷ್ಟರಾಗಿ "ಇದೇನು ನಡೆಸಿರುವಿ, ಅನರ್ಥ" ಎಂದು ಕೂಗಿದರು.

"ಅದು ನೀವೇ ಹೇಳಿದ ಕರಾರು, ಸ್ವಾಮಿ, ಕುದುರೆಯ ಕಾಲಿಗೆ ಬೆಂಕೀ ಹಾಕುವುದು."

"ಅಯ್ಯೋ ಅಡ್ಡಮಠಾಳಾ...."

"ಬೈಸಿಕೊಳ್ಳುವುದು ಕರಾರಿನಲ್ಲಿಲ್ಲ, ಸ್ವಾಮೀ!"

"ಅಲ್ಲೋ, ಸೊಳ್ಳೆಗಳು ಹೋಗಲಿಕ್ಕೆ ಹೊಗೆ ಹಾಕಬೇಕಲ್ಲವೇ? ಇದೇನು ಪ್ರಮಾದಾ, ನಾಳೆ ಇದೇ ಕುದುರೆಯ ಮೇಲೆ ಪ್ರಯಾಣ ಮಾಡಬೇಕಾಗಿದೆ!" ಎಂದು ಆಚಾರ್ಯರು ರೇಗಿದ ದನಿಯಲ್ಲಿ ಹೇಳಿ ಹೊರಟು ಹೋದರು.

ನಾರಾಯಣನು ರಾತ್ರಿ ಊಟಕ್ಕೆ ಮತ್ತೊಂದು ಎಲೆಯನ್ನು ತಂದು ಕುಳಿತುಕೊಂಡ. ಅನಿವಾರ್ಯ ಪ್ರಸಂಗವೆಂದಂದುಕೊಂಡು ಆಚಾರ್ಯರು ಆ ಎಲೆಯ ತುಂಬ ಅನ್ನವನ್ನು ಬಡಿಸಲೇಬೇಕಾಯಿತು. ಈ ಸಂಕಟವು ಮೊದಲೇ ಗೊತ್ತಾಗಿದ್ದರಿಂದ ಆಚಾರ್ಯರು ರಾತ್ರಿಯ ಅನ್ನ ಮಾಡುವಾಗ ಅಕ್ಕಿಯ ಅಳತೆಯನ್ನು ದ್ವಿಗುಣಿತ ಮಾಡಿದ್ದರು. ನಾರಾಯಣನು ಹೆಚ್ಚು ಹೆಚ್ಚಾಗಿ ತಿಂದು ಪುನಃ ಹೊರಗೆ ಹೋಗಿ ನಾಯಿಗೆ ಅನ್ನವನ್ನು ಕೊಟ್ಟ.

ನಾರಾಯಣನು ರಾತ್ರಿಯ ಊಟವಾದನಂತರ ಕೊಟ್ಟಿಗೆಯಲ್ಲಿಯೇ ಪುನಃ ಮಲಗಲಿಕ್ಕೆ ಹಾಸಿಕೊಳ್ಳುತ್ತಿರುವಾಗ ಆಚಾರ್ಯರು ಕೂಗಿದರು. ಅವರಿಗೆ ಒಂದು ದಿನದಲ್ಲಿಯೇ ಇವನ ಸತ್ಯವು ತಿಳಿದು ಇನ್ನು ಇವನನ್ನು ಹೇಗಾದರೂ ಮಾಡಿ ದೂರ ಕಳಿಸಬೇಕೆಂದಿದ್ದರು.

ಆದರೆ ಆ ನೂರು ರೂಪಾಯಿ ಅಲ್ಲದೇ ಕತ್ತೆಯ ಸವಾರಿಯನ್ನು ನೆನಪು ಮಾಡಿಕೊಂಡ ಕೂಡಲೇ ಈ ಅವರ ನಿರ್ಣಯವು ಬದಲಾಯಿತು.

" ಏಕೆ, ಸ್ವಾಮೀ, ಕರೆದದ್ದು ? " ನಾರಾಯಣನು ಬಂದು ಕೇಳಿದ.

" ನಾಳೆ ಸೂರ್ಯೋದಯವಾಗುವುದರಲ್ಲಿಯೇ ನಾವು ಪ್ರಯಾಣ ಬೆಳಿಸಬೇಕಾಗಿದೆ.

" ಎಲ್ಲಿಗೆ ? "

" ನಮ್ಮ ಮಾವನವರ ಊರಿಗೆ. "

" ಎಷ್ಟು ದೂರ, ಸ್ವಾಮೀ ? "

" ಇಪ್ಪತ್ತು ನಾಲ್ಕು ಮೈಲು ದಾರಿ. ಕುದುರೆಯ ಕಾಲು ಬೇರೆ ಕುಂಟವಾಗಿ ಬಿಟ್ಟಿದೆಯೋ ಏನೋ ? ಏನೇ ಇರಲಿ, ಬೆಳ್ಳಿ ಮೂಡುವುದರಲ್ಲಿಯೇ ಎದ್ದು ಕುದುರೆಗೆ ತಡಿಯನ್ನು ಹಾಕಿ ತಯಾರಿಸಬೇಕು. ತಿಳಿಯಿತೋ ? "

" ಆದರೆ ನಮ್ಮ ಕರಾರಿನಲ್ಲಿ ಪ್ರಯಾಣದ ವಿಷಯು ಬಂದಿಲ್ಲ, ಸ್ವಾಮೀ ? "

" ಇದಕ್ಕೆ ನಿನಗೆ ಬೇರೆ ಕೂಲಿ ಕೊಡುವೆವು. "

" ಆಗಲಿ, ಸ್ವಾಮೀ, ಆಜ್ಞೆ, " ಎಂದು ನಾರಾಯಣನು ಮಲಗಲಿಕ್ಕೆ ಹೊರಟು ಹೋದ.

ಆಚಾರ್ಯರಿಗೆ ಆ ರಾತ್ರಿ ಪೂರ್ತಿಯಾಗಿ ನಿದ್ರೆಯೇ ಹತ್ತಲಿಲ್ಲ. ಅಳಿಯತನದ ಮನ್ನಣೆಯ ಚಿತ್ರಗಳೇ ಕಂಡುಬರುತ್ತಿದ್ದವು. ಅಲ್ಲದೆ, ನಾರಾಯಣನನ್ನು ಪರಸ್ಥಳಕ್ಕೆ ಕರೆದೊಯ್ದಾಗ ಅವನ ಕರಾರುಗಳಿಂದ ಸ್ವಲ್ಪ ಬಿಡುಗಡೆ ಎಂದು ಸಮಾಧಾನ. ಪ್ರಯಾಣ ಮುಗಿಸಿಕೊಂಡು ಬರುವಷ್ಟರಲ್ಲಿ ಗುಂಡನಿಗೆ ಗುಣವಾಗಿ ಅವನನ್ನೇ ಪುನಃ ಶಿಷ್ಯನನ್ನಾಗಿ ಇಟ್ಟುಕೊಳುವುದು ಎಂದು ಸಮಾಧಾನ. ಅಂತೂ ಆ ರಾತ್ರಿ ಆಚಾರ್ಯರಿಗೆ ನಾರಾಯಣನಿಂದ ಅಂದು ಸಂಭವಿಸಿರುವ ಎಲ್ಲ ಅನರ್ಥಗಳೂ ಈ ಹಿಗ್ಗಿನಲ್ಲಿ ಮರೆತು ಸುಖಮಯವಾಗಿ ಬೆಳಗಾಗುವವರೆಗೆ ಅಳಿಯತನದ ಕನಸೇ ಕನಸುಗಳು ಕಂಡವು.

ಇತ್ತ ನಾರಾಯಣನು ಬೆಳ್ಳಿ ಮೂಡುವ ಹೊತ್ತಿಗೆ ಎಚ್ಚತ್ತು

ಲಗುಬಗೆಯಿಂದ ಎದ್ದು ಕುಳಿತ. ಮಗ್ಗಲಲ್ಲಿ ಏನೋ ಬಂದು ಮಲಗಿತ್ತು. ಅದು ನಾಯಿ! ಎರಡೂ ಹೊತ್ತು ಹೊಟ್ಟೆತುಂಬ ಅನ್ನ ಉಣಿಸಿದ್ದಕ್ಕೆ ಆ ನಾಯಿಯು ನಾರಾಯಣನನ್ನೇ ಹಿಂಬಾಲಿಸುತ್ತ ಅವನು ಮಲಗುವಾಗ ಮಗ್ಗಲಲ್ಲಿಯೇ ಬಂದು ಮಲಗಿಕೊಂಡಿತ್ತು. ಅದರ ಮೈಮೇಲೆ ಕೈಯಾಡಿಸಿ ನಾರಾಯಣನು ಕುದುರೆಗೆ ಥಡಿ ಹಾಕಹೋದ. ಕುದುರೆಯು ಇವನನ್ನು ಕಂಡಕೂಡಲೆ ಪುನಃ ಬೆಂಕಿಯನ್ನು ತಂದನೋ ಎಂದು ಭಯವಾಯಿತು. ಥಡಿಯನ್ನು ಕಂಡು ಸುಮ್ಮನಾಯಿತು. ಎಲ್ಲವೂ ಸರಿಯಾಗಿ ನಾರಾಯಣನು ನಾಯಿಯನ್ನು ಅಡಿಸುತ್ತ ಕುಳಿತಾಗ ಆಚಾರ್ಯರ ಕರೆ ಬಂತು.

"ಥಡಿ ಹಾಕಿ ಆಯಿತೇ?"

"ಆಗಿದೆ, ಸ್ವಾಮೀ."

"ಸರಿ, ನೀನು ನಮ್ಮ ಹಿಂದೆ ಈ ಪೆಟ್ಟಿಗೆಯನ್ನು ಹೊತ್ತುಕೊಂಡು ನಡೆದು ಬರಬೇಕು. ನೀನು ಮುಂದೆ ನಡೆದು ಬಿಡು." ಎಂದು ಫಲಾಹಾರದ ಪೆಟ್ಟಿಗೆಯನ್ನು ನಾರಾಯಣನ ವಶಕ್ಕೆ ಕೊಟ್ಟು ಕಳುಹಿದರು. ನಾರಾಯಣನೂ ನಾಯಿಯೂ ರಸ್ತೆಯ ಕಡೆಗೆ ಹೊರಟು ನಡೆದರು.

ಆಚಾರ್ಯರು ಮಧ್ಯಾಹ್ನಕ್ಕೆ ಬೇಕಾಗುವ ನಾರಾಯಣನ ಪಾಲಿನ ಅಕ್ಕಿಯನ್ನೂ ಸ್ವಲ್ಪ ಹಿಟ್ಟನ್ನೂ ಹಸಿಬೆಯಲ್ಲಿ ಹಾಕಿಕೊಂಡು ಮನೆಗೆ ಬೀಗ ಮುದ್ರೆಮಾಡಿ ಕುದುರೆಯನ್ನೇರಿದರು. ಕಾಲು ಸುಟ್ಟುಕೊಂಡ ಕುದುರೆಯು ಕುಂಟುತ್ತ ಕುಂಟುತ್ತ ಹೊರಟಿತು.

ಅತ್ತ ಮುಂದೆ ಹೊರಟ ನಾರಾಯಣನಿಗೆ ಹೊತ್ತುಕೊಂಡು ನಡೆದ ಪೆಟ್ಟಿಗೆಯು ಭಾರವಾಗಹತ್ತಿತು. ನಾರಾಯಣನು ಎಂದಿಗಾದರೂ ಶಕ್ತಿವಂತನಲ್ಲವೆಂದು ನಿಮಗೆ ಹೇಳಿರುವೆನಷ್ಟೇ? ಏನು ತುಂಬಿದ್ದಾರೆ ಆಚಾರ್ಯರು ಪೆಟ್ಟಿಗೆಯಲ್ಲಿ ಎಂದು ವಿಚಾರಿಸುತ್ತ ಮೂರು ಮೈಲು ತುಳಿಯುತ್ತ ನಡೆದಾಗ ಆಚಾರ್ಯರು ಕುದುರೆ ಕುಂಟಿಸುತ್ತ ಬಂದರು.

"ಪೆಟ್ಟಿಗೆ ಬಹಳ ಭಾರವಾಗಿದೆ, ಸ್ವಾಮೀ? ಏನು ತುಂಬಿದೆ ಇದರಲ್ಲಿ?" ಎಂದು ಕೇಳಿದ.

"ಅದರಲ್ಲೇನು ಬರಬೇಕೋ ಮಣ್ಣು? ತೀವ್ರ ಹೆಜ್ಜೇಹಾಕು.

ಇನ್ನೂ ಇಲ್ಲೇ ಇದ್ದೀಯಲ್ಲಾ? ಎಂದು ಆಚಾರ್ಯರು ಕುದುರೆಯನ್ನು ಮುಂದಕ್ಕೆ ಬಿಟ್ಟರು.

"ಸ್ವಲ್ಪ ವಿಶ್ರಮಿಸಿ ಬರುತ್ತೇನೆ, ಸ್ವಾಮೀ, ತಾವು ಮುಂದೆ ದಯಮಾಡಿಸಿರಿ" ಎಂದು ನಾರಾಯಣ ಪೆಟ್ಟಿಗೆಯನ್ನು ಇಳಿಸಿ ಇಟ್ಟು ಕುಳಿತುಕೊಂಡ.

ನಾಯಿಯು ಪೆಟ್ಟಿಗೆಯನ್ನು ಮೂಸಿನೋಡುತ್ತ ಅದರ ಸುತ್ತಲೂ ತಿರುಗಿ ಬಾಲ ಅಲ್ಲಾಡಿಸಹತ್ತಿತು. ನಾರಾಯಣನಿಗೆ ಅದರ ಮೇಲೆ ಕನಿಕರ ಹುಟ್ಟಿತು. ಪೆಟ್ಟಿಗೆಯಲ್ಲಿಯ ಖಾದ್ಯವಸ್ತು ನಾಯಿಗೆ ಕೂಡ ತಿಳಿಯುತ್ತಿದ್ದು ಆಚಾರ್ಯರು 'ಅದರಲ್ಲೇನಿದೆ ಮಣ್ಣು?' ಎಂದು ತನ್ನ ಕಣ್ಣಿನಲ್ಲಿಯೇ ಮಣ್ಣು ಹಾಕಲಿಕ್ಕೆ ಬಂದಿದ್ದರಲ್ಲಾ ಎಂದು ನಾರಾಯಣನಿಗೆ ಕೋಪ ಬಂತು. ಆಚಾರ್ಯರಿಗೆ ಸರಿಯಾದ ಬುದ್ಧೀ ಕಲಿಸಬೇಕೆಂದು ನಿರ್ಧರಿಸಿ ಪೆಟ್ಟಿಗೆಯ ಬಾಯಿ ತೆರೆದು ಬಿಟ್ಟ. ಒಳಗೆ ನೋಡುತ್ತಾನೆ, ಉಂಡಿಗಳು, ಅವಲಕ್ಕಿಯ ವಗ್ಗರಣೆ ಕಂಪು! ಭಲೆ ಎಂದವನೇ ಎಲ್ಲ ಖಾದ್ಯವನ್ನು ತಿಂದು ಹಾಕಿ ಉಳಿದದ್ದನ್ನೆಲ್ಲ ನಾಯಿಗೆ ಹಾಕಿದ. ಅನಂತರ ಪೆಟ್ಟಿಗೆಯಲ್ಲಿ ತಾನು ಹೊರುವಷ್ಟು ಭಾರವಾಗಿ ಮಣ್ಣನ್ನು ತುಂಬಿಕೊಂಡು ನಾಯಿಯೊಂದಿಗೆ ಮುಂದೆ ಹೊರಟ.

ಅತ್ತ ಆಚಾರ್ಯರು ಮಧ್ಯಾಹ್ನವಾಗುತ್ತ ಬಂದಂತೆ ನಾರಾಯಣನ ದಾರಿಯನ್ನು ನೋಡುತ್ತ ರಸ್ತೆಯ ಮಗ್ಗಲಿನ ಒಂದು ತೋಟದಲ್ಲಿ ಕುದುರೆಯಿಂದಿಳಿದು ಬಾವಿಯ ಬಳಿಯಲ್ಲಿ ಕುಳಿತಿದ್ದರು. ಆಚಾರ್ಯರಿಗೆ ಹೊಟ್ಟೆ ಹಸಿದು ಖಾದ್ಯ ಪೆಟ್ಟಿಗೆಯ ದಾರಿಯನ್ನೇ ನೋಡುತ್ತ ಕುಳಿತಿದ್ದರು. ಅಷ್ಟೊತ್ತಿಗೆ ನಾರಾಯಣನು ಬಂದ. ಪೆಟ್ಟಿಗೆಯನ್ನು ಇಳಿಸಿ ಆಚಾರ್ಯರಿಗೆ ಕೊಟ್ಟ.

ಆಚಾರ್ಯರು ಕೂಡಲೇ ಪೆಟ್ಟಿಗೆಯನ್ನು ತೆಗೆಯಹತ್ತಿದರು. ನಾಯಿ ಹತ್ತಿರ ಬಂದಕೂಡಲೇ ಅದನ್ನು ಹೊಡೆದೊಡಿಸಿ ಪೆಟ್ಟಿಗೆಯನ್ನು ತೆರೆದರು. ಒಳಗೆ ನೋಡುತ್ತಾರೆ ಏನಿದೆ? ಮಣ್ಣು, ಶುದ್ಧ ಮಣ್ಣು!

"ಇದೇನೋ ಮಣ್ಣು?" ಎಂದರು.

" ಅದರಲ್ಲೇನಿದೆ ಮಣ್ಣು, ಸ್ವಾಮೀ ?" ಎಂದು ಪ್ರತಿಧ್ವನಿ ಮಾಡಿದ.

ಆಚಾರ್ಯರಿಗೆ ಬೇರೆ ಮಾರ್ಗವಿರಲಿಲ್ಲ. ಏನೂ ತಿನ್ನಲಿಕ್ಕೆ ಕೊಡದ ಅವರನ್ನು ನಾಯಿಯು ಕೆಂಪುಗಣ್ಣಿನಿಂದ ನೋಡುತ್ತಿತ್ತು !

" ಅತ್ತ ಹೊಡೆಯೋ ಆ ನಾಯಿಯನ್ನು" ಎಂದು ಹೇಳಿ ಆಚಾರ್ಯರು ಹಸಿಬೆಯಿಂದ ಅಕ್ಕಿಯನ್ನು ತೆಗೆದು ನಾರಾಯಣನಿಗೆ ಕುಳ್ಳು ಕಟ್ಟಿಗೆ ತರಹೇಳಿದರು. ಅವನು ಅವುಗಳನ್ನು ತಂದ ಕೂಡಲೇ ಅನ್ನಕ್ಕೆ ಇಟ್ಟು ಹಿಟ್ಟನ್ನು ಸರಿಮಾಡಿದರು. ಆನಂತರ ಬಾವಿಯಲ್ಲಿಳಿದು ಉಟ್ಟು ಕೊಂಡ ಧೋತರವನ್ನು ತೋಯ್ಸಿ ಮೇಲೆ ತಂದು ಒಣಗಲಿಕ್ಕೆ ಹಾಕಿ ಸ್ನಾನಕ್ಕೆ ಇಳಿದರು. ಸ್ನಾನವಾಗಿ ಒರಿಸಿಕೊಳ್ಳುವಾಗ ನಾಮಸ್ಮರಣೆಯನ್ನು ಪ್ರಾರಂಭಿಸಿದರು.

" ಹರಿ ನಾರಾಯಣ, ಹರಿ ನಾರಾಯಣ........ಹರಿ........"

ನಾರಾಯಣನು ಆಲಿಸಿ ಕೇಳಿದ.

ಗಾಳಿ ಬಡಿದು ಛಳಿ ಹೆಚ್ಚಾಗಿ ನಡಗುಹತ್ತಿದಂತೆ ನಾಮಸ್ಮರಣೆಯೂ ಹೆಚ್ಚಾಯಿತು.

" ಹರಿ ನಾರಾಯಣ, ಹರಿ ನಾರಾಯಣ, ಹರಿ........"

ಆಲಿಸಿ ಕೇಳಿದಂತೆ ನಾರಾಯಣನಿಗೆ ಈ ವಿಷಯವು ತನಗೇ ಸಂಬೋಧಿಸಿದ್ದು ಎಂದು ನಿರ್ಣಯಿಸಿಕೊಂಡ. ನಾರಾಯಣನೆಂಬುವರು ತನ್ನ ಹೊರತು ಬೇರೆ ಯಾರೂ ಅಲ್ಲಿರಲಿಲ್ಲ. ಹರಿ ಅಂದರೇನು ಎಂದು ಕೇಳಿಕೊಂಡ. ಅತ್ತಿತ್ತ ನೋಡಿದ. ಆಚಾರ್ಯರ ಧೋತರವು ಬಿಸಿಲಿನಲ್ಲಿ ಒಣಗಹತ್ತಿತ್ತು.

" ಹರಿ ನಾರಾಯಣ, ಹರಿ ನಾರಾಯಣ, ಹರಿ...."

ತಿಳಿದುಕೊಂಡ ನಾರಾಯಣ. ಹರಿದೆ ಎಂದ. ಪ್ರತಿ ' ಹರಿ ನಾರಾಯಣ ' ಕ್ಕೊ ಒಂದೊಂದರಂತೆ ಆಚಾರ್ಯರ ಧೋತರವನ್ನು ಹರಿದು ಹರಿದು ಗಾಳಿಗೆ ತೂರಿ ಬಿಟ್ಟ. ಆಚಾರ್ಯರು ಮೇಲಕ್ಕೆ ಬಂದು ನೋಡಿದಾಗ ನಾರಾಯಣನು ಹರಿಯ ಕಾರ್ಯವನ್ನು ಪೂರ್ತಿಯಾಗಿ ಮಾಡಿದ್ದ.

"ಅದೇನೋ, ನಾರಾಯಣಾ, ಧೋತರವೆಲ್ಲಿ?" ಆಚಾರ್ಯರು ನಡುಗುತ್ತ ಕೇಳಿದರು. ಆದರೆ ಅವರ ಆ ನಡುಗು ಧೋತರವು ಮಾಯವಾದುದಕ್ಕೋ, ಅಥವಾ ಛಳಿಯಿಂದಲೋ ಹೇಳಲು ಬರುವಂತಿರಲಿಲ್ಲ.

"ಪೂರ್ಣ ಹರಿಯಿತು, ಸ್ವಾಮೀ" ಎಂದು ಹೇಳಿದ ನಾರಾಯಣ.

"ಏನು ಹರಿಯಿತೋ?"

"ತಾವೇ ಹೇಳುತ್ತಿರಲಿಲ್ಲವೇ, ಸ್ವಾಮೀ, 'ಹರಿ, ನಾರಾಯಣ, ಹರಿ, ನಾರಾಯಣ' ಅಂತಾ. ಎಲ್ಲಾ ಹರಿದೇ ಹಾಕಿದೆ ಧೋತರವನ್ನು" ಎಂದು ಹೇಳಿದ.

ಸರಿ, ಆಚಾರ್ಯರಿಗೆ ಛಳಿಯು ಬಹಳವಾಗಿ ಹತ್ತಿದ್ದು ಚರ್ಚೆ ಮಾಡುತ್ತ ನಿಲ್ಲುವಂತಿರಲಿಲ್ಲ. ಇದ್ದ ಒಂದು ನೀರುಪಂಜೆಯನ್ನೇ ಉಟ್ಟುಕೊಂಡರು. ಅತ್ತ ಅನ್ನವೂ ತಯಾರಾಗಿತ್ತು. ಪುನಃ ಮಂತ್ರ ಸುರುವು ಮಾಡಿದರೆ ನಾರಾಯಣನು ಮತ್ತೇನಾದರೂ ಅನಾಹುತವನ್ನು ಮಾಡಿಬಿಟ್ಟಾನೆಂಬ ಭಯದಿಂದ ಮನಸ್ಸಿನಲ್ಲಿಯೇ ಮಂತ್ರವನ್ನು ಅಂದುಕೊಳ್ಳುತ್ತ ತಮಗೂ ನಾರಾಯಣನಿಗೂ ಎರಡು ಎಲೆಗಳನ್ನು ಹಾಕಿ ಅನ್ನವನ್ನು ತೋಡಿದರು. ಇದ್ದ ಅನ್ನವನ್ನೆಲ್ಲ ಎಲೆಯಲ್ಲಿ ತೋಡಿ ಬಿಟ್ಟರು. ಆದರೆ ಊಟಕ್ಕೆ ಕುಳಿತುಕೊಳ್ಳಲಿಲ್ಲ.

ಏಕೆಂದರೆ, ಆಚಾರ್ಯರು ಊಟಕ್ಕೆ ಕುಳಿತುಕೊಳ್ಳುವಷ್ಟರಲ್ಲಿ ನಾರಾಯಣನು ಬಡಿಸಿದ ಎರಡೂ ಎಲೆಗಳನ್ನು ಮುಟ್ಟಿ "ಇದರಲ್ಲಿ ಕೂಡಲೋ ಇದರಲ್ಲಿ ಕೂಡಲೋ" ಎಂದು ಕೇಳಿಬಿಟ್ಟ. ಸಾಲದಕ್ಕೆ ಆ ನಾಯಿ ಬೇರೆ ಅನ್ನವನ್ನು ಕಂಡು ನಾರಾಯಣನ ಪಕ್ಕದಲ್ಲಿಯೇ ಬಂದು ಕುಳಿತುಬಿಟ್ಟಿತ್ತು!

ಆಚಾರ್ಯರಿಗೆ ಏನು ಮಾಡಬೇಕೆಂಬುದು ತೋರಲಿಲ್ಲ. ಉಟ್ಟುಕೊಳ್ಳಲಿಕ್ಕೆ ಧೋತರವಿಲ್ಲದೇ ಕೇವಲ ಪಂಜೆಯನ್ನುಟ್ಟಿದ್ದರು. ಅವಲಕ್ಕಿ ಉಂಡಿಗಳೆಲ್ಲ ಮಣ್ಣಾಗಿ ಬಿಟ್ಟಿದ್ದವು. ಊಟವನ್ನಾದರೂ ಮಾಡೋಣ ಎಂದರೆ ನಾರಾಯಣ ಎರಡೂ ಎಲೆಗಳನ್ನು ನಾಯಿಯೊಂದಿಗೆ ಮುಟ್ಟಿ ಬಿಟ್ಟಿದ್ದ. ಸರಿ. ಇನ್ನು ಆದಷ್ಟು ಶೀಘ್ರವಾಗಿ

ಮಾವನ ಮನೆಗೆ ಹೋಗಿ ರಾತ್ರಿಯ ಊಟವನ್ನಾದರೂ ಮಾಡಬೇಕೆಂದು ಯೋಚಿಸಿದರು.

"ನಿನ್ನ ಊಟವನ್ನು ತೀವ್ರವಾಗಿ ಮುಗಿಸಿಕೊಂಡು ನೀನು ಮುಂದೆ ಹೋಗಿ ನಾವು ಬರುವುದು ಸ್ವಲ್ಪ ತಡವಾಗುತ್ತದೆಂದು ತಿಳಿಸು. ಬರುವಷ್ಟರಲ್ಲಿ ಊಟದ ಸಿದ್ಧತೆಯಾಗಿರಲೆಂದು ತಿಳಿಸು" ಎಂದು ಆಚಾರ್ಯರು ನಾರಾಯಣನಿಗೆ ಆಜ್ಞಾಪಿಸಿದರು. ಅವರು ಮಾವನ ಮನೆಗೆ ರಾತ್ರಿಯಾದ ಮೇಲೆಯೇ ಮುಟ್ಟಬೇಕೆಂದು ನಿರ್ಧರಿಸಿದರು. ಪಂಜೆಯನ್ನುಟ್ಟುಕೊಂಡು ಹೇಗೆ ಹೋಗುವುದು? ಜನರೇನಂದಾರೆಂಬ ನಾಚಿಕೆ, ಭಯ; ಆಚಾರ್ಯರಿಗೆ ಅಲ್ಲದೇ ಚಿಕ್ಕ ಹೆಂಡತಿ ಬೇರೆ! ಇದನ್ನೆಲ್ಲ ವಿಚಾರಿಸಿ ಆಚಾರ್ಯರು ಇಳಿಹೊತ್ತಿನ ವರೆಗೆ ತೋಟದಲ್ಲಿಯೇ ಮಲಗಿ ವಿಶ್ರಮಿಸಿಕೊಂಡು ಮುಂದೆ ಪ್ರಯಾಣ ಮಾಡಬೇಕೆಂದು ನಿರ್ಣಯಿಸಿದರು.

ನಾರಾಯಣನು ಬಡಿಸಿದ ಅನ್ನವನ್ನೆಲ್ಲ ಉಂಡು ಹೆಚ್ಚಾದ್ದನ್ನು ನಾಯಿಗೆ ತಿನಿಸಿ ಆಚಾರ್ಯರ ಆಜ್ಞೆಯಂತೆ ಅವರ ಸಂದೇಶವನ್ನು ತಿಳುಹಲಿಕ್ಕೆ ಹೊರಟು ಹೋದ.

ಅತ್ತ ಆಚಾರ್ಯರ ಮಾವನವರ ಮನೆಯಲ್ಲಿ ಅಳಿಯ ದೇವರ ಸ್ವಾಗತ ಮಾಡಲಿಕ್ಕೆ ಅನೇಕ ಬಗೆಯ ಖಾದ್ಯಪೇಯಗಳನ್ನು ತಯಾರಿಸಿಟ್ಟು ಅವರ ಮಾರ್ಗ ಪ್ರತೀಕ್ಷೆಯನ್ನೇ ಮಾಡುತ್ತ ಕುಳಿತಿದ್ದರು. ನಾರಾಯಣನು ಅವರಲ್ಲಿ ಹೋದಾಗ ಆಚಾರ್ಯರ ಮಾವನವರೇ ಅವನಿಗೆ ಭೆಟ್ಟಿಯಾದರು.

"ಏನಪ್ಪಾ ಯಾರು ನೀನು?"

"ನಾನು ಆಚಾರ್ಯಸ್ವಾಮಿಯವರ ಶಿಷ್ಯ, ಸ್ವಾಮೀ."

"ಅವರು ಬರಲಿಲ್ಲವೋ?"

"ಬರಹತ್ತಿದ್ದಾರೆ ಸ್ವಾಮೀ, ಅವರಿಗೆ ಸ್ವಲ್ಪ ಕಾಯಿಲೆಯಾಗಿದ್ದು...."

"ಅದೇನು ಕಾಹಿಲೇ?" ಮಾವನವರಿಗೆ ಚಿಂತೆಯಾಯಿತು.

"ಅಷ್ಟೇನೂ ಭಯವಿಲ್ಲ ಸ್ವಾಮೀ, ಆದರೆ ಅವರಿಗೆ ಈಗ

ನಾಲ್ಕು ದಿನಗಳಿಂದ ಅಜೀರ್ಣವಾಗಿದ್ದು ಸ್ವಲ್ಪ ಸ್ವಾಸ್ಥ್ಯವಿಲ್ಲ. ವೈದ್ಯರು ಅವರಿಗೆ ಪಥ್ಯಮಾಡಲಿಕ್ಕೆ ಹೇಳಿದ್ದಾರೆ."

ಮಾವನವರಿಗೆ ಪುನಃ ಚಿಂತೆ. ಅಳಿಯನ ಸಲುವಾಗಿ ಅನೇಕ ಖಾದ್ಯಗಳನ್ನು ತಯಾರಿಸಿಟ್ಟಿದ್ದರು.

"ಏನು ಪಥ್ಯ?"

"ಏನಿಲ್ಲ, ಸ್ವಾಮೀ. ಆಚಾರ್ಯರು ಸದ್ಯ ಕೇವಲ ನವಣಕ್ಕಿಯ ಅನ್ನ ಮತ್ತು ಹಾಗಲಕಾಯಿ ಹಾಕಿ ಗೊಜ್ಜು ಇಷ್ಟು ಮಾತ್ರ ತಿನ್ನುವುದೆಂದು ವೈದ್ಯರು ಹೇಳಿದ್ದಾರೆ. ಕಾರಣ ಅವರು ಬರುವ ಹೊತ್ತಿಗೆ ಈ ಅಡಿಗೆಯನ್ನು ತಯಾರಿಸಿ ಇಡಬೇಕು.

"ಸರಿ, ಅವರು ಬರುವುದು ಯಾವಾಗ?"

"ರಾತ್ರಿ ಹತ್ತು ಗಂಟೆಯ ಒಳಗೇ ಬರಬಹುದು, ಸ್ವಾಮೀ."

ಆಚಾರ್ಯರ ಮಾವನವರು ಊರ ತುಂಬ ತಿರುಗಿ ನವಣಕ್ಕಿಯನ್ನೂ ಹಾಗಲ ಕಾಯಿಗಳನ್ನೂ ದೊರಕಿಸಿ ತಂದರು. ಅದರಂತೆ ಮನೆಯಲ್ಲಿ ಹೇಳಿ ಅಳಿಯ ದೇವರಿಗೆ ಇವುಗಳ 'ಪಥ್ಯ'ದ ಅಡಿಗೆಯನ್ನು ತಯಾರಿಸಿದರು. ಮತ್ತು ಅವರು ಬರುವ ವೇಳೆಯನ್ನು ನಿರೀಕ್ಷಿಸುತ್ತ ಕುಳಿತುಕೊಂಡರು.

ಇತ್ತ ಆಚಾರ್ಯರು ಇಳಿಹೊತ್ತಾದನಂತರ ಕುಂಟ ಕುದುರೆಯನ್ನೇರಿ ಚಿಕ್ಕಪಂಜೆಯನ್ನುಟ್ಟು ರಾತ್ರಿ ಒಂಬತ್ತು ಗಂಟೆಯ ಸುಮಾರಿಗೆ ಮಾವನವರ ಮನೆಗೆ ಬಂದು ಮುಟ್ಟಿದರು. ಪ್ರಯಾಣದ ತೊಂದರೆಯಿಂದಲೂ, ಊಟ ತಿನುಸು ಇಲ್ಲದೆಯೂ, ನಾರಾಯಣನ ಅನಾಹುತಗಳಿಂದಲೂ ಚಿಂತಾಕ್ರಾಂತನಾದ ಅಳಿಯ ದೇವರ ಮುಖವನ್ನು ಕಂಡು ಮಾವನವರು ವಿಶೇಷ ಮಾತನಾಡಿಸದೆ ಒಳಗೆ ಕರೆದೊಯ್ದರು. ಕೈಕಾಲು ಮೋರೆ ತೊಳೆದುಕೊಂಡು ಊಟಕ್ಕೆ ಬಂದು ಕುಳಿತುಕೊಂಡರು.

ಹೊಟ್ಟೆ ಹಸಿದು ಮೃಷ್ಟಾನ್ನವನ್ನು ಉಣ್ಣಬೇಕೆಂದು ಆಚಾರ್ಯರು ಎಲೆಯನ್ನೇ ನೋಡುತ್ತ ಕುಳಿತರು. ಪಕ್ಕದಲ್ಲಿ ಕುಳಿತವರಿಗೆಲ್ಲ ವಿವಿಧವಾದ ಖಾದ್ಯವನ್ನು ತಂದು ಬಡಿಸಿ ಅಳಿಯ ದೇವರಿಗೆ ಏನೂ ಬಡಿಸದೇ ಹೋಗುತ್ತಿದ್ದರು. ಇದನ್ನು ಕಂಡು ಆಚಾರ್ಯರಿಗೆ ಭ್ರಾಂತಿ

ಯಾಯಿತು. ಆದರೂ ಹೊಸ ಅಳಿಯತನ, ಬಾಯಿಬಿಟ್ಟು ಹೇಗೆ ಕೇಳುವುದು? ಹೀಗೆ ವಿಚಾರಿಸುತ್ತ ಕುಳಿತಾಗ, ಕೊನೆಗೆ ನವಣಕ್ಕಿಯ ಅನ್ನವು ಬಂದಿತು. ಅದರೊಂದಿಗೆ ಹಾಗಲ ಕಾಯಿ ಹಾಕಿ ಮಾಡಿದ ಗೊಜ್ಜು! ಆಚಾರ್ಯರಿಗೆ ಇನ್ನಿಷ್ಟು ಭ್ರಾಂತಿಯಾಯಿತು. ಆದರೂ ವಿಷಯವು ಸೂಕ್ಷ್ಮವಾದದ್ದು. ಏನೆಂದು ಕೇಳಬೇಕು ಮಾವನವರಿಗೆ? ಹೊಟ್ಟೆಮಾತ್ರ ವಿಪರೀತವಾಗಿ ಬರಿದಾಗಿತ್ತು. ಹಸಿದರಂಬಲಿಲೇಸು ಎನ್ನುವಂತೆ ಆಚಾರ್ಯರು ನವಣಕ್ಕಿಯ ಅನ್ನವನ್ನೇ ಹಾಗಲಕಾಯಿ ಗೊಜ್ಜಿನೊಂದಿಗೆ ಹೊಟ್ಟೆತುಂಬಾ ಉಂಡುಬಿಟ್ಟರು. ಮಾವನವರಿಗೆ ಅಳಿಯ ದೇವರು ಊಟಮಾಡುವುದನ್ನು ನೋಡಿ ಇವರಿಗೆ ಎಂಥ ಅಜೀರ್ಣವಾಗಿರಬಹುದು ಎಂದು ಅಚ್ಚರಿಪಟ್ಟರು.

ನಾರಾಯಣನಿಗೆ ಅಳಿಯ ದೇವರಿಗೆ ಮಾಡಿದ ಮೃಷ್ಟಾನ್ನವೆಲ್ಲ ಸಮೃದ್ಧಿಯಾಗಿ ಭೋಜನ ದೊರಕಿತು. ಮನೆಯ ಹೊರಗಣ ಕಟ್ಟೆಯ ಮೇಲೆ ಕುದುರೆಯ ಥಡಿಯನ್ನು ತಲೆಗಿಂಬು ಮಾಡಿಕೊಂಡು ಮಲಗಿ ಬಿಟ್ಟ.

ಆಚಾರ್ಯರ ಹೆಂಡತಿ ಅಂದು ಮುಟ್ಟಾಗಿದ್ದರಿಂದ ಅವರಿಗೂ ಹೊರಗಿನ ಕಟ್ಟೆಯ ಮೇಲಿನ ಕೋಣೆಯಲ್ಲಿಯೇ ಮಲಗುವ ಪ್ರಸಂಗ ಬಂತು. ಅವರು ಕೋಣೆಯಲ್ಲಿ ಹೊಕ್ಕು ಮಲಗಿದ ನಂತರ ನಾರಾಯಣನು ಸಾವಕಾಶವಾಗಿ ಎದ್ದು ಕೋಣೆಯಲ್ಲಿಟ್ಟ ಕುಡಿಯುವ ನೀರಿನ ತಂಬಿಗೆಯನ್ನು ಹೊರಗೆ ತೆಗೆದುಕೊಂಡು ಬಾಗಿಲನ್ನು ಮುಚ್ಚಿ ಹೊರಗಿನಿಂದ ಚಿಲಕವನ್ನು ಹಾಕಿಕೊಂಡು ಮಲಗಿದ.

ಮಧ್ಯರಾತ್ರಿಯಲ್ಲಿ ಆಚಾರ್ಯರಿಗೆ ಎಚ್ಚರವಾಯಿತು. ಯಾರೋ ಅವರ ಹೊಟ್ಟೆಯಲ್ಲಿ ಹೊಕ್ಕು ಗುದ್ದಾಡುತ್ತಿರುವಂತೆ ಭಾಸವಾಯಿತು. ಪುನಃ ವಿಚಾರ ಮಾಡುವಷ್ಟರಲ್ಲಿ ಹೊಟ್ಟೆಯಲ್ಲಿಯ ನರಗಳು ಒಂದ ಕ್ಕೊಂದು ಹಿಡಿದು ಜಗ್ಗಾಡಿದಂತೆ ಅನುಭವವಾಯಿತು. ವಸ್ತುಸ್ಥಿತಿ ಯೆಂದರೆ ಹಾಳುಹೊಟ್ಟೆಗೆ ನವಣಕ್ಕಿಯ ಅನ್ನವನ್ನು ತುಂಬಿದ ಪರಿಣಾಮವಾಗಿ ಆಚಾರ್ಯರಿಗೆ ವಿಪರೀತ ಹೊಟ್ಟೆ ನೋವೂ, ಅದರ ಕೂಡ ಮಿತಿಮೀರಿದ ನೀರಡಿಕೆಯೂ ಆಗಿಬಿಟ್ಟಿತ್ತು. ಹೊಟ್ಟೆನೋವಿಗಿಂತ

ನೀರಿನ ದಾಹ ಹೆಚ್ಚಾಯಿತು. ಕತ್ತಲಲ್ಲಿ ತಡವರಿಸುತ್ತ ನೀರಿನ ತಂಬಿಗೆಯನ್ನು ಹುಡುಕಿದರು; ಅದು ಮಾಯವಾಗಿತ್ತು. ಬಾಗಿಲನ್ನು ತೆಗೆಯ ಹೋದರು; ಅದು ಬಂದಾಗಿತ್ತು.

"ನಾರಾಯಣಾ, ನಾರಾಯಣಾ" ಎಂದು ಕೂಗಿದರು.

ನಾರಾಯಣನು ಅರ್ಧ ನಿದ್ರೆಯಲ್ಲಿದ್ದು ಆಚಾರ್ಯರು ಪುನಃ ನಾಮಸ್ಮರಣೆಗೆ ಪ್ರಾರಂಭಿಸಿದ್ದಾರೆಂದು ತಿಳಿದು ಉತ್ತರ ಕೊಡಲಿಲ್ಲ.

"ನಾರಾಯಣಾ, ನಾರಾಯಣಾ!" ಗಟ್ಟಿಯಾಗಿ ಕೂಗಿದರು.

ನಾರಾಯಣನಿಗೆ ಎಚ್ಚರವಾಯಿತು.

"ಏನು ಸ್ವಾಮೀ?" ಎಂದ.

"ಬಾಗಿಲು ತೆರೆಯೋ" ಎಂದರು.

"ಏತಕ್ಕೆ, ಸ್ವಾಮೀ? ಕಳ್ಳರು-ಕಾಕರ ಉಪದ್ರ. ಸುಮ್ಮನೆ ಮಲಗಿಬಿಡಿರಿ" ಎಂದ.

"ನೀರು ಬೇಕಾಗಿದೆಯೋ ಕುಡಿಯಲಿಕ್ಕೆ" ಆಚಾರ್ಯರು ದೀನ ಸ್ವರದಲ್ಲಿ ಹೇಳಿದರು.

"ರಾತ್ರಿ ನೀರು ಕುಡಿದರೆ ಆರೋಗ್ಯಕ್ಕೆ ಒಳಿತಲ್ಲ, ಸ್ವಾಮೀ."

"ನೀರಡಿಕೆ ಬಹಳವಾಗಿದೆಯೋ, ತೆರೆದು ಬಿಡು ಬಾಗಿಲಾ" ಆಚಾರ್ಯರು ಆಜ್ಞಾಪಿಸಿದರು.

ನಾರಾಯಣ ಬಾಗಿಲು ತೆರೆದ. ಆದರೆ ತಂಬಿಗೆಯಲ್ಲಿಯ ನೀರನ್ನೆಲ್ಲ ಮುಗಿಸಿ ಬಿಟ್ಟಿದ್ದ.

"ನೀರು ಬೇಕು ಕುಡಿಯಲಿಕ್ಕೆ" ಎಂದರು.

"ಈ ಮಧ್ಯರಾತ್ರಿಯಲ್ಲಿ ಮಲಗಿದವರನ್ನು ಏನು ಎಬ್ಬಿಸುವುದು, ಸ್ವಾಮೀ. ಇಲ್ಲಿಯೇ ಮುಂದಕ್ಕೆ ಹೊಂಡವಿದೆ, ಹೋಗಿ ಕುಡಿದು ಬನ್ನಿ" ಎಂದು ನಾರಾಯಣ ಸೂಚಿಸಿದ.

ಆಚಾರ್ಯರಿಗೆ ಇದು ಸಮಂಜಸವೆನಿಸಿ ಹೊಂಡದ ಕಡೆಗೆ ನಡೆದರು.

ಆಚಾರ್ಯರು ಅತ್ತ ಹೊಂಡಕ್ಕೆ ಹೊರಟ ಕೂಡಲೇ ನಾರಾಯಣ ಲಗುಬಗೆಯಿಂದೆದ್ದು ಆಚಾರ್ಯರ ಮಾವನವರನ್ನೂ ಮನೆಯವರನ್ನೂ

ಕೂಗಿ ಎಚ್ಚರ ಪಡಿಸಿದ. ಅವರೆಲ್ಲ ಗಾಬರಿಗೊಂಡು ಎದ್ದು ಬಂದಾಗ ಹೇಳಿದ.

"ನೋಡಿ ಸ್ವಾಮೀ, ನೀವು ಅಳಿಯ ದೇವರಿಗೆ ಚೆನ್ನಾಗಿ ಪರಾಮರಿಕೆ ಮಾಡಲಿಲ್ಲವಂತೆ; ಅವರು ಕೋಪಿಸಿಕೊಂಡು ಊರಿಗೆ ಹೊರಟಿದ್ದಾರೆ ನೋಡಿ. ನನಗೆ ಎಲ್ಲ ಹೇಳಿ ಹೊರಟಿದ್ದಾರೆ. ದಯವಿಟ್ಟು ಕರೆದು ತನ್ನಿ ಅವರನ್ನು. ಆಚಾರ್ಯರು ಬಹಳ ಸಿಟ್ಟಿನವರು."

ಇದನ್ನು ಕೇಳಿ ಆಚಾರ್ಯರ ಮಾವನವರು ಗಡಿಬಿಡಿಯಿಂದ ನಾರಾಯಣನೊಂದಿಗೆ ಅಳಿಯ ದೇವರ ಬೆನ್ನು ಹತ್ತಿ ನಡೆದರು. ನಾರಾಯಣನ ನಾಯಿಯೂ ಅವರ ಕೂಡ ಹೊರಟಿತು. ಆ ನಾಯಿಗೆ ಏನು ವಿಚಾರ ಬಂದಿತೋ ತಿಳಿಯದು. ಆಚಾರ್ಯರನ್ನು ನಾರಾಯಣನು ಬೊಟ್ಟುಮಾಡಿ ತೋರಿಸಿದ ಕೂಡಲೇ ಬೊಗಳುತ್ತ ಆಚಾರ್ಯರ ಕಡೆಗೆ ಧಾವಿಸಹತ್ತಿತು. ಆಚಾರ್ಯರು ನಾಯಿಯ ಬೊಗಳನ್ನು ಕೇಳಿ ನೀರಡಿಕೆಯನ್ನು ಮರೆತು ಓಡಹತ್ತಿದರು. ಎರಡು ಮೈಲುಗಳ ವರೆಗೆ ಆಚಾರ್ಯರು ಓಡಿ ದಮ್ಮು ಹತ್ತಿ, ಮೂರ್ಛೆ ಬಂದು ಬಿದ್ದಾಗ ನಾರಾಯಣನೂ, ಮಾವನವರೂ ಅಲ್ಲಿಗೆ ಬಂದು ಮುಟ್ಟಿದರು. ಮಾವನವರು ಅಳಿಯ ದೇವರನ್ನು ಬೇಡಿಕೊಂಡು ಮನೆಗೆ ಕರೆದುಕೊಂಡು ಬಂದರು. ಅವರಿಗೆ ಪುನಃ ನೀರಿನ ತಂಬಿಗೆಯನ್ನು ತುಂಬಿಕೊಂಡು ತಂದಿಟ್ಟು ಒಳಗೆ ಹೋಗಿ ಮಲಗಿಕೊಂಡರು.

ಆಚಾರ್ಯರಿಗೆ ಈ ಎಲ್ಲ ಅನಾಹುತಗಳಿಂದ ದಿಗ್ಭ್ರಮೆಯಾದಂತಾಯಿತು. ಮಾವನವರಿಗೆ ಮುಂಜಾನೆ ಮೋರೆ ತೋರಿಸಲಿಕ್ಕೆ ಮರ್ಯಾದೆ ಸಾಲದೇ ಕತ್ತಲಿರುತ್ತಲೇ ಪುನಃ ತಮ್ಮೂರಿಗೆ ಹೊರಡುವುದನ್ನು ನಿರ್ಣಯಿಸಿದರು. ನಾರಾಯಣನನ್ನು ಬಿಟ್ಟುಕೊಟ್ಟ ಮೇಲೆಯೇ ತಮಗೆ ನಿಜವಾದ ಆಳಿಯತನವೂ, ಸೌಖ್ಯವೂ ದೊರಕಲು ಶಕ್ಯವೆಂದು ತಿಳಿದು ಕುದುರೆಗೆ ಥಡಿ ಹಾಕಲು ಹೇಳಿದರು. ಬೆಳಗಾಗುವುದರಲ್ಲಿಯೇ ಹೊರಟು ಸಾಯಂಕಾಲಕ್ಕೆ ತಮ್ಮೂರು ಸೇರಿದರು.

ನಾರಾಯಣನ ಸೇವೆಯು ಆಚಾರ್ಯರಿಗೆ ಸಾಕಾಯಿತು.

ಇನ್ನು ಗುಂಡನನ್ನು ಇಟ್ಟುಕೊಂಡರೆ ಅಣ್ಣನಿಗೆ ತಮ್ಮನು ಇದೇ ರೀತಿಯ ಸೇವೆಯನ್ನು ಸಲ್ಲಿಸಲಿಕ್ಕೆ ಹೇಳಿಕೊಡುವುದರಲ್ಲಿ ಯಾವ ಸಂಶಯವೂ ಉಳಿಯಲಿಲ್ಲವಾದ್ದರಿಂದ ನಾರಾಯಣನನ್ನು ಕರೆದು ಹೇಳಿದರು.

"ನಾರಾಯಣಾ, ಇನ್ನು ನಿನ್ನ ನೌಕರೀ ಸಾಕು ನಮಗೆ. ನಿನ್ನ ತಿಂಗಳ ಪಗಾರವನ್ನೂ ಕೊಟ್ಟು ಬಿಡುತ್ತೇನೆ." ಎಂದು ಹೇಳಿದರು.

"ಅದೇನು, ಸ್ವಾಮೀ? ಎರಡೇ ದಿನಗಳಲ್ಲಿ ಸಾಕಾಯಿತೇ? ಮತ್ತೆ ನೀವು ನಿಮ್ಮಲ್ಲಿ ನೌಕರರೇ ನಿಲ್ಲುವುದಿಲ್ಲವೆಂದು ಹೇಳಿ ಏನೇನೋ ಕರಾರುಗಳನ್ನು ಹೇಳಿದ್ದಿರಿ, ನೆನಪುಂಟೋ?"

"ಇದೆ, ನಾರಾಯಣಾ. ಆದರೂ ಸದ್ಯ ನಾವು ಯಾತ್ರೆಗೆ ಹೊರಡಬೇಕಾಗಿದೆ. ಅಂತೆಯೇ ನೀನು ಇಂದಿನಿಂದ ಬೇಕಾಗಿಲ್ಲ.

"ಅದೆಲ್ಲಾ ಸರಿ, ಸ್ವಾಮೀ, ದಂಡಾ?"

"ಯಾವ ದಂಡವೋ?"

"ನೌಕರೀ ಸಾಕೆಂದವರು ನೂರು ರೂಪಾಯಿ ದಂಡ ಕೊಡಬೇಕೆಂದು ಕರಾರಿಲ್ಲವೇ?"

ಆಚಾರ್ಯರು ವಿಚಾರಿಸಿದರು. ದಂಡ ತಪ್ಪಿದ್ದಲ್ಲವಾಗಿ ಕಂಡು ಬಂತು.

"ಆಗಬಹುದು, ದಂಡವನ್ನು ಕೊಡುತ್ತೇವೆ."

"ಬಂದು ಬಿಡಲಿ" ಎಂದ ನಾರಾಯಣ.

ಆಚಾರ್ಯರು ನೂರು ರೂಪಾಯಿ ತಂದು ಎಣಿಸಿದರು.

"ಮತ್ತೆ ಶಿಕ್ಷಾ, ಸ್ವಾಮೀ?"

"ಅದಾವ ಶಿಕ್ಷೆಯೋ?"

"ಕತ್ತೆಯ ಮೇಲೆ ಕುಳಿತು ಸುತ್ತು ಹಾಕುವುದು?"

ಆಚಾರ್ಯರಿಗೆ ಬಿಗುಹಿನ ಸಮಸ್ಯೆ ಬಂತು.

"ಇಲ್ಲಿ ಕೇಳು, ನಾರಾಯಣ ಆ ಶಿಕ್ಷೆಯ ಬದಲು ಇನ್ನೊಂದು ನೂರು ರೂಪಾಯಿ ಕೊಟ್ಟರೆ ಆದೀತೋ?"

"ಆಗಬಹುದು, ಸ್ವಾಮೀ. ನಾವು ಬಡವರು. ನಿಮ್ಮ ಮರ್ಯಾದೆ

ಹೋದಕ್ಷಣಕ್ಕೆ ನಮ್ಮ ಹೊಟ್ಟೆ ತುಂಬಬಹುದೇ ? ಹಣವನ್ನೇ ಕೊಡಿ" ಎಂದ.

ಆಚಾರ್ಯರು ಅತ್ಯಾನಂದದಿಂದ ಮತ್ತೊಂದು ನೂರು ರೂಪಾಯಿ ತಂದು ಎಣಿಸಿದರು. ನಾರಾಯಣನು ಆಚಾರ್ಯರಿಗೆ ನಮಸ್ಕರಿಸಿ ಗುಂಡನಲ್ಲಿ ಹೊರಟು ಬಂದ.

"ಇಲ್ಲಿ ನೋಡು ಗುಂಡಾ, ಆಚಾರ್ಯರ ದಂಡಾ!" ಎಂದು ರೂಪಾಯಿಗಳನ್ನು ಕೊಟ್ಟು ತನ್ನ ಸೇವಕ ವೃತ್ತಿಯ ವೃತ್ತಾಂತವನ್ನು ಸಾದ್ಯಂತವಾಗಿ ಗುಂಡನಿಗೆ ಹೇಳಿದ. ಇದನ್ನು ಕೇಳಿದ ಅಂಗಡಿಕಾರನು ನಾರಾಯಣನ ಚತುರತೆಗೆ ಮೆಚ್ಚಿ ಅವನಿಗೂ ತನ್ನ ಅಂಗಡಿಯಲ್ಲಿಯೇ ಕೆಲಸವನ್ನು ಕೊಟ್ಟ. ಅಂದಿನಿಂದ ಉಭಯ ಬಂಧುಗಳೂ ಸುಖವಾಗಿದ್ದುಕೊಂಡರಂತೆ. ಬಂಧುಪ್ರೇಮವೆಂದರೆ ಹೀಗಿರಬೇಕಲ್ಲವೇ, ಸ್ವಾಮೀ ?" ಎಂದು ನಾಗಪ್ಪ ಕೇಳಿದ.

"ಮೋಜಿನ ಬಂಧು-ಪ್ರೇಮ, ನಾಗಪ್ನೋರೆ ಇದೊಂದು." ಎನ್ನುತ್ತ ಗಿರಾಕಿಗಳು ನಾರಾಯಣನ ಚತುರತೆಗೆ ತಲೆದೂಗುತ್ತ ತಮ್ಮ ತಮ್ಮ ಸ್ಥಳಗಳಿಗೆ ಹೊರಟು ಹೋದರು.

ಮಧ್ಯಾಹ್ನದ ಊಟಕ್ಕೆ ವೇಳೆಯಾಗಿದ್ದು ನಾಗಪ್ಪನೂ ಡಿಕ್ಕಿಯೊಂದಿಗೆ ಮನೆಗೆ ತೆರಳಿದ.

**ಓದಿ ಸವಿಯಲು ನೆರವು**

# ೧. ನಾಗಣ್ಣನ ಕತೆ

ನೀವು ಅಜ್ಜಿಯಿಂದ ಕತೆ ಕೇಳಿಲ್ಲವೆ? ಅಡುಗಲಜ್ಜಿಗಳ ಕತೆ ಓದಿಲ್ಲವೆ? ಹಿಂದಕ್ಕೆ 'ಅಜ್ಜಿ'ಗಳೂ ಮನೆಯ ಹಿರಿಯರೂ ಚಿಕ್ಕ ಮಕ್ಕಳನ್ನು ಸುತ್ತಲೂ ಕೂರಿಸಿಕೊಂಡು, ಅವರಿಗೆ ಮನಸೆಳೆವ ಕತೆಗಳನ್ನು ಹೇಳುವುದು ವಾಡಿಕೆಯಾಗಿತ್ತು. ಇಲ್ಲಿ ಆ ಕೆಲಸ ನಾಗಣ್ಣನ ಪಾಲಿಗೆ ಬಂದಿದೆ. ಇಂತಹ ವ್ಯಕ್ತಿಗಳು ಹಳ್ಳಿಗಳಲ್ಲಿ ಈಗಲೂ ಅಪರೂಪವಲ್ಲ. ಇಂತಹ ಮಾತಿನ ಮೋಡಿಕಾರರು ತಮ್ಮ ಸೊಲ್ಲಿನ ಸೊಗಸಿನಿಂದ, ಮಾತಿನ ಮಾಟದಿಂದ ಹಿರಿಕಿರಿಯರನ್ನೆಲ್ಲ ಮರುಳುಗೊಳಿಸಿ ತಮ್ಮ ಸುತ್ತಲೂ ಯಾವಾಗಲೂ ಮುತ್ತುವಂತೆ ಮಾಡುವರು. ಇಂತಹ ಒಂದು ಆಸಾಮಿ ನಾಗಣ್ಣ.

ಈ ಕತೆಯ ವೈಶಿಷ್ಟ್ಯ ಒಂದು ವಿಚಾರ ಪ್ರಚೋದಕ ನಗು. ಪಿಸು ನಗುವಲ್ಲ; ಮೆಲ್ಲನೆ ಮನವನು ಮುಟ್ಟಿ, ತಟ್ಟಿ ಎಚ್ಚರಿಸುವ ನಗು.

ಇರಬೇಕಾದ ಸಂಗತಿಗಳಲ್ಲಿ ವೈಚಿತ್ರ್ಯ, ವಿಪರೀತಗಳನ್ನು ಕಂಡಾಗ ನಗುವು ತಲೆದೋರುತ್ತದೆ. ಹಾಗಾದರೆ ಈ ಕತೆಯಲ್ಲಿ ನಗೆ ಬರುವ ಎಡೆಗಳನ್ನು ಎತ್ತಿ ಹೇಳಿರಿ. ಮೆಚ್ಚಿ, ಒಲಿದು, ನಲಿದು, ಒಬ್ಬರೊಬ್ಬರ ಕೈಹಿಡಿದವರು ಕೊನೆಯ ವರೆಗೂ—ಇಹಲೋಕದಂತೆ ಪರಲೋಕದಲ್ಲಿಯೂ ಕೂಡಿರಿ; ಎಂಬ ಲೋಕವೆಲ್ಲವೂ ಒಪ್ಪುವ ಒಂದು ಸಾದಾ

ಹರಕೆಯು ಮಾತು, ಇಷ್ಟು ವೈಚಿತ್ರ್ಯಕ್ಕೆ ಕಾರಣವಾದೀತೆಂದು ಯಾರೂ ಎಣಿಸಿರಲಿಕ್ಕಿಲ್ಲ! ಆದರೆ ಆ ಹರಕೆಯೂ ಎನಿತೊಂದು ತೊಡಕಿಗೆ ಕಾರಣವಾಗಬಲ್ಲುದೆಂಬುದನ್ನು ಬಹಳ ಸೊಗಸಾಗಿ ಈ ಕತೆಯಲ್ಲಿ ತೋರಿಸಲಾಗಿದೆ.

ಈ ತೊಡಕನ್ನು ನೋಡಿ ಉಂಟಾಗುವ ನಗುಹೊಟ್ಟೆ ಹುಣ್ಣಾಗಿಸುವ 'ಖೋಖೊ ಎಂಬ ಕೊಳ್ಳನೆ ಗೊಳ್ಳು ನಗೆಯಲ್ಲ. ಬಗೆಯನ್ನು ಅರಳಿಸುವ ಮುಗುಳು ನಗೆ. ಅತ್ತಿಂದ ಒಂದು ಹೆಣ್ಣು, ಇತ್ತಿಂದ ಒಂದು ಗಂಡು ತಂದು ಕೈ ಕೈ ಹಿಡಿಸಿ, ಅಕ್ಕಿಕಾಳು ಚೆಲ್ಲಿ, ಉಂಡು ತೇಗಿದರೆ ಮದುವೆಯಾಗಲಿಲ್ಲ. ದೇಹಗಳು ಹತ್ತಿರ ಬಂದರೆ ಮುಗಿಯಲಿಲ್ಲ. ಮನಸು ಒಂದಾಗಬೇಕು. ಮನಸು ಹರದಾರಿ ದೂರವಿದ್ದು ದೇಹಗಳು ಹತ್ತಿರ ಬಂದರೆ ಮುಗಿಯಲಿಲ್ಲ. ಮನಸು ಒಂದಾಗಬೇಕು. ಜೀವ ಸಮರಸವಾಗಬೇಕು. ಮನಸು ಹರದಾರಿ ದೂರವಿದ್ದೂ ದೇಹಗಳು ನೆರೆಯಲ್ಲಿರಬಹುದು. ಇಂತಹ ಮದುವೆಗಳು ಮದುವೆಯೇ? ಎಂಬ ಒಂದು ವಿಚಾರವನ್ನು ಜಾಗೃತಗೊಳಿಸುವ ಸೊಗಸಾದ ಕತೆಯಿದು.

ವರ್ಷಾಶನ; ವಿಶ್ರಾಂತಿಗೃಹ; ವಾಮಕುಕ್ಷಿ; ಏಕಪತ್ನೀವ್ರತ, ಈ ಶಬ್ದಗಳ ಪ್ರತಿಪದಾರ್ಥವನ್ನು ಹೇಳಿರಿ.

'ಡಿಕ್ಕಿ ಬರಹೋಗುವವರ ಕೈ-ಬಾಯಿಗಳನ್ನು ನಿರೀಕ್ಷಿಸುತ್ತ ಕುಳ್ಳಿರುತ್ತಿದ್ದಿತು. ಏಕೆ? ( ಪು. ೪ )

'ಡಿಕ್ಕಿಯ ಮೋರೆ ನೋಡಿದವರಿಗೆ ........ ಹಾಗಿತ್ತು.' ಎಂದರೇನು? ( ಪು. ೫ )

ಸರ್ವಜ್ಞನ ಸುಖದ ಕಲ್ಪನೆ ಏನು? ನಿಮಗೆ ಏನು ದೊರೆತರೆ ಸುಖ ಎಂಬುದನ್ನು ವಿಚಾರಿಸಿರುವಿರಾ? ಇಂದಿನ ನಿಮ್ಮ ಸುಖದ ಕಲ್ಪನೆ ನಿಮ್ಮ ದಿನದ ನೆನಹಿಯಲ್ಲಿ ( ಡೈರಿ ) ಬರೆದಿಡಿರಿ. ಮುಂದೆ ಅದು ಹೇಗೆ ಮತ್ತು ಏಕೆ ಬದಲಾಗುವುದೆಂಬುದನ್ನು ನಿರೀಕ್ಷಿಸುತ್ತಿರಿ.

## ಬರೆದು ನೋಡಿ

೧ ಅ. ನಿಮ್ಮ ಊರ ಒಬ್ಬ ವಿಶ್ರಾಂತಿ ವೇತನ ( ಪೇನಶನ್ ) ಪಡೆದ ವೃದ್ಧನ ಚಿತ್ರ.

ಬ. ನಿಮ್ಮ ಓಣೆಯ ಎಲ್ಲರ ಬಾಯಲ್ಲಿ ಇರುವ ಒಂದು ವ್ಯಕ್ತಿ.

ಕ. ಹರಟೆಯ ಆನಂದದ ಒಂದು ದಿನ.

ಇವುಗಳಲ್ಲಿ ಒಂದನ್ನು ಕುರಿತು ಬರೆಯಿರಿ.

೨ ವಿಶ್ರಾಂತಿ ಗೃಹಗಳು ಅವಶ್ಯಕವೆಂದೂ, ಅನವಶ್ಯಕವೆಂದೂ ಎರಡು ಬದಿಯಿಂದಲೂ ನಿಮ್ಮ ಅಭಿಪ್ರಾಯಗಳನ್ನು ಬೇರೆ ಬೇರೆಯಾಗಿ ವಿವರಿಸಿರಿ.

೩ ಅ. ಕುನ್ನಿ, ಪಿಳ್ಳೆ, ಮರಿ, ಕಂದ, ಕಳಿಗೆ, ಮಗು, ಪಡ್ಡೆ ಇವುಗಳನ್ನು ಉಪಯೋಗಿಸಿ ವಾಕ್ಯಗಳನ್ನು ಬರೆಯಿರಿ.

ಬ. ತರುಣ, ಮಗ, ಮುದುಪ, ಕಂದ, ಹುಡುಗ, ಪಸುಳೆ, ಕೂಸು ಇವುಗಳನ್ನು ವಯಸ್ಸಿನ ಏರಿಕೆಯ ಕ್ರಮದಲ್ಲಿ ಬರೆಯಿರಿ.

೨೦೩

---

## ೨ ಪಾತ್ರ ಪಟು

೧ ಈ ಕತೆಯಲ್ಲಿ ಮನವನ್ನು ಸೆಳೆವ ಭಾಗಗಳನ್ನು ಗುರುತಿಸಿ ಹೇಳಿರಿ.

೨ 'ನಿಮ್ಮ ತಂದೆ ಪ್ರಾಮಾಣಿಕನೋ ?' 'ಅಹುದು; ಅಹುದು; ಅದರಲ್ಲೇನಿದೆ ಸಂದೇಹ ? ....... ನಮ್ಮೂರ

ಮುನಸಿಪಲ್ ಚುನಾವಣೆಗೆ ನಿಂತಾಗ ( ಆತನು ) ಆರಿಸಿ ಬರಲಿಲ್ಲ! '

ಆಗ ಕಿಕ್ಕಿರಿದು 'ನೆರೆದ ಜನರೆಲ್ಲ ಗಹಿಗಹಿಸಿ ನಕ್ಕರಂತೆ. ಇಲ್ಲಿ ನಗುವುಂಟಾಡುದೇಕೆ?

೩ ಅನುಕರಣವು ಸ್ತುತಿಯ ಒಂದು ವಿಶೇಷ ಪ್ರಕಾರವೆಂಬುದನ್ನು ಸ್ಪಷ್ಟೀಕರಿಸಿರಿ.

೪ ಈ ಕತೆಯಲ್ಲಿ ನಗೆಯ ಎಡೆಗಳನ್ನು ಕಂಡು ಹಿಡಿಯಿರಿ. ಉದಾ: ಸುಬ್ಬೂನ ಅಕ್ಷರಗಳು ( ಪು. ೨೧ ) ಮುಂತಾದುವು.

೫ ಸುಬ್ಬೂನಿಗೆ ಅಂಗಡಿಯೊಡೆಯನು ಮೆಚ್ಚು ಕೊಟ್ಟುದು ಏಕೆ?

೬ ಜಾನಕಿ ಪರಿಣಯದ ವಿದೂಷಕನ ವಿನೋದದಲ್ಲಿರುವ ಅನೌಚಿತ್ಯ ಮತ್ತು ಸುಬ್ಬೂನ ವಿನೋದ ಬುದ್ಧಿಯ ಔಚಿತ್ಯವನ್ನು ಸ್ಪಷ್ಟೀಕರಿಸಿರಿ.

---

## ೩ ಬಂಧು-ಪ್ರೇಮ

೧ ಇವು ಮೂರೂ ಹರಟೆಯಲ್ಲಿ ಹೊರಟ ಕತೆಗಳು; ಆದರೆ ಪ್ರತಿಯೊಂದರ ಆರಂಭವೂ ಬೇರೆ ತೆರನಾಗಿರುವುದನ್ನು ವಿಮರ್ಶಿಸಿರಿ.

ಪಂಚತಂತ್ರದ ಒಂದು ಕತೆಯಿಂದ ಇನ್ನೊಂದು ಕತೆಗೆ ಆರಂಭವಾಗುವ ಬಗೆಯನ್ನು ಇದರೊಡನೆ ಹೋಲಿಸಿರಿ. ಇವೆರಡರಲ್ಲಿ ಯಾವುದು ಸರಸ? ಏಕೆ?

೨ 'ಬಂಧು-ಪ್ರೇಮ' ಎಂಬ ಹೆಸರು ಈ ಕತೆಗೆ ಹೇಗೆ ಸಾರ್ಥಕವಾಗಿದೆ?

೩ ಕೆಳಗಿನ ವಿಷಯಗಳಲ್ಲಿ ಒಂದನ್ನು ಕುರಿತು ಬರೆಯಿರಿ,

೧. ಗಿರಣಿ ಕೂಲಿಕಾರ.

೨. ವಾರದ ವಿದ್ಯಾರ್ಥಿ.

೩. ಅನಾಥ ಬಾಲವಿಧವೆ.

೪ ಶ್ರೀ. ಆರ್. ನರಸಿಂಹಾಚಾರ್ಯರ 'ನಗೆಗಡಲು' ಮತ್ತು ಶ್ರೀ. ಪಂ. ಮಂಗೇಶರಾಯರ 'ರಂಗ ಶೆಟ್ಟಿ' ಕವಿತೆ ( John Gylpin ) ಓದಿರಿ. ಹೋಲಿಸಿರಿ.

೫ ಜನರನ್ನು ಒಲಿಸುವುದಕ್ಕೂ ನಲಿಸುವುದಕ್ಕೂ ನಗೆಯು ನೆರವಾಗುವಂತೆ, ಲೋಕದ ನಡೆವಳಿಯನ್ನು ತಿದ್ದುವುದಕ್ಕೂ ಇದು ಒಂದು ಮಿಗಿಲಾದ ಸಾಧನವಾಗಿದೆ, ಎಂಬುದನ್ನು ನೀವು ಓದಿದ ಈ ಮೂರು ಕತೆಗಳಲ್ಲಿ ಬಂದಿರುವ ಪ್ರಸಂಗಗಳಿಂದಲೂ ನೀವು ಓದಿದ ಬೇರೆ ಕತೆ ಕಾದಂಬರಿಗಳ ಉದಾಹರಣಗಳಿಂದಲೂ ವಿಶದ ಪಡಿಸಿರಿ.